
# ಅನುದಿನದ ಆಹಾರ




March 2018

Tree - 19
Fruit - 3
Pages - 44

Annual Subscription Rs. 100/-
Single Copy Rs. 10/-

**ನಿಮ್ಮ ಚಂದಾವನ್ನು ನವೀಕರಿಸಿದ್ದೀರಾ?**




**ಒಂದು ವರ್ಷಕ್ಕೆ ಈ ರೀತಿಯ 12 ವಿವಿಧ ಪ್ರತಿಗಳನ್ನು ಕಳುಹಿಸುತ್ತೇವೆ**

## ರೂ. 100/-

ಈ ಧ್ಯಾನ ಪುಸ್ತಕವು ನಿಮಗೆ ದಿನನಿತ್ಯವು ಆಶೀರ್ವಾದ ನೀಡಿ, ಬಲಪಡಿಸುತ್ತಿದೆ ಎಂದು ನಾನು ನಂಬುತ್ತೇನೆ. ಈ ಅಮೂಲ್ಯ ಪ್ರತಿಯನ್ನು ನೀವು ಒಬ್ಬರಿಗಾದರು ಪರಿಚಯಿಸಿ ಅವರ ವಿಳಾಸವನ್ನು ನಮಗೆ ಕಳುಹಿಸಿ.

**ಒಂದು ವ್ಯಕ್ತಿಗಾದರು ಈ ಮಾಸಿಕ ಪತ್ರಿಕೆಯನ್ನು ಪರಿಚಯಿಸುವೆನು ಎಂದು ಒಂದು ದೃಢ ನಿರ್ಧಾರವನ್ನು ಮಾಡಿರಿ**

ಈ ಮೂಲಕ ನೀವು ಮಾಡುವ ಸೇವೆಗೆ ನಿಶ್ಚಯವಾಗಿ ಪ್ರತಿಫಲ ಉಂಟು.

**ದೇವರ ರಾಜ್ಯಕ್ಕಾಗಿ ನೆರವಿನ ಹಸ್ತವನ್ನು ನೀಡಿರಿ**
**ಪರಲೋಕದಿಂದ ನಿಮಗೆ ವಿಶೇಷವಾದ ಆಶೀರ್ವಾದಗಳು ಉಂಟು**

**ಸತ್ಯವೇದದಲ್ಲಿ ಲೂಕ 6:38 ಬರೆದಿದೆ "ಕೊಡಿರಿ, ಆಗ ನಿಮಗೂ ಕೊಡುವರು ... ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು"**

ಈ ಉನ್ನತ ಸೇವೆಗಾಗಿ ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ ಕಾಣಿಕೆಗಳನ್ನು ಬಿತ್ತಿ ಕರ್ತನಿಂದ ನೂತನ ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

**Account Name: ANUDHINADA AHARA**
**SBI Bank: 34706509264 IFSC Code: SBIN0005778**

# ಅನುದಿನದ ಆಹಾರ
## Anudhinada Ahara

ಮಾರ್ಚ್ 2018 MARCH

ಮರ 19 ಹಣ್ಣು 03 Tree 19 Fruit 03


## ಶಿಲುಬೆ ಮತ್ತು ದೀನತೆ!

ಯೆಹೂದ್ಯರಲ್ಲಿ ಶಿಲುಬೆಯು ಅವಮಾನದ ಚಿಹ್ನೆಯಾಗಿತ್ತು. ಅಂದಿನ ರೋಮಾಯ ಸರ್ಕಾರ ಅಪರಾಧಿಗಳಿಗೆ ನೀಡುತ್ತಿದ್ದ ಅತಿ ಘೋರವಾದ ಶಿಕ್ಷೆಯೆಂದರೆ ಶಿಲುಬೆಯಲ್ಲಿ ಅಪರಾಧಿಯನ್ನು ಮೊಳೆಗಳಿಂದ ಜಡಿದು ಕೊಲ್ಲುವದು, ಅಂಥಹ ಘೋರ ಶಿಕ್ಷೆಗೆ ರಕ್ಷಕನಾಗಿ ಈ ಭೂಮಿಗೆ ಇಳಿದು ಬಂದಂಥ ದೇವಕುಮಾರನೂ, ಕರ್ತರ ಕರ್ತನೂ ಅದಂಥ ಯೇಸುಕ್ರಿಸ್ತನನ್ನು ಯೆಹೂದ್ಯರು ಒಪ್ಪಿಸಿಕೊಟ್ಟರು. ಎಂಥಹ ವಿಪರ್ಯಾಸ.

ತನ್ನ ಏಕಕುಮಾರನಾದ ಯೇಸುಕ್ರಿಸ್ತನು ಈ ಲೋಕದ ಜನರ ಪಾಪ ನಿವಾರಣಾರ್ಥವಾಗಿ ಯಜ್ಞದ ಕುರಿಮರಿಯಾಗಿ ವಧಿಸಲ್ಪಡಬೇಕಾದದ್ದು ತಂದೆ ದೇವರ ಚಿತ್ತವಾಗಿತ್ತು. ಯೇಸುವನ್ನು ಕುರಿಮರಿ ಎಂದು ಸತ್ಯವೇದದಲ್ಲಿ ಸೂಚಿಸಿರುವದು. ಇದಕ್ಕೆ ಕಾರಣವೇನು? ಆತನು ಈ ಲೋಕಕ್ಕೆ ಬಂದ ಉದ್ದೇಶ ಕುರಿಮರಿಯದ್ದಾಗಿತ್ತು. ಒಬ್ಬ ಇಸ್ರಾಯೇಲ್ಯನು ತಾನು ಪಾಪಮಾಡಿದ್ದೇನೆಂದು ಗೊತ್ತಾದಾಗ, ಕೂಡಲೆ ದೇವರೊಂದಿಗೆ ಒಂದಾಗಲು ಒಂದು ಕುರಿಮರಿಯನ್ನಾಗಲಿ, ಆಡನ್ನಾಗಲಿ ಬಲಿಯಾಗಿ ಅರ್ಪಿಸಲು ತರುವನು. ಅದನ್ನು ವಧಿಸಿದ ಮೇಲೆ ಅದರ ರಕ್ತವನ್ನು ಯಜ್ಞವೇದಿಯ ಮೇಲೆ ಚಿಮುಕಿಸುವನು. ಯಜ್ಞಕ್ಕೆ ಅರ್ಪಿತವಾದ ಕುರಿಮರಿಯ ನಿಜವಾದ ಅರ್ಥವನ್ನು ಯೇಸು ತನ್ನ ಮರಣದ ಮೂಲಕ ತೋರಿಸಿಕೊಟ್ಟನು. ಆತನು ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯಾಗಿದ್ದನು (ಯೋಹಾ 1:29).

ಯೇಸುವನ್ನು ಕುರಿಮರಿ ಎಂದು ಸಂಬೋಧಿಸಲು ಇರುವ ಇನ್ನೊಂದು ಕಾರಣವೆಂದರೆ, ಆತನಲ್ಲಿದ್ದಂಥ ಕುರಿಮರಿಯ ಸ್ವಭಾವ. ಆತನು ಕುರಿಮರಿಯಂತೆ ದೀನ ಮನಸ್ಸುಳ್ಳವನೂ, ಸಾತ್ವಿಕನೂ ಆಗಿದ್ದನು. ಜನರು ರಕ್ಷಣೆ ಹೊಂದಿ ಆಶೀರ್ವಾದ ಪಡೆಯುವಂತೆ ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು. ನನ್ನ ಚಿತ್ತದಂತೆ ನಾನು ನಡೆಯುವದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿಕೊಟ್ಟಾತನ ಚಿತ್ತವನ್ನೇ ನೆರವೇರಿಸುವದಕ್ಕೆ ಪರಲೋಕದಿಂದ ಬಂದೆನು (ಯೋಹಾ 6:38) ಎಂದು ಹೇಳುವನು. ಆತನು ಕುರಿಮರಿಯ ಸ್ವಭಾವ ಇಲ್ಲದವನಾಗಿ ಬಂದಿದ್ದರೆ, ತನ್ನನ್ನು ಹಿಂಸಿಸಿ ಕ್ರೂಜೆಗೆ ಹಾಕಿದವರಿಗೆ ಪ್ರತೀಕಾರ ಸಲ್ಲಿಸುತ್ತಿದ್ದನು. ಆದರೆ ಆತನು ದೀನ ಮನಸ್ಸುಳ್ಳವನಾಗಿ ವಿಧೇಯ ಮಾರ್ಗವನ್ನನುಸರಿಸಿದನು. ಕ್ರೂಜೆಯಲ್ಲಿ ಮರಣವನ್ನಪ್ಪಿದನು.

ಯೇಸುಕ್ರಿಸ್ತನು, ತಂದೆಯನ್ನು ಪ್ರೀತಿಸಿದನು ಮತ್ತು ನಮ್ಮನ್ನೂ ಪ್ರೀತಿಸಿದನು. ಆದದರಿಂದಾಗಿ ಹಿಂಸೆ ಶ್ರಮಗಳನ್ನೆಲ್ಲಾ ಸಹಿಸಿಕೊಂಡನು, ತನ್ನನ್ನು ತಾನೇ ಹಿಂಸಿಸುವವರ ಕೈಗೆ ಒಪ್ಪಿಸಿಕೊಟ್ಟನು. 'ಆತನು ಬಾಧೆಯನ್ನು ಅನುಭವಿಸಿದಾಗ, ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು (1ಪೇತ್ರ 2:23). ಆತನು ತನ್ನ ಹಕ್ಕುಗಳನ್ನು ಸಾಧಿಸಲಿಲ್ಲ. ಪ್ರತಿಭಟಿಸಲಿಲ್ಲ, ಗುಣುಗುಟ್ಟಲಿಲ್ಲ ಹಗೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಲಿಲ್ಲ. ಜನರ ಪಾಪನಿವಾರಣೆಗಾಗಿ ತಾನು ಶಿಲುಬೆಯಲ್ಲಿ ಜಜ್ಜಲ್ಪಡುವದು ತಂದೆಯ ಚಿತ್ತವೆಂದು ಆತನು ಅರಿತವನಾದುದರಿಂದ ಮರಣಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು, ಒಂದು ಕುರಿಮರಿಯೋಪಾದಿಯಲ್ಲಿ ವಧಿಸಲ್ಪಟ್ಟನು.

ಯೆಶಾಯನು ಆತನ ವಿಚಾರವಾದ ಪ್ರವಾದನೆಯಲ್ಲಿ, ಆತನನ್ನು ಕುರಿಮರಿ ಎಂದು ಬಣ್ಣಿಸಿದನು (ಯೆಶಾ 53:7). ಜನರು ಆತನಿಗೆ ಛಡಿ ಏಟುಗಳನ್ನು ಕೊಟ್ಟರು, ಅಪಹಾಸ್ಯಮಾಡಿದರು, ಮುಖದ ಮೇಲೆ ಉಗುಳಿದರು ಗಡ್ಡದ ಕೂದಲನ್ನು ಕಿತ್ತರು ಭಾರವಾದ ಮರದ ಕ್ರೂಜೆಯನ್ನು ಆತನ ಹೆಗಲಿನ ಮೇಲೆ ಹೊರಿಸಿ ಕಲ್ವಾರಿ ಬೆಟ್ಟಕ್ಕೆ ಹೊತ್ತುಕೊಂಡು ಹೋಗುವಂತೆ ಮಾಡಿದರು. ಅಲ್ಲಿ ಆತನ ಕೈಕಾಲುಗಳನ್ನು ಶಿಲುಬೆಗೆ ಮೊಳೆಗಳಿಂದ ಜಡಿದರು. ಯೇಸುಕ್ರಿಸ್ತನು ಕುರಿಮರಿಯಾಗಿದ್ದದರಿಂದ ಇವೆಲ್ಲಾ ಆತನಿಗೆ ಸಂಭವಿಸಿತು. ನಮ್ಮ ಪಾಪದ ಸಂಬಳವಾದ ಮರಣವನ್ನು ಕ್ರಿಸ್ತನು ದೇವರ ಕುರಿಮರಿಯಾಗಿ ಶಿಲುಬೆಯಲ್ಲಿ ಅನುಭವಿಸಿ, ಆದಿ ತಂದೆ ತಾಯಿಯಾದ ಆದಾಮ ಹವ್ವರ ಅವಿದೇಯತೆಯಿಂದಾಗಿ ಮಾನವನು ತಂದೆ ದೇವರೊಂದಿಗೆ ಕಳೆದುಕೊಂಡ ಸಂಬಂಧವನ್ನು ಪುನಃ ಸ್ಥಾಪಿಸಿದನು.

ಕ್ರಿಸ್ತನ ರಕ್ತದ ಹಾಗೂ ತ್ಯಾಗದ ಸತ್ಯಾಂಶಗಳನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳೋಣ. ಆತನ ರಕ್ತಕ್ಕೆ ಅಂಥಾ ಶಕ್ತಿಯು ಬರಲು ಕಾರಣವೇನು? ಅಪೊ.ಪೌಲನು ಇಬ್ರಿಯರಿಗೆ ಬರೆಯುವಾಗ, 'ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗಿರುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ? ಎಂದು ಬರೆಯುತ್ತಾನೆ (ಇಬ್ರಿ 9:14). ದೇವರು ತನ್ನ ಮಕ್ಕಳಿಂದ ಬಯಸುವದು, ವಿಧೇಯತೆಯನ್ನೇ ಹೊರತು ಬೇರೆ ಏನನ್ನೂ ಬಯಸುವದಿಲ್ಲ. ಯೇಸುಕ್ರಿಸ್ತನು ದೇವರಿಗೆ ಒಳಗಾಗಿ ಜೀವಿಸಲು ಈ ಭೂಮಿಗೆ ಬಂದನು. ತಂದೆಯು ತನ್ನ ಮಗನು ಯಾವಾಗಲೂ ವಿಧೇಯನಾಗುವದನ್ನು ನೋಡಿ 'ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ' ಎಂದು ಹೇಳಿದನು (ಮತ್ತಾ 3:17). ತಂದೆಯ ಚಿತ್ತಕ್ಕೆ ವಿಧೇಯನಾಗಿ ತನ್ನ ರಕ್ತವನ್ನು ಕ್ರೂಜೆಯ ಮೇಲೆ ಸುರಿಸಿದನು. ಆದುದರಿಂದ ಆತನ ರಕ್ತವು ದೇವರಿಗೆ ಅತ್ಯಂತ ಅಮೂಲ್ಯವಾಯಿತು ಮತ್ತು ಜನರ ಪಾಪವನ್ನೆಲ್ಲಾ ವಿಮೋಚಿಸಲು ಶಕ್ತವಾಯಿತು.

ನಮ್ಮ ಜೀವಿತದಲ್ಲಿ ಕ್ರಿಸ್ತನ ರಕ್ತದ ಮಹಿಮೆಯನ್ನು, ಶಕ್ತಿಯನ್ನು ಹೇಗೆ

ಅನುಭವಕ್ಕೆ ತಂದುಕೊಳ್ಳುವದು? ಎಂಬುದೇ ನಮ್ಮ ಮುಂದೆ ಇರುವ ಪ್ರಶ್ನೆ ಅದಕ್ಕೆ ಉತ್ತರ ಯೇಸುಕ್ರಿಸ್ತನೇ ಆಗಿರುವನು. ಕ್ರೂಜೆಯಲ್ಲಿ ನಮಗಾಗಿ ಆಕಾಶಕ್ಕೂ ಭೂಮಿಗೂ ನಡುವೆ ತೂಗಾಡಿದ ಕುರಿಮರಿಯ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಬೇಕು. ಆತನ ಸ್ವಭಾವ ನಮ್ಮನ್ನಾಳುವಂತೆ ಆತನಿಗೆ ಒಪ್ಪಿಸಿಕೊಡಬೇಕು. ಆತನು ತಲೆ ಬಾಗಿಸಿದಂತೆ ನಾವೂ ಮುರಿಯಲ್ಪಟ್ಟವರಾಗಿ ನಮ್ಮ ತಲೆಯನ್ನು ಬಾಗಿಸಬೇಕು. ಕುರಿಮರಿಯ ಸ್ವಭಾವವು ಯೇಸುವಿನ ರಕ್ತಕ್ಕೆ ಶಕ್ತಿ ಕೊಟ್ಟಿತು. ನಾವೂ ಆತನ ಪ್ರಭಾವದಲ್ಲಿ ಪಾಲು ತಕ್ಕೊಳ್ಳುವಂತೆ, ಆತನು ಸತ್ತನು (ಗಲಾತ್ಯ 5:22,23)ರಲ್ಲಿ ಆತ್ಮದ ಫಲಗಳ ಕುರಿತಾಗಿ ಓದುತ್ತೇವೆ–'ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾದುತ್ವ, ಶಮೆದಮೆ' ಇವು ಕುರಿಮರಿಯ ಸ್ವಭಾವಗಳಾಗಿರುವವು. ಇವುಗಳಿಂದ ನಮ್ಮನ್ನು ತುಂಬಿಸಲು ಪವಿತ್ರಾತ್ಮನು ಬಯಸುತ್ತಾನೆ. ಆತನ ಪ್ರಭಾವದಲ್ಲಿ ಪಾಲುಹೊಂದಿ ಆತನಂತೆ ಆಗಬೇಕೆಂದು ಆಶಿಸುತ್ತಾನೆ.

ಹೀಗೆ ಮಾಡಲು ನಾವು ಸಿದ್ಧರಿದ್ದೇವೋ? ನಮ್ಮಲ್ಲಿರುವ ಸ್ವಾರ್ಥತೆ, ದೇವರಿಗೆ ತಲೆಬಾಗಲು ಇಷ್ಟಪಡುವದಿಲ್ಲ ತನ್ನ ಹಕ್ಕನ್ನು ಚಲಾಯಿಸಲು ಪ್ರಯತ್ನಿಸುತ್ತದೆ. ಕುರಿಮರಿಯ ಸ್ವಭಾವ ನಮ್ಮಲ್ಲಿ ಇರಬೇಕಾದರೆ, ನಮ್ಮಲ್ಲಿರುವ ಸ್ವಾರ್ಥ, ಸ್ವಇಚ್ಛೆಗಳು ಮುರಿಯಲ್ಪಡಬೇಕು. ಆಗ ಮಾತ್ರವೇ, ಕ್ರಿಸ್ತನ ರಕ್ತದಿಂದುಂಟಾಗುವ ಶುದ್ಧೀಕರಣದ ವಿಮೋಚನೆಯ ಶಕ್ತಿಯನ್ನು ಅನುಭವ ಪಡೆಯಲು ಸಾಧ್ಯವಾಗುವದು.

ನಾವು ಶುದ್ಧರಾಗುವಂತೆಯೂ, ಸಮಾಧಾನವು ನಮ್ಮ ಹೃದಯವನ್ನಾಳುವಂತೆಯೂ ಪ್ರಾರ್ಥಿಸುವದು ಮಾತ್ರವಲ್ಲ, ಭಕ್ತಿವೃದ್ಧಿಗೆ ಅಡ್ಡಿ ಉಂಟುಮಾಡುವಂಥ ಪ್ರತಿಯೊಂದು ಪಾಪವು ಮುರಿಯಲ್ಪಡಬೇಕು. ಈ ದಿಶೆಯಲ್ಲಿ ನಾವು ಕುರಿಮರಿಯ ದೈನ್ಯತೆಯಲ್ಲಿ ಪಾಲು ತೆಗೆದುಕೊಳ್ಳಬೇಕು. ಹೀಗೆ ಮಾಡುವವರೆಗೆ ನಾವು ಪಾಪದಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ.

ಪಾಪವು ನಮ್ಮೊಳಗೆ ಹೇಗೆ ಪ್ರವೇಶಿಸುವದು? ನಮ್ಮ ಮುರಿಯಲ್ಪಡಥ ಕಠಿಣವಾದ ಸ್ವಚ್ಛೆಯ ಮೂಲಕವಾಗಿ ಅದು ಯಾವಾಗಲೂ ಹೆಮ್ಮೆಯಿಂದ ನಮ್ಮ ಆಂತರ್ಯ ತುಂಬಿರುತ್ತದೆ. ಇದರಿಂದ ಹೊರಗೆ ಬರುವದು ಹೇಗೆ? ನಾವು ಪಾಪದ ಮೂಲವನ್ನು ಕಂಡುಹಿಡಿಯಬೇಕು. ಪಶ್ಚಾತ್ತಾಪದ ಮೂಲಕ ಪಾಪಕ್ಕೆ ಬೆನ್ನು ತೋರಿಸಿ ನಾವು ಬೆಳಕಿನಲ್ಲಿ ನಡೆಯುವವರಾಗಿರಬೇಕು. ನಾವು ನಮ್ಮ ಪಾಪಗಳನ್ನು ಅರಿಕೆಮಾಡುವಾಗ ತೇಜೋಭಂಗವಾಗಬಹುದು ಇತರರಿಗೆ ತಪ್ಪು ಮಾಡಿದಾಗ ನಾವು ಅವರ ಕ್ಷಮೆಯಾಚಿಸಿದಾಗ ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗಬಹುದು ನಮ್ಮ ಗರ್ವ, ಅಹಂ, ಹೆಮ್ಮೆಗಳಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿದಾಗ, ನಾವು ಮುರಿಯಲ್ಪಡಲು ಸಹಾಯವಾಗುತ್ತದೆ. ಈ ರೀತಿಯಾಗಿ, ನಾವು ಕುರಿಮರಿಯ ಸ್ವಭಾವದಲ್ಲಿ ಪಾಲುಗೊಳ್ಳುವಾಗ, ಕುರಿಮರಿಯ ರಕ್ತದಲ್ಲಿ ಶುದ್ಧರಾದಾಗ, ಪರಿಶುದ್ಧತ್ವವೆಂಬ ಭೂಷಣದೊಡನೆ ದೇವರೊಂದಿಗೆ ನಡೆಯುವೆವು. ನಮ್ಮ ಹೃದಯದಲ್ಲಿ ದೈವೀಕ ಸಮಾಧಾನ, ಶಾಂತಿ ನೆಲೆಗೊಳ್ಳುವದು.

# ಯೇಸು ಕ್ರಿಸ್ತನ ರಕ್ತ

✍ ಒಂದು ಮೃಗ ಕೊಯ್ಯಲ್ಪಟ್ಟು ಅದರ ಚರ್ಮವು ಮಾನವನ ನಿರ್ವಾಣವನ್ನು ಮುಚ್ಚಿತು. (ಆದಿ 3:21) (ಪ್ರಕ 13:8)

✍ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ. (ವಿಮೋ 9:19).

✍ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ ಇದೇ. (ಇಬ್ರಿ 9:19).

✍ ಇದು ಹೊಸ ಒಡಂಬಡಿಕೆಯ ರಕ್ತ. (ಮತ್ತಾ 26:28).

✍ ಯೇಸುಕ್ರಿಸ್ತನ ರಕ್ತವೇ ನಿಜವಾದ ಪಾನ. (ಯೋಹಾ 6:56).

✍ ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆ. (ಅಪೊ 20:28).

✍ ಪ್ರೋಕ್ಷಣ ರಕ್ತದ ಬಳಿಗೆ ಬಂದಿದ್ದೀರಿ. (ಇಬ್ರಿ 12:24).

✍ ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರ ಮಾಡಿಕೊಂಡಿದ್ದಾರೆ. (ಪ್ರಕ 7:14).

✍ ಯೇಸುಕ್ರಿಸ್ತನ ರಕ್ತವು ಸಕಲಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ. (1ಯೋಹಾ 1:7).

✍ ಯೇಸುಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ಶುದ್ಧೀಕರಿಸುವದಲ್ಲವೇ? (ಇಬ್ರಿ 2:14).

# ರಕ್ತವನ್ನು ಬೇಡಿ ವಿಜ್ಞಾಪನೆ

ಕ್ಯಾರೆಲ್ ಎಂಬ ಬಾಲಕಿಗೆ ಅಮೆರಿಕದ ಆಸ್ಪತ್ರೆಯಲ್ಲಿ ಹೃದಯದ ಶಸ್ತ್ರ ಚಿಕಿತ್ಸೆ ಮಾಡಬೇಕಾಗಿತ್ತು. ವೈದ್ಯಕೀಯ ಚಿಕಿತ್ಸೆಗಾಗಿ ದಾಖಲಾಗಿದ್ದ ಅವಳಿಗೆ ರಕ್ತವು ಬೇಕಾಗಿತ್ತು. ಅದಕ್ಕೆ ಬೇಕಾಗಿದ್ದ ರಕ್ತವು ದೊರಕದೆ ಕಷ್ಟಪಡುತ್ತಿದ್ದರು. 12 ವರ್ಷದ ಈ ಬಾಲಕಿಯು ಅಮೆರಿಕದ ಅಧ್ಯಕ್ಷರಾಗಿದ್ದ ಐಸೆನ್ ಹೋವರರನ್ನು ಟೆಲಿಫೋನ್ ಮೂಲಕ ಸಂಪರ್ಕಿಸಿದಳು. ಧೈರ್ಯವಾಗಿ ತನ್ನ ಸ್ಥಿತಿಯನ್ನು ವಿವರಿಸಿ ಹೇಳಿ ಸಹಾಯ ಮಾಡುವಂತೆ ಕೇಳಿದಳು. ಅಧ್ಯಕ್ಷರು ತಮ್ಮ ಮನೆಯಿಂದ ಬ್ಲಡ್ ಬ್ಯಾಂಕ್‌ಗೆ ವಿಷಯ ತಿಳಿದರು. ಅಲ್ಲಿಂದ ತಕ್ಷಣವೇ ಆ ಹುಡುಗಿಗೆ ಬೇಕಾಗಿದ್ದ ರಕ್ತವು ಕಳುಹಿಸಿಕೊಡಲ್ಪಟ್ಟಿತು.

ಪಾಪಗಳನ್ನು ತೊಳೆಯಲು, ವ್ಯಾಧಿಗಳನ್ನು ಗುಣಪಡಿಸಲು ಯೇಸುವಿನ ರಕ್ತವು ಸುರಿಯಲ್ಪಟ್ಟಿದೆ. ನಾವೇ ಅದನ್ನು ಕೇಳಿ ತೆಗೆದುಕೊಳ್ಳದೇ ಇದ್ದೇವೆ!

## ಸ್ತುತಿಯಿಂದ ಉಂಟಾಗುವ ಆಶೀರ್ವಾದಗಳು

1. **ನಂಬಿಕೆಯ ಫಲ :** ಕಟ್ಟಕಡೆಗೆ ಆತನ ಜನರು ಆತನಲ್ಲಿ ನಂಬಿಕೆಯಿಟ್ಟರು ಆತನ ಸ್ತುತಿ ಪದಗಳನ್ನು ಹಾಡಿದರು (ಕೀರ್ತ 106:12).
2. **ಉತ್ಸಾಹ ನೀಡುತ್ತದೆ :** ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರ ಇವುಗಳನ್ನು ಒದಗಿಸಿ ಕೊಡುವದಕ್ಕೂ ನನ್ನನ್ನು ಕಳುಹಿಸಿದ್ದಾನೆ (ಯೆಶಾ 6:13).
3. **ದುರವಸ್ಥೆ ತಪ್ಪಿಸುತ್ತದೆ :** ಕೃತಜ್ಞತಾ ಬಲಿಯನ್ನು ಕರ್ತನ ಆಲಯಕ್ಕೆ ತರುವವರ ಗಾನವೂ ಕಿವಿಗೆ ಬೀಳುವದು. ನಾನು ದೇಶವನ್ನು ದುರವಸ್ಥೆಯಿಂದ ತಪ್ಪಿಸಿ.... (ಯೆರೆ 33:11).
4. **ಮಹತ್ಕಾರ್ಯವಾಗುತ್ತದೆ :** ದೇವರಿಗೆ ಸ್ತುತಿ ಪದಗಳನ್ನು ಹಾಡುತ್ತಿದ್ದರು...ಮಹಾ ಭೂಕಂಪವುಂಟಾಯಿತು...ಕದಗಳೆಲ್ಲಾ ತೆರೆದವು...ಬೇಡಿಗಳು ಕಳಚಿಬಿದ್ದವು (ಅ.ಕೃ 16:25,26).

## ಪ್ರಾರ್ಥನೆಯನ್ನು ಕುರಿತ ಭಾಷೆಗಳು

1. ಪ್ರಾರ್ಥನೆಯ ರಹಸ್ಯವು ರಹಸ್ಯವಾಗಿ ಪ್ರಾರ್ಥಿಸುವುದೇ ಆಗಿದೆ.
2. ಪ್ರಾರ್ಥಿಸುವವರ ಜೀವಿತದಲ್ಲಿ ಅದ್ಭುತಗಳು ತುಂಬಿಕೊಂಡಿರುತ್ತವೆ.
3. ಪ್ರಾರ್ಥನೆಯಿಲ್ಲದ ಜೀವಿತವು ಜಯವಿಲ್ಲದ ಜೀವಿತ.
4. ನಮ್ಮ ಹೃದಯದ ಕೂಗೇ ಪ್ರಾರ್ಥನೆ.
5. ರಾತ್ರಿಯಲ್ಲಿ ಪ್ರಾರ್ಥಿಸಿರಿ ಕಾರ್ಗತ್ತಲೆಯು ರಾಗ ಹಾಡುತ್ತದೆ ಮಧ್ಯರಾತ್ರಿಯ ಗೀತವಾಗುತ್ತದೆ.

### ವಾಗ್ದಾನ ವಚನ : ಯೆಶಾಯ 53:5

**ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು.**

## ಕ್ರಿಸ್ತನಲ್ಲಿ ಮರಣವೂ ಪುನರುತ್ಥಾನವೂ

ಪರಿಶುದ್ಧನಾದ ದೇವರ ನೀತಿಗೆ ತಕ್ಕಂತೆ ನಮ್ಮೆಲ್ಲರ ಪಾಪಗಳಿಗೆ ಪರಿಹಾರವಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಯೇಸುಸ್ವಾಮಿ ಶಿಲುಬೆಯಲ್ಲಿ ಸತ್ತಾಗ ತನ್ನ ಪವಿತ್ರ ರಕ್ತವನ್ನು ಸುರಿಸಿದ್ದಾನೆ. ಮಾನವರಲ್ಲಿ ಯಾರೂ ಸಂಬಂಧಪಡಲಾರದ ಈ ಶ್ರೇಷ್ಠವಾದ ಪ್ರಾಯಶ್ಚಿತ್ತವನ್ನು ಮಾಡುವ ಹಕ್ಕೂ ಅರ್ಹತೆಯೂ ಸಾಮರ್ಥ್ಯವೂ ಯೇಸುಸ್ವಾಮಿಗೆ ಮಾತ್ರವೇ ಇದ್ದಿತು. ಆತನೊಬ್ಬನೇ ಏಕಾಂಗಿಯಾಗಿ ಈ ಕಾರ್ಯವನ್ನು ಮಾಡಿ ಮುಗಿಸಿದನು. ಪಾಪ ಪರಿಹಾರವಾಗಿ ತನ್ನ ಪವಿತ್ರ ರಕ್ತವನ್ನು ಸುರಿಸುವದು ಮಾತ್ರವೇ ಆತನ ಉದ್ದೇಶವಾಗಿರದೆ, ನಾವು ಸಾಯುವದಕ್ಕೆ ಸೂಚನೆಯಾಗಿಯೂ ನಮಗೆ ಬದಲಾಗಿಯೂ ಆತನು ಸತ್ತನು. ಆತನು ಸತ್ತಾಗ ನಿನ್ನನ್ನು ನನ್ನನ್ನೂ ತನ್ನ ಮರಣಕ್ಕೊಳ ಪಡಿಸಿಕೊಂಡನು.

ಆತನು ಈ ರೀತಿ ಸತ್ತದ್ದರಿಂದ ದೇವರು ತಾನೇ ನನ್ನನ್ನು ಆತನ ಮರಣದಲ್ಲಿ ಒಳಪಡಿಸಿಕೊಂಡನು. ಆದ್ದರಿಂದ "ಕ್ರಿಸ್ತನಲ್ಲಿ" ಎಂಬ ಪದವು ಮಹಾ ಉನ್ನತವಾದದ್ದಾಗಿದೆ ಆತನ ಮರಣದಲ್ಲಿ ದೇವರು ನನ್ನನ್ನು ಒಳಪಡಿಸಿ ಕೊಂಡಿದ್ದರಿಂದ, ಆತನ ಪುನರುತ್ಥಾನದಲ್ಲೂ ನನ್ನನ್ನು ಒಳಪಡಿಸಿದ್ದಾನೆ. ಯೇಸು ಸ್ವಾಮಿಯನ್ನು ಕಡೇ ಆದಾಮನೆಂದು ಎರಡನೇ ಮನುಷ್ಯನು ಎಂದು ಕರೆಯುತ್ತೇವೆ. ಕಡೇ ಆದಾಮ ಎಂದರೆ ಮಾನವ ಕುಲವೆಲ್ಲವೂ ಆತನಲ್ಲಿ ಅಡಗಿದೆ. ಅಂದರೆ ಆತನು ಒಂದು ಹೊಸ ವಂಶದ ಅಧಿಪತಿ ಅಥವಾ ಪ್ರಾರಂಭವೆಂಬ ಅರ್ಥದಲ್ಲಿ ಹೇಳಲಾಗಿದೆ. ಕಡೆ ಆದಾಮ ಎಂಬದು ಆತನ ಮರಣವನ್ನು ಎರಡನೇ ಮನುಷ್ಯನೆಂಬದು ಆತನ ಪುನರುತ್ಥಾನವನ್ನೂ ಸೂಚಿಸುತ್ತದೆ.

## ಪ್ರಾರ್ಥನೆಯು ಹೇಗೆ ದೃಢವಾದ ನಂಬಿಕೆಯನ್ನುಂಟು ಮಾಡುವದು

ಯೇಸುಸ್ವಾಮಿಯೊಂದಿಗೆ ಕೂಡಿ ಆತನ ಚಿತ್ತಕ್ಕಾಗಿ ಪ್ರಾರ್ಥಿಸುವಾಗ ನಂಬಿಕೆಯಲ್ಲಿ ಪರಿಪೂರ್ಣಗೊಳಿಸಲ್ಪಟ್ಟವರಾಗಿ (ಇಬ್ರಿ 10:22)ಆತನ ಬಳಿಗೆ ಬರುತ್ತೇವೆ. ದೇವರ ಸಾನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು (ಎಫೆ 3:12). ನೀವು ಯೇಸುಸ್ವಾಮಿಯೊಂದಿಗೆ ಕೂಡಿ ಒಂದು ವಿಷಯಕ್ಕಾಗಿ ಪ್ರಾರ್ಥಿಸುವಾಗ ದೇವರು ಅದನ್ನು ಕೇಳುತ್ತಾನೆ ಎಂಬುದಕ್ಕೆ ಸಂಶಯವೇ ಇಲ್ಲ.

"ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ" ಎಂದು ಯೇಸುಕ್ರಿಸ್ತನು ಹೇಳಿದನು (ಯೋಹಾ 11:42). "ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು" (1ಯೋಹಾ 5:14) ಎಂದು ಓದುತ್ತೇವೆ. ನಂತರ 16 ನೇ ವಾಕ್ಯದಲ್ಲಿ ಇತರರಿಗಾಗಿ ಬೇಡಿಕೊಳ್ಳುವದನ್ನು ಪವಿತ್ರಾತ್ಮನು ಆಸಕ್ತಿಯಿಂದ ಕೇಳುತ್ತಾನೆಂದು ನೋಡುತ್ತೇವೆ ಆದ್ದರಿಂದ ಪ್ರಾರ್ಥನೆಯೇ ನಮಗೆ ದೃಢವಾದ ನಂಬಿಕೆಯನ್ನುಂಟು ಮಾಡುವುದು.



# ಕರ್ನಾಟಕ ರಾಜ್ಯದ ಚುನಾವಣೆಗಾಗಿ ಪ್ರಾರ್ಥಿಸಿರಿ




## ದಿನ ನಿತ್ಯವು ಕನಿಷ್ಠ 10 ನಿಮಿಷಗಳು ನಮ್ಮ ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಕರ್ತನ ಪಾದದಲ್ಲಿ ಹೋರಾಡಿ ಪ್ರಾರ್ಥಿಸಿರಿ.

ಸತ್ಯವೇದವು ಹೇಳುತ್ತದೆ, ನಾವು ದೇವರಿಗೆ ವಿಜ್ಞಾಪನೆಗಳನ್ನು ಮಾಡಿ ನಮಗೆ ಸುಖ ಸಮಾಧಾನಗಳು ಉಂಟಾಗಿ ಪೂರ್ಣ ಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಎಲ್ಲರೂ ಸುಖ ಸಮೃದ್ಧಿಯಾಗಿ ಜೀವಿಸಲು ಪ್ರಸವ ವೇದನೆಯೊಂದಿಗೆ ಪ್ರಾರ್ಥಿಸೋಣ ಕಣ್ಣೀರಿನ ಹನಿಗಳಿಂದ ಕೂಡಿದ ಪ್ರಾರ್ಥನೆ ನಮ್ಮ ರಾಜ್ಯದ ಅಸ್ತಿವಾರವನ್ನು ಕದಲಿಸುವಂಥದ್ದಾಗಿದೆ ಎಂಬುದನ್ನು ನಾವು ಮರೆಯಬಾರದು.

ಮುಂಬರುವ ಕರ್ನಾಟಕದ ಚುನಾವಣೆಗಾಗಿ, ಅರಸರುಗಳಿಗಾಗಿ ಮತ್ತು ಅಧಿಕಾರಿಗಳಿಗಾಗಿ ನಾವು ಭಾರದಿಂದ ಕಣ್ಣೀರಿನಿಂದ ಪ್ರಾರ್ಥಿಸಬೇಕಾಗಿದೆ. ಇದು ನಮಗೆ ಕರ್ತನು ಕೊಟ್ಟಿರುವ ಆಜ್ಞೆಯಾಗಿದೆ (1ತಿಮೊ 2:1–4). ನಾವು ಈ ಆಜ್ಞೆಯನ್ನು ಪರಿಪಾಲಿಸಿ ಕರ್ತನಲ್ಲಿ ಮೊರೆಯಿಡೋಣ.

1. ಕರ್ತನ ಚಿತ್ತವನ್ನು ನೆರವೇರಿಸುವ ನಾಯಕರು ನಮ್ಮ ರಾಜ್ಯದಲ್ಲಿ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸೋಣ.
2. ಚುನಾವಣೆಯಲ್ಲಿ ಕರ್ತನ ಒಡೆತನವನ್ನು ಹತೋಟಿಯನ್ನು ಕೇಳಿಕೊಂಡು ಈ ಸಮಯದಲ್ಲಿ ಮೋಸ ವಂಚನೆಗಳಿರದಂತೆ ಶಾಂತಿ ಸಮಾಧಾನ ನೆಲೆಗೊಳ್ಳಲು ಪ್ರಾರ್ಥಿಸೋಣ.
3. ಚುನಾವಣಾ ಅಯೋಗದ ಅಧಿಕಾರಿಗಳು ಮತ್ತು ಪೋಲೀಸ್ ಇಲಾಖೆಯು ಉತ್ತಮವಾಗಿ ಕಾರ್ಯನಿರ್ವಹಿಸಲು ಕರ್ತನ ಸುಭದ್ರತೆಗಾಗಿ ಪ್ರಾರ್ಥಿಸೋಣ.
4. ದೇಶದ ಅಭ್ಯುದಯಕ್ಕಾಗಿ ಮತ್ತು ಜನರ ಒಳಿತಿಗಾಗಿ ಶ್ರಮಿಸುವವರು ಮಾತ್ರ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸೋಣ.
5. ದೇಶವನ್ನು ಆಳುವ ನಾಯಕರನ್ನು ಆಯ್ಕೆ ಮಾಡುವುದು ನಮ್ಮ ಜವಾಬ್ದಾರಿ. ಆದ್ದರಿಂದ ನಿರುತ್ಸಾಹ ಮತ್ತು ಉದಾಸೀನತೆಯನ್ನು ಬಿಟ್ಟು ಎಲ್ಲರೂ ಮತವನ್ನು ಚಲಾಯಿಸಬೇಕು. ಅದಕ್ಕಾಗಿ ಕರ್ತನನ್ನು ಬೇಡಿಕೊಳ್ಳೋಣ.



# ನಮ್ಮ ದೇಶದ ಸುದ್ದಿಗಳು
# (INDIA NEWS)

1. **ಮಕ್ಕಳಸ್ನೇಹಿ ಗ್ರಾಮ ನಿರ್ಮಾಣಕ್ಕೆ ಒಪ್ಪಂದ :** ಮಕ್ಕಳ ಸ್ನೇಹಿ ಗ್ರಾಮ ನಿರ್ಮಾಣ ಯೋಜನೆಗಾಗಿ ಇನ್ಫೋಸಿಸ್ ಪ್ರತಿಷ್ಠಾನವು ಕೈಲಾಶ್ ಸತ್ಯಾರ್ಥಿ ಮಕ್ಕಳ ಪ್ರತಿಷ್ಠಾನದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಗ್ರಾಮೀಣ ಮಕ್ಕಳಿಗೆ ಉತ್ತಮ ಆರೋಗ್ಯ, ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಈ ಯೋಜನೆಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಅದರನ್ವಯ ಮುಂದಿನ ಮೂರು ವರ್ಷಗಳು ಅನುದಾನ ನೀಡಲಿದ್ದೇವೆ ಎಂದು ಪ್ರತಿಷ್ಠಾನದ ಪ್ರತಿನಿಧಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
2. **ರೂ.100 ಕೋಟಿಗೂ ಹೆಚ್ಚು ಸಾಲದ 1,463 ಖಾತೆಗಳು :** ಸರ್ಕಾರಿ ಸ್ವಾಮ್ಯದ 21 ಬ್ಯಾಂಕ್‌ಗಳಲ್ಲಿ ರೂ 100 ಕೋಟಿಗೂ ಹೆಚ್ಚಿನ ಮೊತ್ತದ ಸಾಲ ಬಾಕಿ ಉಳಿಸಿಕೊಂಡಿರುವ 1,463 ಖಾತೆಗಳಿವೆ. ವಸೂಲಿಯಾಗದ ಸಾಲ (ಎನ್ ಪಿಎ) ಹೊಂದಿರುವ ಸಂಸ್ಥೆಗಳ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಈ ಮಾಹಿತಿ ನೀಡಿದೆ.
3. **ರಾಜ್ಯದ 10 ನಗರಗಳಲ್ಲಿ ಹೆಚ್ಚಿದ ಮಾಲಿನ್ಯ :** ರಾಜ್ಯದ ಬೆಂಗಳೂರು, ತುಮಕೂರು, ದಾವಣಗೆರೆ, ಬೀದರ್ ಹಾಗೂ ರಾಯಚೂರು ನಗರಗಳಲ್ಲಿ ಅತಿಹೆಚ್ಚು ವಾಯುಮಾಲಿನ್ಯ ಇದೆ ಎಂದು ಗ್ರೀನ್‌ಪೀಸ್ ಸಂಘಟನೆ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ. 10 ನಗರಗಳ ಪಟ್ಟಿಯಲ್ಲಿ ಹುಬ್ಬಳ್ಳಿ, ಧಾರವಾಡ, ಕೋಲಾರ, ಕಲಬುರ್ಗಿ ಮತ್ತು ಬೆಳಗಾವಿ ನಗರಗಳು ನಂತರದ ಸ್ಥಾನದಲ್ಲಿವೆ ಎಂದು ಕಂಡು ಬಂದಿದೆ.
4. **ಪ್ರಗತಿಗೆ ತೈಲ ದರ ಏರಿಕೆ ಭೀತಿ :** ನೋಟು ರದ್ದತಿ ಮತ್ತು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯ ಪರಿಣಾಮಗಳು ತಗ್ಗಿವೆ. ಹಾಗಾಗಿ 2018–19ನೇ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು ದೇಶೀ ಉತ್ಪನ್ನವು ಶೇ 7ರಿಂದ ಶೇ 7.5ರ ದರದಲ್ಲಿ ಏರಿಕೆಯಾಗಬಹುದು. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ ಇದೇ ರೀತಿಯ ಮುಂದುವರಿದರೆ ಭಾರತದ ಪ್ರಗತಿಗೆ ದೊಡ್ಡ ತೊಡಕಾಗಬಹುದು ಎಂದು ತಿಳಿದು ಬಂದಿದೆ.
5. **23 ಶಾಲೆಗಳನ್ನು ದತ್ತು ಪಡೆದಿರುವ ಪಿ.ಇ.ಎಸ್.ವಿಶ್ವವಿದ್ಯಾಲಯ :** ಪಿ.ಇ.ಎಸ್.ವಿಶ್ವವಿದ್ಯಾಲಯವು ದತ್ತು ತೆಗೆದುಕೊಂಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳ ಒಂದು ಸಾವಿರ ಮಕ್ಕಳಿಗೆ ನೋಟ್‌ಪುಸ್ತಕ ಬ್ಯಾಗ್‌ಗಳನ್ನು ವಿತರಿಸಲಾಯಿತು. 1994ರಲ್ಲಿ 13 ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲಾಗಿತ್ತು, ಎರಡು ವರ್ಷಗಳ ಹಿಂದೆ ದತ್ತು ಪಡೆದು ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆ.

# ಹೊರ ದೇಶದ ಸುದ್ದಿಗಳು
# (FOREIGN NEWS)

1. **ಮೇರಿ ಲ್ಯಾಂಡ್‌ನಿಂದ ಅರುಣಾ ಮಿಲ್ಲರ್ ಸ್ಪರ್ಧೆ :** ಭಾರತೀಯ ಸಂಜಾತೆ ಅರುಣಾ ಮಿಲ್ಲರ್ (53) ಅವರು ಮೇರಿ ಲ್ಯಾಂಡ್ ಕ್ಷೇತ್ರದಿಂದ ಅಮೆರಿಕ ಸಂಸತ್ತಿಗೆ ಸ್ಪರ್ಧಿಸುತ್ತಿದ್ದು, ತಮ್ಮ ನಾಮಪತ್ರ ಸಲ್ಲಿಸಿದರು. ಈ ವೇಳೆ ತಾಯಿ ಹೇಮಾ ಕಾಟ್ರಗಡ್ಡಾ ಅವರು ಜೊತೆಗಿದ್ದರು. ಅರುಣಾ, ಸದ್ಯ ಮೇರಿಲ್ಯಾಂಡ್ ರಾಜ್ಯದ ಕೆಳಮನೆಯ (ಹೌಸ್ ಆಫ್ ಡೆಲಿಗೇಟ್ಸ್) ಸದಸ್ಯರಾಗಿದ್ದಾರೆ ಎಂದು ತಿಳಿದು ಬಂದಿದೆ.

2. **ಇಬ್ಬರು ಭಾರತ ಸಂಜಾತರಿಗೆ ಅಮೆರಿಕ ಗೌರವ :** ಪ್ರತಿಷ್ಠಿತ 'ನ್ಯಾಷನಲ್ ಇನ್ವೆಂಟರ್ಸ್ ಹಾಲ್ ಆಫ್ ಫೇಮ್' ನ ಈ ವರ್ಷದ ಆವೃತ್ತಿಗೆ ಭಾರತ ಸಂಜಾತ ಇಬ್ಬರು ಅಮೆರಿಕನ್ನರು ಸೇರ್ಪಡೆಗೊಂಡಿದ್ದಾರೆ. ಎಂಐಎಂಒ (ಮಲ್ಟಿಪಲ್ ಇನ್‌ಪುಟ್ ಮಲ್ಟಿಪಲ್ ಔಟ್‌ಪುಟ್ ರೇಡಿಯೊ ಸಂವಹನ ಸಮರ್ಥ್ಯವನ್ನು ವೃದ್ಧಿಸುವುದು) ನಿಸ್ತಂತು ತಂತ್ರಜ್ಞಾನದಲ್ಲಿನ ಅನ್ವೇಷಣೆಗೆ ಆರೋಗ್ಯಸ್ವಾಮಿ ಪೌಲ್‌ರಾಜ್, ವಸಡು ಮತ್ತು ಹಲ್ಲಿನ ಚಿಕಿತ್ಸೆಯಲ್ಲಿ ಬಳಸುವ ಪರ್ಯಾಯ ನ್ಯಾನೊ ಸಾಧನಗಳ ಕುರಿತು ಸಂಶೋಧನೆ ನಡೆಸಿದ ಸುಮಿತಾ ಮಿತ್ರ ಸೇರ್ಪಡೆಗೊಂಡವರು ಎಂದು ತಿಳಿದು ಬಂದಿದೆ.

3. **ವಿಶ್ವದ ಹಿರಿಯ ಗೊರಿಲ್ಲಾ ಸಾವು :** ವಿಶ್ವದ ಅತಿ ಹಿರಿಯ ಗೊರಿಲ್ಲಾ ಎಂಬ ಖ್ಯಾತಿಗೆ ಪಾತ್ರವಾಗಿದ್ದ ವಿಲಾ (60) ಸ್ಯಾನ್‌ಡಿಯಾಗೋದ ಝೂ ಸಫಾರಿ ಪಾರ್ಕ್‌ನಲ್ಲಿ ಸಾವಿಗೀಡಾಗಿದೆ. 5 ತಲೆಮಾರು ಕಂಡ ವಿಲಾಗೆ ಕಳೆದ ಅಕ್ಟೋಬರ್‌ನಲ್ಲಿ 60 ವರ್ಷ ತುಂಬಿತ್ತು. 1957 ರಲ್ಲಿ ಆಫ್ರಿಕನ್ ಕಾಂಗೋದಲ್ಲಿ ಹುಟ್ಟಿದ್ದ ವಿಲಾ, 1959 ರಲ್ಲಿ ಪ್ರಾಣಿ ಸಂಗ್ರಹಾಲಯಕ್ಕೆ ಸೇರ್ಪಡೆಗೊಂಡಿತ್ತು. 1975 ರಲ್ಲಿ ಇದನ್ನು ಸಫಾರಿ ಪಾರ್ಕ್‌ಗೆ ಸ್ಥಳಾಂತರ ಮಾಡಲಾಗಿತ್ತು. ವಿಲಾ ಹಲವಾರು ಗೊರಿಲ್ಲಾಗಳ ಬಾಡಿಗೆ ತಾಯಿಯೂ ಆಗಿತ್ತು. ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ವಿಲಾ ಇತ್ತೀಚೆಗೆ ಸಾವಿಗೀಡಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

4. **ಹೊಸ ಸವಾಲಿಗೆ ಜಿನ್‌ಪಿಂಗ್ ತಂತ್ರ :** ದಕ್ಷಿಣ ಚೀನಾ ಸಮುದ್ರದ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಚೀನಾ ಅಧ್ಯಕ್ಷರವರು ಜಗತ್ತಿನ ಅತಿ ದೊಡ್ಡ ಸೇನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿ ಎಲ್ ಎ) ಯುದ್ಧ ಸಾಮರ್ಥ್ಯ ಹೆಚ್ಚಿಸಲು ಆಮೂಲಾಗ್ರ ಪರಿಷ್ಕರಣೆ ಕೈಗೊಂಡಿದ್ದಾರೆ.

5. **ಡೆಮಾಕ್ರಟಿಕ್ ಪಕ್ಷದ ಅತಿ ಕಿರಿಯ ಪ್ರತಿನಿಧಿ :** ಅಮೆರಿಕದ ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದ ಭಾರತ ಮೂಲದ ಶ್ರುತಿ ಪಳನಿಯಪ್ಪನ್(18) ಅವರು ಅತಿ ಕಿರಿಯ ವಯಸ್ಸಿನ ಪ್ರತಿನಿಧಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

# ಆದಾಮ ಹವ್ವಳ ಪ್ರಾರ್ಥನೆ!

**'ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀಪುರುಷರು ಕರ್ತನ ಸಪ್ಪಳವನ್ನು ಕೇಳಿದರು' (ಆದಿ 3:8).**

ಸಂಜೆಯ ತಂಗಾಳಿಯಲ್ಲಿ ಏದೆನ್ ತೋಟದಲ್ಲಿ ಸಂಚರಿಸಿ ಆದಾಮ ಹವ್ವರೊಂದಿಗೆ ಸಂಭಾಷಿಸಿದ ಕರ್ತನು, ಇಂದು ನಿಮ್ಮ ಮನೆಯಲ್ಲಿ ಸಂಚರಿಸಿ ನಿಮ್ಮ ಆಂತರ್ಯದಲ್ಲಿ, ನಿಮ್ಮೊಂದಿಗೆ ಸಂಭಾಷಿಸುವನು. ಆತನ ಹೊನ್ನಿನ ಮುಖವನ್ನು ನೋಡಿ, ಆತನನ್ನು, ಧ್ಯಾನಿಸುವ ಪ್ರಾರ್ಥನೆಯ ವೇಳೆಯಾಗಿ ಆ ಸಮಯವಿರಲಿ.

ಸತ್ಯವೇದದಲ್ಲಿ ನಮೂದಿಸಲ್ಪಟ್ಟಿರುವ ಪ್ರತಿಯೊಬ್ಬ ದೇವಭಕ್ತರು. ಮುಂಜಾನೆಯಲ್ಲಿ ಕರ್ತನನ್ನು ಹುಡುಕಿದರು. ಆತನ ಮಹಿಮ ಸಾರೂಪ್ಯವನ್ನು ತಮ್ಮ ಆತ್ಮ, ಪ್ರಾಣ, ಶರೀರಗಳಲ್ಲಿ ತುಂಬಿಸಿಕೊಂಡರು. "ಯಾಕೋಬನು ಹೊತ್ತಾರೆಯಲ್ಲಿ ಎದ್ದು (ಆದಿ 28:18). "ಎಲ್ಕಾನನೂ, ಹನ್ನಳೂ, ಹೊತ್ತಾರೆಯಲ್ಲಿ ಎದ್ದು (1ಸಮು 1:19). "ಅರಸನಾದ ಹಿಜ್ಕೀಯನು, ಬೆಳಗಿನ ಜಾವದಲ್ಲಿ ಎದ್ದು ಪಟ್ಟಣದ ಮುಖಂಡರನ್ನು ಕೂಡಿಸಿಕೊಂಡು ಯೆಹೋವನ ಆಲಯಕ್ಕೆ ಹೋದನು" (2ಪೂ.ವೃ 29:20) ಎಂದು ಸತ್ಯವೇದದಲ್ಲಿ ಓದುತ್ತೇವೆ. ಭಕ್ತನಾದ ಯೋಬನು ಹೊತ್ತಾರೆಯಲ್ಲಿ ಎದ್ದು ತನ್ನ ಮಕ್ಕಳ ಸಂಖ್ಯಾನುಸಾರ ಯಜ್ಞವನ್ನರ್ಪಿಸುತ್ತಿದ್ದನು" (ಯೋಬ 1:5).

ಇದೆಲ್ಲಾದಕ್ಕಿಂತ ಮಿಗಿಲಾಗಿ, ನಮ್ಮ ಕರ್ತನಾದ ಯೇಸುಕ್ರಿಸ್ತನು ಮುಂಜಾನೆಯಲ್ಲಿ ಎದ್ದು ಏಕಾಂತವಾದ ಸ್ಥಳಕ್ಕೆ ಹೋಗಿ ತಂದೆಯೊಂದಿಗೆ ಸಂಭಾಷಿಸುತ್ತಾ ಪ್ರಾರ್ಥಿಸುತ್ತಿದ್ದನು (ಮಾರ್ಕ 1:35). ನೀವೂ ಆತನನ್ನು ಅನುಸರಿಸುವಿರಾ?

ಒಬ್ಬ ಬಡ ತಾಯಿ, ತನ್ನ ಮಗನನ್ನು ಓದಲು ಪಟ್ಟಣಕ್ಕೆ ಕಳುಹಿಸಿದಾಗ, ಅಲ್ಲಿ ತನ್ನ ಮಗನು ಯಾವ ರೀತಿ ಜೀವಿಸುವನೋ, ಅವನು ಯಾವ ರೀತಿ ಮಾರ್ಪಟ್ಟು ಹಿಂದುರಿಗಿ ಬರುವನೋ, ಎಂದು ಕಳವಳಕ್ಕೀಡಾದಳು, ಆದ್ದರಿಂದ ಅವಳು ಪ್ರತಿ ದಿನವೂ ಹೊತ್ತಾರೆಯಲ್ಲಿ ಎದ್ದು ಮೊಣಕಾಲೂರಿ, "ದೇವರೇ, ನನ್ನ ಮಗನನ್ನು ನಿನ್ನ ಬಲವಾದ ಹಸ್ತದಲ್ಲಿ ಒಪ್ಪಿಸಿ ಕೊಡುತ್ತೇನೆ. ಪ್ರಪಂಚದ ಆಶೆಗಳು, ಇಚ್ಛೆಗಳು ಅವನನ್ನು ಮುಟ್ಟದಂತೆ, ನನ್ನ ಮಗನನ್ನು ಕಾಪಾಡು" ಎಂದು ಪ್ರಾರ್ಥಿಸುತ್ತಿದ್ದಳು. ಅವಳ ಪ್ರಾರ್ಥನೆಯಂತೆಯೇ ಕರ್ತನು ಅವನನ್ನು ಕಾಪಾಡಿದನು. ಅಷ್ಟು ಮಾತ್ರವಲ್ಲ, ಒಂದು ದಿನ ಅವನು ರಸ್ತೆಯಲ್ಲಿ ಹೋಗುತ್ತಿದ್ದಾಗ ಒಂದು ಸುವಾರ್ತಾ ಸೇವೆಯ ಗುಂಪಿನವರು ಹಾಡುತ್ತಿದ್ದ ಹಾಡನ್ನು ಕೇಳಿ ಕರ್ತನಿಗೆ ತನ್ನನ್ನು ಒಪ್ಪಿಸಿಕೊಟ್ಟು, ರಕ್ಷಿಸಲ್ಪಟ್ಟನು.

ದೇವಜನರೇ, ಮುಂಜಾನೆಯ ಪ್ರಾರ್ಥನೆ ಬಲಯುತವಾದದ್ದು. ಏಕೆಂದರೆ ಆತನ ಕೃಪಾವರಗಳು ಹೊಸಹೊಸದಾಗಿ ದೊರೆಯುವಂಥವುಗಳಾಗಿವೆ. ಅದು ಎಂದಿಗೂ ವ್ಯರ್ಥವಾಗಿ ಹೋಗುವದಿಲ್ಲ. ಕರ್ತನು ನಿಮ್ಮ ಪ್ರಾರ್ಥನೆಯನ್ನು ಕೇಳಲು ಕಾತುರ ಉಳ್ಳವನಾಗಿರುವನು. ನೀವು ನೆನಸದೆ ಇರುವಷ್ಟರ ಮಟ್ಟಿಗೆ ಅದು ನಿಮಗೆ ಆಶೀರ್ವಾದಗಳನ್ನು ತರುವದು.

**ನೆನಪಿಗೆ : 'ಯೆಹೋವನೇ, ಉದಯಕಾಲದಲ್ಲಿ ನನ್ನ ಸ್ವರವು ನಿನಗೆ ಕೇಳಿಸುವದು; ಉದಯಕಾಲದಲ್ಲಿಯೇ ಪ್ರಾರ್ಥನೆಯನ್ನು....ನೋಡುತ್ತಿರುವೆನು' (ಕೀರ್ತ 5:3).**

| ಮಾರ್ಚ್ 02 | ಹನೋಕನ ಪ್ರಾರ್ಥನೆ! | ಬೆಳಗ್ಗೆ : ಅರಣ್ಯ 24,25,26,27 ಸಂಜೆ : ಮಾರ್ಕ 8:1-21 |
|---|---|---|

**'ಮೆತೂಷೆಲಹನು ಹುಟ್ಟಿದ ಮೇಲೆ ಹನೋಕನು ಗಂಡು ಹೆಣ್ಣು ಮಕ್ಕಳನ್ನು ಪಡೆದು ದೇವರ ಅನ್ಯೋನ್ಯತೆಯಲ್ಲಿ ಮುನ್ನೂರು ವರುಷ ಬದುಕಿದನು' (ಆದಿ 5:22).**

ಆದಾಮನ ಮೂರನೆಯ ಮಗನಾದ ಸೇತನು ಹುಟ್ಟಿದಂದಿನಿಂದ ದೇವರ ಆರಾಧನೆ, ಪ್ರಾರಂಭವಾಯಿತು. "ಸೇತನು ಸಹ ಮಗನನ್ನು ಪಡೆದು ಅವನಿಗೆ ಎನೋಷ್ ಎಂದು ಹೆಸರಿಟ್ಟನು; ಆ ಕಾಲದಲ್ಲಿ ಯೆಹೋವ ಎಂಬ ಹೆಸರನ್ನು ಹೇಳಿಕೊಂಡು ಆರಾಧಿಸುವದಕ್ಕೆ ಪ್ರಾರಂಭವಾಯಿತು" (ಆದಿ 4:26) ಎಂದು ಸತ್ಯವೇದ ಹೇಳುತ್ತದೆ.

ದೇವರು "ಸರ್ವಶಕ್ತನು" ಎಂಬುದನ್ನು ಅರಿತಾಗ, ಜನರು ತಮಗೆ ತಿಳಿಯದಂತೆಯೇ ಕರ್ತನನ್ನು ಆರಾಧಿಸಲಾರಂಭಿಸಿದರು, ಪ್ರಾರ್ಥಿಸಿದರು. ಅವರು ಏನು ಹೇಳಿ ಪ್ರಾರ್ಥಿಸಿದರೆಂಬುದು, ಅಲ್ಲಿ ಬರೆಯಲ್ಪಟ್ಟಿಲ್ಲ. ದೇವರೆಂಬುವವನು ಒಬ್ಬನಿರುವನು ತಮಗೆ ದೂರದಲ್ಲಿರುವನು. ಆತನನ್ನು ಆರಾಧಿಸುವದಾದರೆ, ಆತನು ನಮಗೆ ಸಹಾಯ ಮಾಡುವನು ಎಂಬುದೇ. ಅವರ ಭಾವನೆಯಾಗಿತ್ತು. ಸತ್ಯವೇದ ಹೇಳುತ್ತದೆ "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ. ದೇವರ ಬಳಿಗೆ ಬರುವವನು, ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" (ಇಬ್ರಿ 11:1,6) ಎಂದು.

ಹನೋಕನ ಕಾಲದಲ್ಲಿ ಪ್ರಾರ್ಥನೆ ಒಂದು ಉನ್ನತವಾದ ಸ್ಥಿತಿಗೆ ಎತ್ತಲ್ಪಟ್ಟಿತು. ಹನೋಕನು ಮೆತೂಷೆಲಹನನ್ನು ತನ್ನ ಅರವತ್ತೈದನೇ ವರುಷದಲ್ಲಿ ಪಡೆದ ಮೇಲೆ, ಅವನು ದೇವರೊಂದಿಗೆ ನಡೆಯಲಾರಂಭಿಸಿದನು. ಪ್ರಾರ್ಥನೆಯಲ್ಲಿ ಮೊದಲು ಬರುವದು ಕಣ್ಣೀರಿನೊಂದಿಗೆ ಅಗತ್ಯಗಳಿಗಾಗಿ ಮಾಡುವ ಬಿನ್ನಹ" ಎರಡನೆಯದು, ಆಸಕ್ತಿಯಿಂದ "ಮಗು"ವೆಂಬ ಭಾವನೆಯಿಂದ ಪ್ರಾರ್ಥಿಸುವದು. ಮೂರನೆಯದಾಗಿ, ಒಬ್ಬರಿಗೋಸ್ಕರ ಒಬ್ಬರು ಮಾಡುವ ಪ್ರಾರ್ಥನೆ. ನಾಲ್ಕನೆಯದು, ದೇವರಿಗೆ ಸ್ತುತಿಸ್ತೋತ್ರಗಳನ್ನು ಅರ್ಪಿಸುವ ಆರಾಧನೆ. ಅಧಿಕ ಸಮಯ ಕರ್ತನ ಪಾದದಲ್ಲಿದ್ದು ಪಳಗಿದವರು, ನಂತರ ಪ್ರಾರ್ಥನೆಯೇ ತಮ್ಮ ಜೀವಿತದ ರೀತಿಯಾಗಿ ಆರಿಸಿಕೊಳ್ಳುವರು. ಎಡಬಿಡದೆ ಪ್ರಾರ್ಥಿಸುವವರು, ಕರ್ತನೊಂದಿಗೆ ಸಂಚರಿಸುವರು.

ದೇವಜನರೇ, ಪರಿಶುದ್ಧತೆಯಿಂದ ದೇವರೊಂದಿಗೆ ನಡೆಯಬೇಕೆಂದರೆ, ಮೊದಲನೆಯದಾಗಿ, ಪಾಪಗಳು ನಿಮ್ಮನ್ನು ಬಿಟ್ಟು ಅಗಲಬೇಕು. ಯಾಕೆಂದರೆ ಕರ್ತನು ಪಾಪವನ್ನು ಸಹಿಸುವದಿಲ್ಲ. ಎರಡನೆಯದಾಗಿ, ಕರ್ತನನ್ನು ಯಾವಾಗಲೂ ನಿಮ್ಮ ಮುಂದೆ ನಿಲ್ಲಿಸಿ, ಆತನನ್ನು ಘನಪಡಿಸಿ ಸ್ತುತಿಸಿರಿ. ಅರಸನಾದ ದಾವೀದನು "ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ" (ಕೀರ್ತ 16:8) ಎಂದು ಹೇಳುತ್ತಾನೆ. ನೀವು ಯಾರನ್ನು ನಿಮ್ಮೊಂದಿಗೆ ಇರಿಸಿಕೊಂಡಿರುವಿರಿ?

**ನೆನಪಿಗೆ : 'ಯೆಹೋವನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವದಾದರೆ, ಆತನು ಹತ್ತಿರವಾಗಿಯೇ ಇದ್ದಾನೆ' (ಕೀರ್ತ 145:18).**

| | | |
|---|---|---|
| **ಮಾರ್ಚ್ 03** | **ನೋಹನ ಪ್ರಾರ್ಥನೆ!** | **ಬೆಳಿಗ್ಗೆ : ಅರಣ್ಯ 28,29,30**<br>**ಸಂಜೆ : ಮಾರ್ಕ 8:22-38** |

**'ಮೇಳೆ ಅಥವಾ ನಾವೆಯ ಪಕ್ಕದಲ್ಲಿ, ಬಾಗಿಲನ್ನಿಡಬೇಕು. ನಾವೆಯಲ್ಲಿ ಒಂದರ ಮೇಲೆ ಒಂದಾಗಿ ಮೂರು ಅಂತಸ್ತುಗಳನ್ನು ಮಾಡಬೇಕು' (ಆದಿ 6:16).**

ನೋಹನ ನಾವೆಯಲ್ಲಿ, ಮೂರು ಅಂತಸ್ತುಗಳಿದ್ದವು. ಇವು ಮನುಷ್ಯನ ಆತ್ಮ, ಪ್ರಾಣ, ಶರೀರಗಳಿಗೆ ಗುರುತಾಗಿದೆ. ಪ್ರಾರ್ಥನೆಯಲ್ಲೂ ಮೂರು ಮೆಟ್ಟಿಲುಗಳಿರುವವು. ಮೊದಲನೆಯದು, ಶಾರೀರಿಕ ಅಗತ್ಯತೆಗಳಿಗಾಗಿ, ಬಂಧುಬಳಗದವರಿಗಾಗಿ ಕುಟುಂಬದವರಿಗಾಗಿ ಮಾಡುವ ಪ್ರಾರ್ಥನೆ. ಎರಡನೆಯದು, ಅವರ ಆತ್ಮ ರಕ್ಷಣೆಗಾಗಿ ಆತ್ಮೀಕ ಆಶೀರ್ವಾದಗಳಿಗಾಗಿ "ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ, ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರ ಬೇಕೆಂದು ಪ್ರಾರ್ಥಿಸುತ್ತೇನೆ" (3ಯೋಹಾ 1:2) ಎಂದು ಯೋಹಾನನು ಹೇಳುತ್ತಾನೆ.

ಇನ್ನು ಮೂರನೆಯ ಮೆಟ್ಟಿಲು, ಅದು ಪರಲೋಕಕ್ಕೆ ಹತ್ತಿರವಾದದ್ದು. ಅಭಿಷೇಕಕ್ಕಾಗಿ, ಕರ್ತನ ಮೆಲು ಧ್ವನಿಯನ್ನು ಕೇಳುವದಕ್ಕಾಗಿ, ಮಾಡುವ ಪ್ರಾರ್ಥನೆ. ನಾವೆಯ ಕೆಳಭಾಗದಲ್ಲಿ ಒಂದು ಬಾಗಿಲು ಇತ್ತು. ಇದು ಏನನ್ನು ಸೂಚಿಸುವದು? ಅಂದು ಆ ಬಾಗಿಲಿನಿಂದ ನಾವೆಯೊಳಗೆ ಪ್ರವೇಶಿಸಿದ ಪ್ರತಿ ಜೀವಿಯು ಜಲಪ್ರಳಯದಿಂದ ರಕ್ಷಿಸಲ್ಪಟ್ಟಿತು. ಹಾಗೆಯೇ ಇಂದು ಕ್ರಿಸ್ತನೇ ಆ ಬಾಗಿಲಾಗಿರುವನು. "ನಾನೇ ಆ ಬಾಗಿಲು; ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ, ಸುರಕ್ಷಿತವಾಗಿದ್ದು ಒಳಗೆ ಹೋಗುವನು ಹೊರಗೆ ಬರುವನು, ಮೇವನ್ನು ಕಂಡುಕೊಳ್ಳುವನು" (ಯೋಹಾ 10:9) ಎಂದು ಕರ್ತನು ಹೇಳುತ್ತಾನೆ. ಆತನು ಬಾಗಿಲು ಮಾತ್ರವಲ್ಲ ಮಾರ್ಗವೂ ಆಗಿರುವನು. "ನಾನೇ ಮಾರ್ಗವೂ, ಸತ್ಯವೂ, ಜೀವವೂ, ಆಗಿರುವೆನು ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾ 14:6) ಎಂದು ಆತನು ಹೇಳುವನು.

ನೋಹನು ನಿರ್ಮಿಸಿದ ನಾವೆಯ ಮೂರನೇ ಅಂತಸ್ತಿನಲ್ಲಿ ಒಂದು ಕಿಟಕಿ ಇತ್ತು. ಆ ಕಿಟಕಿ ನಾವೆಗೆ ಬೆಳಕನ್ನೂ, ಗಾಳಿಯನ್ನೂ ನೀಡುತ್ತಿತ್ತು. ಅದು ಪ್ರಾರ್ಥನೆಗೆ ಗುರುತಾಗಿರುವದು. ಪ್ರಾರ್ಥನಾ ಜೀವಿತ, ಮಾತ್ರವೇ, ತಂದೆ, ಮಗ, ಪವಿತ್ರಾತ್ಮರೊಂದಿಗೆ. ನಿಮಗೆ ಅನ್ಯೋನ್ಯತೆಯನ್ನು ಏರ್ಪಡಿಸುವಂಥದ್ದಾಗಿರುವದು. ಪ್ರಾರ್ಥನೆಯ ವೇಳೆಯಲ್ಲಿ ತಂದೆ ದೇವರೊಂದಿಗೆ ಸಂಭಾಷಿಸುವಿರಿ. ಆತನು ತನ್ನ ಆತ್ಮನ ಮೂಲಕ, ನಿಮ್ಮ ಆತ್ಮದ ಬಲಹೀನತೆಗಳು, ಕೊರತೆಗಳನ್ನು ಯಾವುದೇ ರೀತಿಯ ಸಮಸ್ಯೆಗಳೇ ಆಗಿರಲಿ ಅವುಗಳನ್ನು ಆತನಿಗೆ ತಿಳಿಯಪಡಿಸಿದರೆ ಆಗ ಆತನು ನಿಮ್ಮಲ್ಲಿ ಮಾನಸಾಂತರ ಹುಟ್ಟಿಸಿ, ನಿಮ್ಮನ್ನು ಶುದ್ಧೀಕರಿಸುವನು.

ದೇವಮಕ್ಕಳೇ, ನಿಮ್ಮ ಆತ್ಮೀಕ ಜೀವಿತ ಆರೋಗ್ಯವಾಗಿರಬೇಕೆಂದರೆ, ನಿಮ್ಮ ಆಂತರ್ಯವೆಂಬ ಕಿಟಕಿಯನ್ನು, ಪರಲೋಕಕ್ಕೆ ನೇರವಾಗಿ, ತೆರೆದಿಡಬೇಕು. ನೀವು ಪ್ರಾರ್ಥಿಸುವಾಗ ನಿಮ್ಮ ಆಂತರ್ಯವನ್ನು, ಸಹಾಯ ಒದಗುವ ಪರ್ವತವಾದ ಶಿಲುಬೆಯ ಕಡೆಗೆ ತೆರೆದಿಡಿರಿ. ಆಗ ಆತನು ನಿಮಗೆ ಎಲ್ಲಾ ಆಶೀರ್ವಾದಗಳನ್ನು ಅನುಗ್ರಹಿಸುವನು.

**ನೆನಪಿಗೆ : 'ಅವನ ಸಂತಾನವು ಲೋಕದಲ್ಲಿ ಬಲಿಷ್ಠವಾಗುವದು; ನೀತಿವಂತನ ವಂಶವು; ಶುಭ ಹೊಂದುವದು' (ಕೀರ್ತ 112:2).**

| ಮಾರ್ಚ್ 04 | ಅಬ್ರಹಾಮನ ಪ್ರಾರ್ಥನೆ! | ಬೆಳಗ್ಗೆ : ಅರಣ್ಯ 31,32,33<br>ಸಂಜೆ : ಮಾರ್ಕ 9:1-29 |
|---|---|---|

**'ಅಬ್ರಹಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು' (ಆದಿ 15:6).**

ಅಬ್ರಹಾಮನ ಪ್ರಾರ್ಥನೆ ನಂಬಿಕೆಯ ಪ್ರಾರ್ಥನೆ. ವಾಗ್ದಾನಗಳನ್ನು ಪಡೆದುಕೊಂಡು ದೃಢವಾಗಿ ಪ್ರಾರ್ಥಿಸುವ ಪ್ರಾರ್ಥನೆ. ಅಬ್ರಹಾಮನ ಮೂಲಕ ಇಸ್ರಾಯೇಲ್ಯರೆಲ್ಲರೂ ರಕ್ಷಿಸಲ್ಪಟ್ಟರು. ಹಾಗೆಯೇ ಹೊಸ ಒಡಂಬಡಿಕೆಯಲ್ಲಿ, ನಾವು ಕ್ರಿಸ್ತನಲ್ಲಿ ಆತ್ಮೀಕವಾಗಿಯೂ ಲೌಕೀಕವಾಗಿಯೂ ಆಶೀರ್ವದಿಸಲ್ಪಡುವೆವು.

ನಂಬಿಕೆಯ ಪ್ರಾರ್ಥನೆ ಅಂದರೆ ಏನು? "ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬುವದೇ ಆಗಿದೆ" (ಮಾರ್ಕ 11:24). ಅಬ್ರಹಾಮನು ತನಗೆ ಮಗು ಬೇಕೆಂದು, ಬೇಡಿದನು. ಕರ್ತನು, ಆಕಾಶದ ನಕ್ಷತ್ರಗಳಂತೆ, ನಿನಗೆ ಸಂತತಿಯನ್ನು ನೀಡುವೆನೆಂದು ವಾಗ್ದಾನ ಮಾಡಿದನು. ಅಬ್ರಹಾಮನು ಕರ್ತನನ್ನು ನಂಬಿದನು. ಅದನ್ನು ಕರ್ತನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು. ಅಬ್ರಹಾಮನ ಪ್ರಾರ್ಥನೆಗೆ ಕೂಡಲೇ ಉತ್ತರ ದೊರೆಯದೇ ಹೋದರೂ, ಅವನು ಕರ್ತನು ವಾಗ್ದಾನಿಸಿದಂತೆ ತನಗೆ ಸಂತತಿಯನ್ನು ನೀಡುವನು ಎಂಬ ದೃಢವಾದ ನಂಬಿಕೆಯಿಂದ ಇಪ್ಪತ್ತೈದು ವರುಷಗಳು ಕಾದಿದ್ದನು. ಕರ್ತನು ವಾಗ್ದಾನಿಸಿದಂತೆ, ಅಬ್ರಹಾಮನ ನೂರನೆಯ ವಯಸ್ಸಿನಲ್ಲಿ ಇಸಾಕನನ್ನು ಅನುಗ್ರಹಿಸಿದನು.

ಅಬ್ರಹಾಮನಿಗೆ ಪರಲೋಕ ದರ್ಶನವೂ ಇತ್ತು. ಆತನು ಇಹಲೋಕದ ಆಶೀರ್ವಾದಗಳನ್ನು ನಿರೀಕ್ಷಿಸದೆ, ಪರಲೋಕದ ದರ್ಶನವನ್ನು ನಿರೀಕ್ಷಿಸುತ್ತಿದ್ದನು. ಅವನ ಆಂತರ್ಯ, ವಾಗ್ದಾನ ಮಾಡಲ್ಪಟ್ಟ ಸಂತತಿಯನ್ನೂ, ಪರಮ ಯೆರೂಸಲೇಮನ್ನೂ ನಿರೀಕ್ಷಿಸುತ್ತಿತ್ತು. "ನಂಬಿಕೆಯಿಂದಲೇ, ಅವನು ವಾಗ್ದಾತ್ತದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು....ಇಸಾಕನೂ, ಯಾಕೋಬನೂ ಅವನಂತೆಯೇ ಡೇರೆಗಳಲ್ಲಿ, ವಾಸಿಸಿದರು. ಯಾಕಂದರೆ ಅವನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರು ನೋಡುತ್ತಿದ್ದನು" (ಇಬ್ರಿ 11:9,10).

ದೇವಜನರೇ, ನೀವು ಅಬ್ರಹಾಮನ, ದಾವೀದನ ಸಂತತಿಯೂ. ಕ್ರಿಸ್ತಯೇಸುವಿನ ಸಂತತಿಯೂ ಆಗಿರುವಿರಿ. ಆದ್ದರಿಂದ ನಿಮಗೆ ಮೂರು ಬಲವಾದ ಆಶೀರ್ವಾದಗಳುಂಟು. ಆ ಮೂರು ನಿಮ್ಮ ಆತ್ಮ, ಪ್ರಾಣ, ಶರೀರಗಳಿಗೆ ತಕ್ಕದ್ದಾಗಿದೆ. ನೀವು ನಂಬಿಕೆಯಿಂದ ವಾಗ್ದಾನವನ್ನು ಹಿಡಿದು ಪ್ರಯೋಗಿಸುವಾಗ, ಕರ್ತನು ಎಲ್ಲಾ ವಾಗ್ದಾನಗಳನ್ನು ನೆರವೇರಿಸುವನು. ಮಾತ್ರವಲ್ಲ ಕರ್ತನ ಬಳಿ ತಾಳ್ಮೆಯಿಂದ ಆತನ ಮಕ್ಕಳೆಂಬ ಬಾಧ್ಯತೆಯಿಂದ ಕೇಳಿರಿ, ನೀವು ಆಶೀರ್ವದಿಸಲ್ಪಡುವಿರಿ. ಅಬ್ರಹಾಮನಂತೆ ಕರ್ತನಿಂದ ಆರಿಸಿಕೊಳ್ಳಲ್ಪಡುವಿರಿ. ನೀವು ನಂಬಿಕೆಯ ಸಂತತಿ.

**ನೆನಪಿಗೆ : 'ನೀವು ಕೂಗಿದರೆ ಯೆಹೋವನು ಉತ್ತರ ಕೊಡುವನು. ಮೊರೆಯಿಟ್ಟು, ಕರೆದರೆ ಇಗೋ ಇದ್ದೇನೆ ಅನ್ನುವನು' (ಯೆಶಾ 58:9).**

| ಮಾರ್ಚ್ 05 | ಇಷ್ಮಾಯೇಲನಿಗಾಗಿ ಬಿನ್ನಹ! | ಬೆಳಗ್ಗೆ : ಅರಣ್ಯ 34,35,36<br>ಸಂಜೆ : ಮಾರ್ಕ 9:30-50 |
|---|---|---|

**'ಇಷ್ಮಾಯೇಲನ ವಿಷಯದಲ್ಲಿ ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ ಅವನನ್ನೂ ಆಶೀರ್ವದಿಸಿದ್ದೇನೆ; ಅವನನ್ನು ಅಭಿವೃದ್ಧಿಮಾಡಿ ಅವನಿಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು' (ಆದಿ 17:20).**

ಕರ್ತನು, ಅಬ್ರಹಾಮನಿಗೆ ಅವನ ಎಪ್ಪತ್ತೈದನೆಯ ವಯಸ್ಸಿನಲ್ಲಿ ಮಗುವನ್ನು ಸಂತತಿಯನ್ನು ಕೊಡುವದಾಗಿ ವಾಗ್ದಾನ ಮಾಡಿದನು. ವರುಷಗಳು ಕಳೆದರೂ ಮಗು ಹುಟ್ಟಲೇ ಇಲ್ಲ. ಕರ್ತನ ಸಮಯಕ್ಕಾಗಿ ಕಾದಿರದೆ, ಅಬ್ರಹಾಮನು ತನ್ನ ಹೆಂಡತಿಯಾದ ಸಾರಳ ಮಾತಿಗೆ ಒಡಂಬಟ್ಟು, ದಾಸಿಯಾದ ಹಾಗರಳ ಮೂಲಕ ಇಷ್ಮಾಯೇಲನನ್ನು ಪಡೆದನು. ಆದರೂ ಕರ್ತನು ಅಬ್ರಹಾಮನ ಮೂಲಕ ಇವನ ಸಂತತಿಯನ್ನು ಸಹ ಆಶೀರ್ವದಿಸಿದನು. ಕರ್ತನು ಪುನಃ ಮಾತಾಡಿದನು, ಸಾರಳ ಮೂಲಕ ನಿನಗೆ ಒಂದು ಸಂತತಿಯನ್ನು ನೀಡುವೆನು ಎಂದು ತನ್ನ ವಾಗ್ದಾನವನ್ನು ಸ್ಥಿರಪಡಿಸಿದನು. ಆ ಸಮಯದಲ್ಲಿ ಅಬ್ರಹಾಮನೊಳಗೆ ನಂಬಿಕೆ ಇರಲಿಲ್ಲ. ಆಗ ಅಬ್ರಹಾಮನು ಅಡ್ಡ ಬಿದ್ದು ನಕ್ಕು ನೂರು ವರುಷದವನಿಗೆ ಮಗ ಹುಟ್ಟುವದುಂಟೇ? ತೊಂಭತ್ತು ವರುಷದವಳಾದ ಸಾರಳು ಹೆತ್ತಾಳೇ ಎಂದು ಮನಸ್ಸಿನಲ್ಲಿ ಅಂದುಕೊಂಡನು" (ಆದಿ 17:17).

ನಮ್ಮ ದೇವರು ಒಳ್ಳೆಯವನು, ಕನಿಕರ ತುಂಬಿದಾತನು. ಅನೇಕ ವೇಳೆ ನಮ್ಮ ಆಂತರ್ಯದಲ್ಲಿ ಅವಿಶ್ವಾಸವಿದ್ದರೂ ಸಹ, ಕರ್ತನು ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವಾತನು, ಇಷ್ಮಾಯೇಲನ ಮೇಲೆ ಅಬ್ರಹಾಮನಿಗೆ ಪ್ರೀತಿ ಇತ್ತು. "ಇಷ್ಮಾಯೇಲನು ನಿನ್ನ ಮುಂದೆ ಇರುವನಲ್ಲಾ ಅವನೇ ನಿನ್ನ ದಯೆ ಹೊಂದಿ ಬಾಳಲಿ" ಎಂದು ಬಿನ್ನಹ ಮಾಡಿದನು. ಇಂದು ನಿಮ್ಮ ಮಕ್ಕಳಿಗಾಗಿ ನೀವು ಕರ್ತನ ಬಳಿ ಪ್ರಾರ್ಥಿಸುತ್ತಿರಬಹುದು ನನ್ನ ಮಕ್ಕಳು ತಮ್ಮ ಮನ ಬಂದಂತೆ ಜೀವಿಸುತ್ತಿರುವರೇ, ಅರಿಕೆ ಇಲ್ಲದೆ ಜೀವಿಸುತ್ತಿರುವರೇ ಎಂದು ವ್ಯಥೆ ಪಡುತ್ತಿರಬಹುದು. ನಿಮ್ಮ ಮಕ್ಕಳು ಹೇಗಿದ್ದರೂ ಸರಿ, ಅವರನ್ನು ಕರ್ತನಿಗೆಂದು ಪ್ರತಿಷ್ಠೆ ಪಡಿಸಿರಿ. ಅವರು ಕಲ್ವಾರಿ ರಕ್ತದಿಂದ ತೊಳೆಯಲ್ಪಟ್ಟು, ರಕ್ಷಿಸಲ್ಪಟ್ಟು ಕ್ರಿಸ್ತನೆಂಬ ನಾವೆಯೊಳಗೆ ಬರುವದು ನಿಶ್ಚಯ ನಾನೂ ನನ್ನ ಮನೆಯವರೂ ಕರ್ತನನ್ನೇ ಸೇವಿಸುವೆವು ಎಂದು ಹೇಳಿ ಯೆಹೋಶುವನಂತೆ ಮಕ್ಕಳನ್ನು ಕರ್ತನ ಕರಗಳಲ್ಲಿ ಒಪ್ಪಿಸಿಕೊಡಿರಿ ಆಗ ನಿನ್ನ ಸಂಗಡ ಊಟದ ಮಣೆಯ ಸುತ್ತಲೂ ಕೂತುಕೊಳ್ಳುವ ನಿನ್ನ ಮಕ್ಕಳು ಎಣ್ಣೇ ಮರದ ಸಸಿಗಳಂತಿರುವರು (ಕೀರ್ತ 128:3).

ದೇವಜನರೇ, ನಿಮ್ಮ ಮಕ್ಕಳ ಕುರಿತಾದ ಸಮಸ್ಯೆ ಏನೇ ಇರಲಿ, ಭಯಪಡ ಬೇಡಿರಿ. ಅವರನ್ನು ಕರ್ತನ ಹಸ್ತಗಳಲ್ಲಿ ಒಪ್ಪಿಸಿಕೊಟ್ಟು, ಅವರಿಗಾಗಿ ಕರ್ತನ ಸನ್ನಿಧಾನದಲ್ಲಿ ಉಪವಾಸದಿಂದ ಇದ್ದು ನಂಬಿಕೆಯಿಂದ ಪ್ರಾರ್ಥಿಸಿರಿ. ಕರ್ತನು ನಿಶ್ಚಯವಾಗಿ, ನಿಮ್ಮ ಪ್ರಾರ್ಥನೆಗೆ ಕಿವಿಗೊಟ್ಟು ಸದುತ್ತರವನ್ನು ನೀಡುವನು.

**ನೆನಪಿಗೆ : 'ಕರ್ತನಾದ ಯೇಸುವಿನ ಮೇಲೆ ನಂಬಿಕೆ ಇಡು ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು' (ಅ.ಕೃ 16:31).**

| ಮಾರ್ಚ್ 06 | ಪ್ರಾರ್ಥನೆಯೂ, ಸ್ನೇಹಿತನೂ! | ಬೆಳಗ್ಗೆ : ಧರ್ಮೋ 1,2<br>ಸಂಜೆ : ಮಾರ್ಕ 10:1-31 |
|---|---|---|

**'ಯೆಹೋವನು ತನ್ನೊಳಗೆ ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ?' (ಆದಿ 18:17).**

ನೀವು, ನಿಮ್ಮನ್ನು ಕರ್ತನಿಗೆ ಸ್ನೇಹಿತನನ್ನಾಗಿ ಒಪ್ಪಿಸಿಕೊಟ್ಟರೆ ನಿಶ್ಚಯವಾಗಿ ಕರ್ತನು ಮನಬಿಚ್ಚಿ ನಿಮ್ಮೊಂದಿಗೆ ಮಾತಾಡುವನು. ಅಬ್ರಹಾಮನು "ದೇವರ ಸ್ನೇಹಿತನೆಂದು" ಕರೆಯಲ್ಪಟ್ಟನು (ಯಾಕೋಬ 2:23). ಆದ್ದರಿಂದ ಕರ್ತನು ಹತ್ತು ಸಾರಿ, ಅಬ್ರಹಾಮನಿಗೆ ದರ್ಶನ ನೀಡಿದನು. ಅನೇಕ ಸಾರಿ ತಾನೇ ಅಬ್ರಹಾಮನನ್ನು ಹುಡುಕಿ ಬಂದು ಮಾತಾಡಿದನು. ಕನಸಿನಲ್ಲಿ ಮಾತಾಡಿದನು. ಕೆಲವು ವೇಳೆ ಮುಖಾಮುಖಿಯಾಗಿ ಮಾತಾಡಿದನು.

ಕರ್ತನ ಭಾರವನ್ನು ತನ್ನ ಮೇಲೆ ತೆಗೆದುಕೊಂಡು ಆತನೊಂದಿಗೆ ಸೇರಿ ಪ್ರಾರ್ಥಿಸುವ, ಸ್ನೇಹಿತರನ್ನು ಆತನ ಕಣ್ಣುಗಳು ಹುಡುಕುವದು. ಸೊದೋಮ್ ಗೊಮೋರ ಪಟ್ಟಣ ನಾಶವಾಗುವದರ ಕುರಿತು, ಕರ್ತನು ಅಬ್ರಹಾಮನೊಂದಿಗೆ ಮಾತಾಡಿದಾಗ ಅಬ್ರಹಾಮನು ಕೂಡಲೇ ಮೊಣಕಾಲೂರಿ, "ನೀತಿವಂತರು ನಾಶವಾಗ ಬಾರದು" ಎಂದು ವೈರಾಗ್ಯದಿಂದ, ಬಲವಾಗಿ ಪ್ರಾರ್ಥಿಸಿದನು. ಆಸಕ್ತಿಯಿಂದ, ಗೋಳಾಡಿ ಪ್ರಾರ್ಥಿಸಿದ ಮೊಟ್ಟಮೊದಲ ವ್ಯಕ್ತಿ ಅಬ್ರಹಾಮನೇ ಕರ್ತನು ಅವನ ಪ್ರಾರ್ಥನೆಗೆ ಉತ್ತರ ಕೊಡುತ್ತಲೇ, ಹೋದನು. "ಸೊದೋಮಿನಲ್ಲಿ ಐವತ್ತು ಮಂದಿ ನೀತಿವಂತರು ನನಗೆ ಸಿಕ್ಕಿದರೆ ಅವರ ನಿಮಿತ್ತ ಊರನ್ನೆಲ್ಲಾ ಉಳಿಸುವೆನು" ಎಂದು ಕೂಡಲೇ ಉತ್ತರಕೊಟ್ಟನು (ಆದಿ 18:26). ಪುನಃ ಅಬ್ರಹಾಮನು "ನಾಲ್ವತ್ತೈದು ಮಂದಿ ನೀತಿವಂತರಿದ್ದರೆ" ಎಂದು ಕೇಳಿದಾಗ, ಅದನ್ನು ನಾಶಮಾಡುವದಿಲ್ಲ ಅಂದನು ನಂತರ ಅಲ್ಲಿ ಒಂದು ವೇಳೆ ನಾಲ್ವತ್ತು ಮಂದಿ ನೀತಿವಂತರಿದ್ದರೆ ಎಂದು ಕೇಳಿದಾಗ ಕರ್ತನು ಅದನ್ನು ನಾಶ ಮಾಡುವದಿಲ್ಲ ಅಂದನು (ಆದಿ 18:28,29). ಅಬ್ರಹಾಮನು ಹೀಗೆ ಮುವತ್ತು, ಇಪ್ಪತ್ತು ಹತ್ತು ಎಂದು ಕೇಳುತ್ತಲೇ ಇದ್ದಾಗ, ಕರ್ತನು ತಾಳ್ಮೆಯಿಂದ ಉತ್ತರಿಸುತ್ತಲೇ ಇದ್ದನು.

ಯೇಸುಕ್ರಿಸ್ತನ ಕಾಲದಲ್ಲಿ, ಆತನ ಶಿಷ್ಯರು ಅತನ ಸ್ನೇಹಿತರಾಗಿದ್ದರು. ಯೇಸುಕ್ರಿಸ್ತನು ಪ್ರೀತಿಯಿಂದ "ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳನ್ನುವದಿಲ್ಲ; ಯಜಮಾನನು ಮಾಡುವದು ಆಳಿಗೆ ತಿಳಿಯುವದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ" (ಯೋಹಾ 15:15).

ದೇವಜನರೇ, ನಿಮ್ಮನ್ನು ತನ್ನ ಸ್ನೇಹಿತರೆಂದು ಕರ್ತನು ಆರಿಸಿಕೊಂಡಿರುವನು, ದೇವಸೇವಕರನ್ನು ಆರಿಸಿಕೊಂಡಿರುವನು. ಪ್ರವಾದಿಗಳನ್ನು ಆರಿಸಿಕೊಂಡಿರುವನು. ಪ್ರವಾದಿಗಳ ಮೂಲಕ ತನ್ನ ಚಿತ್ತವನ್ನು ರಹಸ್ಯಗಳನ್ನು ತಿಳಿಯ ಪಡಿಸುವನು (ಆಮೋಸ 3:7). ಯಥಾರ್ಥಹೃದಯದಿಂದ, ಅಸಕ್ತಿಯಿಂದ ಪ್ರಾರ್ಥಿಸುವಿರಾದರೆ ನಿಮ್ಮೊಂದಿಗೂ ಆತನು ಮಾತಾಡುವನು.

**ನೆನಪಿಗೆ : 'ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು' (ಮತ್ತಾ 10:20).**

## ಎಲಿಯೇಜರನ ಪ್ರಾರ್ಥನೆ!

ಬೆಳಗ್ಗೆ : ಧರ್ಮೋ 3,4
ಸಂಜೆ : ಮಾರ್ಕ 10:32-52

**'ನನ್ನ ದಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನೇ, ಈ ಹೊತ್ತು ನಾನು ಬಂದ ಕಾರ್ಯವನ್ನು ನೀನು ಅನುಕೂಲಪಡಿಸಿ....ಬೇಡುತ್ತೇನೆ' (ಆದಿ 24:12).**

ಕೆಲವು ಕಾರ್ಯಗಳು ತಡವಾಗುತ್ತಲೇ ಹೋಗುತ್ತವೆ. ಕೈಗೆ ಸಿಕ್ಕಿದರೂ ಬಾಯಿಗೆ ಸಿಗದೆ ಹೋಗುವದು. ದೀರ್ಘಕಾಲದಿಂದಲೂ ಆಶೀರ್ವಾದವನ್ನು ಬಯಸುತ್ತಿದ್ದರೂ, ದೊರೆಯದೇ ತಡವಾಗುತ್ತಲೇ ಹೋಗುವದು. ಇಂಥಹ ಪರಿಸ್ಥಿತಿಯಲ್ಲಿ ಎಲಿಯೇಜರನು ಪ್ರಾರ್ಥಿಸಿದಂತೆ, ನೀವೂ ಪ್ರಾರ್ಥಿಸಿರಿ. ನೀವು ಎಷ್ಟೇ ಪ್ರಯತ್ನಿಸಿದರೂ, ಕರ್ತನೇ ಕಾರ್ಯ ನಡೆಸಬೇಕು. ಆದ್ದರಿಂದ ನೀವು ಯಾವದಕ್ಕಾಗಿ ಪ್ರಯತ್ನಪಟ್ಟರೂ "ದೇವರೇ, ಇಂದು ನನ್ನ ಕಾರ್ಯವನ್ನು ಸಿದ್ಧಿಗೊಳಿಸು" ಎಂದು ದೈನ್ಯತೆಯಿಂದ ಕೇಳಿರಿ. ಆಗ ಕರ್ತನು ನಿಮಗೆ ಅದ್ಭುತವನ್ನು ಮಾಡುವನು.

ಅಬ್ರಹಾಮನು, ತನ್ನ ಮನೆಯ ಮೇಲ್ವಿಚಾರಕನಾದ ಎಲಿಯೇಜರನಿಗೆ, ಒಂದು ಜವಾಬ್ದಾರಿಯನ್ನು ವಹಿಸಿದನು. ಅದು ತನ್ನ ಮಗನಾದ ಇಸಾಕನಿಗೆ ಬಾಳ ಸಂಗಾತಿಯಾಗಿ ಹೆಣ್ಣನ್ನು ಹುಡುಕುವ ಜವಾಬ್ದಾರಿ. ಗುಣಶಾಲಿಯಾದ ಸ್ತ್ರೀಯನ್ನು ಹುಡುಕುವ ಪ್ರಯತ್ನದಲ್ಲಿ, ಎಲಿಯೇಜರನು ಹೊರಟಾಗ, ಅವನು ಒಂದು ಪ್ರಾರ್ಥನೆಯನ್ನು ಮಾಡಿದನು. "ನನ್ನ ದಣಿಯಾದ ಅಬ್ರಹಾಮನ ದೇವರಾದ ಯೆಹೋವನೇ, ಈ ಹೊತ್ತು ನಾನು ಬಂದ ಕಾರ್ಯವನ್ನು ನೀನು ಅನುಕೂಲಪಡಿಸು ನನ್ನ ದಣಿಯಾದ ಅಬ್ರಹಾಮನಿಗೆ ಉಪಕಾರ ಮಾಡು" ಎಂದು ಪ್ರಾರ್ಥಿಸಿದನು (ಆದಿ 24:12). ಆ ಪ್ರಾರ್ಥನೆಯನ್ನು ಕರ್ತನು ಕೂಡಲೇ ಕೇಳಿದನು. ಎಲಿಯೇಜರನ ಆಲೋಚನೆಯಂತೆಯೇ, ರೆಬೆಕ್ಕಳು ಬಂದು ಅವನಿಗೂ, ಅವನ ಒಂಟೆಗಳಿಗೂ ಬಾವಿಯಿಂದ ನೀರು ಸೇದಿ ಕುಡಿಯಲು ಕೊಟ್ಟಳು. ಆಗ ಎಲಿಯೇಜರನು ಇವಳೇ ತನ್ನ ದಣಿಯ ಮಗನಿಗೆ ಹೆಂಡತಿಯಾಗಲು ತಕ್ಕವಳೆಂದು ಕಂಡುಕೊಂಡನು. ಆಗ ಅವನು ತಲೆಬಾಗಿ ಕರ್ತನನ್ನು ನಮಸ್ಕರಿಸಿ ತನ್ನನ್ನು ನೀಟಾದ ದಾರಿಯಲ್ಲಿ ಕರೆದುಕೊಂಡು ಬಂದದ್ದಕ್ಕಾಗಿ ಆತನನ್ನು ಕೊಂಡಾಡಿದನು (ಆದಿ 24:48).

ದೇವಜನರೇ, ಮಕ್ಕಳ ಮದುವೆ ಒಂದು ವೇಳೆ ತಡೆಯಾಗಿರಬಹುದು, ನೀವು ಮನೆಕಟ್ಟುವ ಪ್ರಯತ್ನಗಳು, ಕೈಗೂಡದೆ ಹೋಗಿರಬಹುದು. ನಿಮ್ಮ ಮಕ್ಕಳ ಕೆಲಸ ಕಾರ್ಯಗಳು ತಡೆಯಾಗಿರಬಹುದು. ಇಂದು ನೀವು ಎಲಿಯೇಜರನಂತೆ ಪ್ರಾರ್ಥಿಸಿರಿ. ಕರ್ತನೇ ನನ್ನ ಪ್ರಯತ್ನಗಳು ಸಿದ್ಧಿಗೆ ಬರುವಂತೆ ಆಶೀರ್ವದಿಸು, ಮಾರ್ಗ ತೋರಿಸು ಎಂದು ಪ್ರಾರ್ಥಿಸಿರಿ. ಮನಗುಂದಿ ಹೋಗಬೇಡಿರಿ, ನಂಬಿಕೆಯಿಂದ ಕರ್ತನಲ್ಲಿ ಭರವಸೆಯಿಡಿರಿ. ಆತನು ನಿಮ್ಮ ಜೀವಿತದಲ್ಲಿ ಮಹತ್ಕಾರ್ಯಗಳನ್ನು ಮಾಡುವನು. ನೀವು ಮಗನ ಆತ್ಮನನ್ನು ಹೊಂದಿದ್ದೀರಿ. ನಿಶ್ಚಯವಾಗಿ ಕರ್ತನು ನಿಮ್ಮ ಬಿನ್ನಹಗಳಿಗೆ ಕಿವಿಗೊಟ್ಟು ನಿಮ್ಮನ್ನು ಘನಪಡಿಸಿ ಒಂದು ಶುಭಸಮಾಚಾರವನ್ನು ತಂದು ನಿಮ್ಮ ಹೃದಯವನ್ನು ಸಂತೋಷಪಡಿಸುವನು. ಆಗ ನೀವು ಆತನನ್ನು ಮನಸಾರೆ ಸ್ತುತಿಸುವಿರಿ.

**ನೆನಪಿಗೆ : 'ಯೆಹೋವನು ಈ ಹೊತ್ತು ಇಸ್ರಾಯೇಲ್ಯರಿಗೆ ಜಯವನ್ನುಂಟು ಮಾಡಿದನು' (1ಸಮು 11:13).**

| ಮಾರ್ಚ್ 08 | ಇಸಾಕನ ಧ್ಯಾನ! | ಬೆಳಗ್ಗೆ : ಧರ್ಮೋ 5,6,7<br>ಸಂಜೆ : ಮಾರ್ಕ 11:1-18 |
|---|---|---|

**'ಇಸಾಕನು ಸಂಜೇ ವೇಳೆಯಲ್ಲಿ, ಧ್ಯಾನ ಮಾಡುವದಕ್ಕೋಸ್ಕರ ಅಡವಿಗೆ ಹೋಗಿದ್ದಾಗ, ಕಣ್ಣೆತ್ತಿ ನೋಡಲಾಗಿ ಒಂಟೆಗಳು ಬರುವದನ್ನು ಕಂಡನು' (ಆದಿ 24:63).**

1."ಯಾವನು, ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ, ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" ಎಂದು ಕೀರ್ತನೆಗಾರನು ಹೇಳುತ್ತಾನೆ. ಧ್ಯಾನ ಪುರುಷನೆಂದು ಕರೆಯಲ್ಪಟ್ಟ ಮೊದಲ ವ್ಯಕ್ತಿ ಇಸಾಕನು. ಎರಡನೆಯವನು ಯೆಹೋಶುವನು. ಮೂರನೆಯವನು ದಾವೀದನು. ಸತ್ಯವೇದವನ್ನು ಧ್ಯಾನಿಸುತ್ತಾ ಧ್ಯಾನಿಸುತ್ತಾ ಅದು ನಿಮ್ಮನ್ನು ಭಾಗ್ಯಕರವಾದ ಅನುಭವಕ್ಕೆ ನಡಿಸುವದು. ಮಾತ್ರವಲ್ಲ ದೇವಪ್ರಸನ್ನತೆಯನ್ನು ನಿಮ್ಮೊಳಗೆ ತರುವದು.

2.ಅಧಿಕವಾದ ಭಕ್ತರು, ಹೊತ್ತಾರೆಯಲ್ಲಿ ದೇವರೊಂದಿಗೆ ಏಕಾಂಗಿಯಾಗಿದ್ದು ಧ್ಯಾನಿಸಿದರು. ಇಸಾಕನು ತನ್ನ ಧ್ಯಾನದ ಸಮಯವನ್ನು ಸಾಯಂಕಾಲದ ವೇಳೆ ಆರಿಸಿಕೊಂಡನು. ಆದರೆ ದಾವೀದನು ಕರ್ತನನ್ನು ರಾತ್ರಿ ವೇಳೆಯಲ್ಲಿ ಅಧಿಕವಾಗಿ ಧ್ಯಾನಿಸಿದನು. "ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು" ಎಂದು ಹೇಳುತ್ತಾನೆ (ಕೀರ್ತ 63:6, 77:12). ಕೆಲವರು, ಸತ್ಯವೇದವನ್ನು ಧ್ಯಾನಿಸುವರು, ಕೆಲವರು ಪ್ರಕೃತಿಯನ್ನು ನೋಡಿ, ಕರ್ತನ ಸೃಷ್ಟಿಯನ್ನು ಧ್ಯಾನಿಸುವರು, ಕೆಲವರು ಹಿಂದಿನ ದಿನಗಳನ್ನು ಪುರಾತನ ವರುಷಗಳನ್ನು ಧ್ಯಾನಿಸುವರು.

3.ಇಂದು ಅನೇಕ ಧರ್ಮಗಳಿಂದ ಕೂಡಿದ ನಮ್ಮ ಭಾರತ ದೇಶದಲ್ಲಿ ಅನೇಕ ಆಶ್ರಮಗಳು, ಧ್ಯಾನಪೀಠಗಳು, ಧ್ಯಾನಕ್ಕಾಗಿ ಇರುವವು. ಆದರೆ ನಮಗೆ ಒಂದು ಧ್ಯಾನ ಪೀಠ ಇರುವದೆಂದರೆ ಅದು ಗೊಲ್ಗೋಥಾ ಬೆಟ್ಟದ ಕ್ರಿಸ್ತನ ಕಲ್ವಾರಿ ಶಿಲುಬೆಯೇ ಆಗಿದೆ. ನಮಗಾಗಿ ತನ್ನನ್ನೇ ಸಜೀವ ಯಜ್ಞವಾಗಿ ಅರ್ಪಿಸಿದ ಕ್ರಿಸ್ತನ ಅಡಿದಾವರೆಯೇ ನಮ್ಮ ಧ್ಯಾನ ಪೀಠವಾಗಿರುವದು. ಆತನು ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಜಜ್ಜಲ್ಪಟ್ಟ ಗಾಯಗಳೇ ನಮ್ಮ ಧ್ಯಾನವಾಗಿರುವುದು.

ದೇವಜನರೇ, ಕ್ರಿಸ್ತನ ಶಿಲುಬೆಯ ಬಳಿಗೆ ಬಂದು, ನಿಮ್ಮ ಹೊರೆಗಳನ್ನು, ಮನೋವೇದನೆಗಳನ್ನು, ಚಿಂತೆಗಳನ್ನು ಇಳಿಸಿ ಬಿಡಿರಿ. ಆಗ ಕರ್ತನ ಪ್ರೀತಿಯ ಅಗ್ನಿ ನಿಮ್ಮ ಆಂತರ್ಯದಲ್ಲಿ ಹತ್ತಿ ಉರಿಯುವದು, ಮಾತ್ರವಲ್ಲ ಧ್ಯಾನದ ಸಮಯದಲ್ಲಿ ಕರ್ತನೊಂದಿಗೆ ಸದಾಕಾಲವು ನೀವು ಪರಲೋಕದಲ್ಲಿ ಇರುವದನ್ನು ನೆನಸಿ, ಆತನನ್ನು ಸ್ತುತಿಸಿರಿ. ನಿಮಗಾಗಿ ವಾಸಸ್ಥಳಗಳನ್ನೂ ಕಿರೀಟಗಳನ್ನೂ ಪರಲೋಕದಲ್ಲಿ ಏರ್ಪಡಿಸಿರುವನಲ್ಲವೇ! ನಿತ್ಯಜೀವವನ್ನು ನೀಡಿರುವನಲ್ಲವೇ! ಇದನ್ನು ಧ್ಯಾನಿಸುವಾಗ, ಅದು ಪರಿಶುದ್ಧ ಜೀವಿತವನ್ನು ಜೀವಿಸುವಂತೆ ನಿಮ್ಮನ್ನು ಪ್ರೇರೇಪಿಸುವದು.

**ನೆನಪಿಗೆ : 'ನಿನ್ನ ನೇಮಗಳನ್ನು ಧ್ಯಾನಿಸುತ್ತಾ ನಿನ್ನ ದಾರಿಯನ್ನು ಲಕ್ಷೀಕರಿಸಿಕೊಳ್ಳುವೆನು ನಿನ್ನ ನಿಬಂಧನೆಗಳಲ್ಲಿ ಉಲ್ಲಾಸ ಪಡುವೆನು; ನಿನ್ನ ವಾಕ್ಯವನ್ನು ಮರೆಯುವದಿಲ್ಲ' (ಕೀರ್ತ 119:15,16).**

| ಮಾರ್ಚ್ 09 | ಹೆಂಡತಿಗಾಗಿ ಪ್ರಾರ್ಥನೆ! | ಬೆಳಗ್ಗೆ : ಧರ್ಮೋ 8,9,10<br>ಸಂಜೆ : ಮಾರ್ಕ 11:19-33 |
|---|---|---|

**'ಆಕೆ ಬಂಜೆಯಾಗಿರಲಾಗಿ, ಅವನು ಯೆಹೋವನನ್ನು ಬೇಡಿಕೊಂಡನು' (ಆದಿ 25:21).**

ಇಸಾಕನು ಎಲ್ಲಿ ಹೋಗಿ ಪ್ರಾರ್ಥಿಸಿರಬಹುದು? ಆ ಕಾಲದಲ್ಲಿ ದೇವದರ್ಶನ ಗುಡಾರವಿರಲಿಲ್ಲ, ದೇವಾಲಯವಿರಲಿಲ್ಲ. ಅಬ್ರಹಾಮನು ಪ್ರಾರ್ಥಿಸಬೇಕು, ದೇವರನ್ನು ಸಂಧಿಸಬೇಕು ಎಂಬ ಆಲೋಚನೆ ಬಂದಾಗಲೆಲ್ಲಾ ಯಜ್ಞವೇದಿಯನ್ನು ಕಟ್ಟಿ, ಯಜ್ಞವನ್ನು ಸಮರ್ಪಿಸಿದಾಗ, ದೇವರು ಯಜ್ಞವೇದಿಯ ಜ್ವಾಲೆಯಲ್ಲಿ ಇಳಿದು ಬರುತ್ತಿದ್ದನು. ಅಬ್ರಹಾಮನೊಂದಿಗೆ ಮುಖಾಮುಖಿಯಾಗಿ ಸ್ನೇಹಿತನಂತೆ ಮಾತಾಡುತ್ತಿದ್ದನು.

ಇಸಾಕನು, ದೇವರನ್ನು ಆರಾಧಿಸಬೇಕೆಂದು ಯೋಚಿಸಿದಾಗ, ಅವನು ಮೊರಿಯಾ ಬೆಟ್ಟಕ್ಕೆ ಹೋಗಿ ಪ್ರಾರ್ಥಿಸುತ್ತಿದ್ದನೆಂದು ಯೆಹೂದ್ಯ ರಬ್ಬಿಗಳು ಹೇಳುವರು. ಅದು ಅಬ್ರಹಾಮನು ಇಸಾಕನನ್ನು ಯಜ್ಞವಾಗಿ ಅರ್ಪಿಸಲು ಕಟ್ಟಿದ ಯಜ್ಞವೇದಿ. ಅಬ್ರಹಾಮನು ಮುಳ್ಳಿನ ಪೊದೆಯಲ್ಲಿ ಸಿಕ್ಕಿಕೊಂಡಿದ್ದ ಟಗರನ್ನು ದೇವರ ಮಾತಿನಂತೆ ತನ್ನ ಮಗನಾದ ಇಸಾಕನಿಗೆ ಬದಲಾಗಿ ಯಜ್ಞವಾಗಿ ಅರ್ಪಿಸಿದ ಯಜ್ಞವೇದಿ, ಆ ಸ್ಥಳವು ಯೆಹೋವ ಯೀರೆ ಎಂದು ಕರೆಯಲ್ಪಟ್ಟಿತು (ಆದಿ 22:13,14). ಆಗ ಆಕಾಶದಿಂದ ಒಂದು ಶಬ್ದ ಕೇಳಿಸಿತು (ಇಸಾಕನು ಕರ್ತನ ಸ್ವರವನ್ನು ಮೊಟ್ಟ ಮೊದಲ ಬಾರಿಗೆ ಕೇಳಿದ ಸ್ಥಳ ಇದುವೇ) ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು. ಅದನ್ನು ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು (ಆದಿ 22:17) ಎಂದು ಕರ್ತನು ಸ್ಪಷ್ಟವಾಗಿ ಮಾತಾಡಿದನು.

ಇಸಾಕನು, ಕರ್ತನ ವಾಗ್ದಾನವನ್ನು ಮರೆತುಹೋಗಲಿಲ್ಲ, ಆದ್ದರಿಂದಲೇ ಇಸಾಕನು ಕರ್ತನು ವಾಗ್ದಾನಮಾಡಿದ ಸ್ಥಳಕ್ಕೆ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿ ತನ್ನ ಮನವಿಯನ್ನು ಸಲ್ಲಿಸಿದನು. ಸತ್ಯವೇದದಲ್ಲಿ ಇಸಾಕ, ರೆಬೆಕ್ಕ ಒಳ್ಳೆಯ ದಂಪತಿಗಳೆಂದು ಕರೆಯಲ್ಪಟ್ಟಿರುವರು. ಬಂಜೆಯಾದ ರೆಬೆಕ್ಕಳಿಗೋಸ್ಕರ ಇಸಾಕನು ಪ್ರಾರ್ಥಿಸಿದನು. ಪ್ರಾರ್ಥಿಸುವ ದಂಪತಿಗಳಿಂದ ಕುಟುಂಬ ಆಶೀರ್ವದಿಸಲ್ಪಡುವದು ರೆಬೆಕ್ಕಳಿಗೆ ಕರ್ತನು ಅವಳಿ ಮಕ್ಕಳನ್ನು ಅನುಗ್ರಹಿಸಿದನು.

ದೇವಮಕ್ಕಳೇ, ನಿಮಗೂ ಒಂದು ಪ್ರಾರ್ಥನಾ ಸ್ಥಳ ಅಗತ್ಯವಾದದ್ದು. ಅಬ್ರಹಾಮ ಇಸಾಕರು ದೇವರ ಯಜ್ಞವೇದಿಯ ಬಳಿ ಪ್ರಾರ್ಥಿಸಿದರು. ಹನ್ನಳು, ಹಿಜ್ಕೀಯನು ದೇವಾಲಯದಲ್ಲಿ ಪ್ರಾರ್ಥಿಸಿದರು. ದಾನಿಯೇಲನು ಯೆರೂಸಲೇಮಿಗೆ ಅಭಿಮುಖವಾಗಿ ಕಿಟಿಕಿಗಳನ್ನು ತೆರೆದು ಪ್ರಾರ್ಥಿಸಿದನು. ನಮ್ಮ ಕರ್ತನಾದ ಯೇಸುಕ್ರಿಸ್ತನು ತನ್ನ ಪ್ರಾರ್ಥನಾ ಸ್ಥಳವಾಗಿ, ಗೆತ್ಸೇಮನೇ ತೋಟವನ್ನು ಆರಿಸಿಕೊಂಡನು. ಪ್ರಿಯರೇ ನೀವೂ ನಿಮ್ಮ ಮನೆಯಲ್ಲಿ ಒಂದು ಸ್ಥಳವನ್ನು ಪ್ರಾರ್ಥನೆಗಾಗಿ ಆರಿಸಿಕೊಂಡು ಅಲ್ಲಿ ಪ್ರಾರ್ಥಿಸಿರಿ. ದೇವ ಪ್ರಸನ್ನತೆಯನ್ನು ಅನುಭವಿಸಿರಿ. ನಿಮ್ಮ ಪ್ರಾರ್ಥನೆಯನ್ನು ಕೇಳಲು ಕರ್ತನು ಉತ್ಸುಕನಾಗಿರುವನು.

**ನೆನಪಿಗೆ : 'ನಾವು ಉಪವಾಸ ಮಾಡಿ ದೇವರನ್ನು ಪ್ರಾರ್ಥಿಸಲು ಆತನು ನಮಗೆ ಪ್ರಸನ್ನನಾದನು' (ಎಜ್ರ 8:23).**

## ರೆಬೆಕ್ಕಳ ಪ್ರಾರ್ಥನೆ!

ಬೆಳಿಗ್ಗೆ : ಧರ್ಮೋ 11,12,13
ಸಂಜೆ : ಮಾರ್ಕ 12:1-27

**'ಆಕೆಯ ಗರ್ಭದಲ್ಲಿ ಶಿಶುಗಳು ಒಂದನ್ನೊಂದು ನೂಕಿಕೊಂಡಾಗ ಆಕೆಯು ಹೀಗಾದರೆ ನಾನು ಯಾಕೆ ಬದುಕಬೇಕು? ಎಂದು ಹೇಳಿ ಇದರ ವಿಷಯದಲ್ಲಿ ಯೆಹೋವನ ಸನ್ನಿಧಿಯಲ್ಲಿ ವಿಚಾರಿಸುವದಕ್ಕೆ ಹೋದಳು' (ಆದಿ 25:22).**

ಹೀಗಾದರೆ ನಾನು ಯಾಕೆ ಬದುಕಬೇಕು? ಎಂದು ರೆಬೆಕ್ಕಳು ಕಳವಳಗೊಂಡಳು. ಕಾರಣ ಅವಳ ಗರ್ಭದಲ್ಲಿದ್ದ ಅವಳಿ ಮಕ್ಕಳು ಇದ್ದವು. ಆ ಮಕ್ಕಳು ಒಬ್ಬರೊಂದಿಗೊಬ್ಬರು ನೂಕಾಡುತ್ತಿದ್ದವು. ಗರ್ಭದಲ್ಲಿರುವಾಗಲೇ ಹೋರಾಟ, ಜಗಳ, ಪ್ರಪಂಚಕ್ಕೆ ಇನ್ನೂ ಕಾಲಿಟ್ಟಿರಲಿಲ್ಲ. ಪಾಪವು ಅವುಗಳನ್ನು ಮುಟ್ಟಲು ಅವಕಾಶವಿಲ್ಲ. ಆದಾಗ್ಯೂ ಒಂದು ಹೋರಾಟ. ನಾನು ಮೊದಲಾ? ನೀನು ಮೊದಲಾ? ಜ್ಯೇಷ್ಠ ಪುತ್ರಭಾಗ್ಯ ನನಗಾ? ನಿನಗಾ? ಎಂದು ಹೋರಾಟ.

ಶಿಶುಗಳು, ಗರ್ಭದಲ್ಲಿ ನೂಕಾಡುತ್ತಿದ್ದಾಗ, ಕಳವಳಕ್ಕೀಡಾದಳು ರೆಬೆಕ್ಕ, ಒಂದು ವೇಳೆ ತನ್ನ ಪ್ರಾಣಕ್ಕೆ ಅಪಾಯ ಉಂಟಾಗುವದಾ? ಹತ್ತು ತಿಂಗಳುಗಳ ಮೊದಲೇ ಪ್ರಸವ ಸಂಭವಿಸುವದಾ? ಮಕ್ಕಳ ಭವಿಷ್ಯತ್ಕಾಲ ಹೇಗೆ ಇರುವದು? ಎಂಬ ಹಲವು ಯೋಚನೆಗಳು ಅವಳನ್ನು ಕಾಡಿತು. ಆದ್ದರಿಂದ ಅವಳು ದೇವರ ಸನ್ನಿಧಿಗೆ ಹೋಗಿ ವಿಚಾರಿಸಿದಳು. ಇಲ್ಲಿಯೇ ಮೊಟ್ಟಮೊದಲ "ಕರ್ತನ ಬಳಿ ವಿಚಾರಿಸಿರಬಹುದು" ಎಂಬುದರ ಕುರಿತು ನಾವು ತಿಳಿಯುತ್ತೇವೆ. ಬೇರೆ ಎಲ್ಲಾ ಕಡೆಗಳಲ್ಲಿ ಕರ್ತನ ಬಳಿ ಭಕ್ತರು ಪ್ರಾರ್ಥಿಸಿದರು, ಧ್ಯಾನ ಮಾಡಿದರು, ಎಂದು ಓದುತ್ತೇವೆ. ಮೋಶೆಯು ಅರಣ್ಯದಲ್ಲಿ ದೇವದರ್ಶನ ಗುಡಾರವನ್ನು ನಿರ್ಮಿಸಿದಾಗ, ಕರ್ತನ ಬಳಿ ವಿಚಾರಿಸಲು ಇಸ್ರಾಯೇಲ್ಯರು ದೇವರ ಸನ್ನಿಧಿಗೆ ಹೋದರು (ವಿಮೋ 33:7). ಕೆಲವರು ದೇವರ ಬಳಿ ವಿಚಾರಿಸುವಾಗ, ಆತನು ಮೆಲುದನಿಯಲ್ಲಿ ಅವರೊಂದಿಗೆ ಮಾತಾಡಿ ಉತ್ತರ ನೀಡುವನು. ಕೆಲವರಿಗೆ, ಯಾಜಕರ ಮೂಲಕ ಉತ್ತರಿಸುವನು. ಹೌದು ಕರ್ತನ ಇನ್ನೊಂದು ಹೆಸರು "ಆಲೋಚನಾ ಕರ್ತನು" ಎಂಬುದು.

ದೇವಜನರೇ, ಈ ಲೋಕದ ಯಾತ್ರೆಯಲ್ಲಿ ನೀವು ಅನೇಕ ಸಮಸ್ಯೆಗಳ ಹೋರಾಟಗಳ ಸಂಕಟಗಳ ಮಧ್ಯೆ ಸಾಗಿಹೋಗಬೇಕಾಗಿರುವದು. ಅನೇಕ ವೇಳೆ ದಿಕ್ಕುತೋಚದ ಪರಿಸ್ಥಿತಿ ಉಂಟಾಗುವದು. ಅಂಥಹ ವೇಳೆಗಳಲ್ಲಿ ಕರ್ತನ ಸನ್ನಿಧಿಯಲ್ಲಿ ನಿಮ್ಮ ಸಮಸ್ಯೆಗಳನ್ನು ಇಟ್ಟು, ಆತನ ಆಲೋಚನೆಗಳನ್ನು ಪಡೆಯಿರಿ. ನೀನು ನನಗೆ ಜೀವ ಮಾರ್ಗವನ್ನು ತಿಳಿಯ ಪಡಿಸುವಿ. ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ (ಕೀರ್ತ 16:11) ಎಂದು ಹೇಳಿರಿ. ನಮ್ಮ ಆಲೋಚನೆಗಳಿಗಿಂತ ಆತನ ಆಲೋಚನೆಗಳು ನಮ್ಮ ಮಾರ್ಗಗಳಿಗಿಂತ ಆತನ ಮಾರ್ಗಗಳು ಆಕಾಶದಷ್ಟು ಉನ್ನತವಾದದ್ದು.

**ನೆನಪಿಗೆ : 'ಯೆಹೋವನು ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು ಅನುತ್ತಾನಲ್ಲಾ' (ಕೀರ್ತ 32:8).**

## ಏಸಾವನ ನಿರ್ಲಕ್ಷ್ಯ!

ಬೆಳಗ್ಗೆ : ಧರ್ಮೋ 14,15,16
ಸಂಜೆ : ಮಾರ್ಕ 12:28-44

**'ಅದಕ್ಕೆ ಏಸಾವನು ಆಗಲಿ ಹೇಗೂ ಸಾಯುವವನಿಗೆ ಚೊಚ್ಚಲತನದಿಂದ ಪ್ರಯೋಜನವೇನು? ಅಂದನು' (ಆದಿ 25:32).**

ಯಾವದನ್ನು ಆರಿಸಿಕೊಳ್ಳುವದು ಜೇಷ್ಠಪುತ್ರ ಆಶೀರ್ವಾದವನ್ನೋ? ಅಥವಾ ಹೊಟ್ಟೆ ತುಂಬಿಸುವ ಊಟವನ್ನೋ? ಅಂದು ಇಸಾಕನ ಚೊಚ್ಚಲಮಗನಾದ ಏಸಾವನು ರೊಟ್ಟಿಯನ್ನು ಅಲಸಂದಿ ಗುಗ್ಗರಿಯನ್ನೂ ಬಯಸಿ, ತನ್ನ ಜೇಷ್ಠಪುತ್ರ ಹಕ್ಕನ್ನು ನಿರ್ಲಕ್ಷಿಸಿದನು. ಒಂದು ಹೊತ್ತಿನ ಊಟಕ್ಕಾಗಿ ತನ್ನ ಜೇಷ್ಠಪುತ್ರ ಭಾಗ್ಯವನ್ನು ಮಾರಿಬಿಟ್ಟನು. ಹಾಗೂ ತನಗೆ ಬರಬೇಕಾದ ಆಶೀರ್ವಾದವನ್ನು ತಾನೇ ಕಳೆದುಕೊಂಡನು.

ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅವಳಿ ಮಕ್ಕಳಾಗಿದ್ದರೂ ಸಹ, ಏಸಾವನ, ಯಾಕೋಬನ ಆರಿಸಿಕೊಳ್ಳುವಿಕೆಯಲ್ಲಿ ವ್ಯತ್ಯಾಸವಿತ್ತು. ಏಸಾವನು ಭೂಸಂಬಂಧವಾದ ಜೀವಿತವನ್ನು ಜೀವಿಸಿ, ಜೇಷ್ಠಪುತ್ರ ಭಾಗ್ಯವನ್ನು ನಿರ್ಲಕ್ಷಿಸಿದನು. ಯಾಕೋಬನೋ ಜೇಷ್ಠಪುತ್ರ ಭಾಗ್ಯದ ಮೇಲೂ, ದೇವ ಆಶೀರ್ವಾದಗಳ ಮೇಲೂ ದಾಹಗೊಂಡವನಾಗಿದ್ದನು. ಯಾಕೋಬನು, ಅಡಿಗೆ ಮಾಡುತ್ತಿದ್ದಾಗ ಬೇಟೆಗೆ ಹೋಗಿ ಹಸಿದವನಾಗಿ ಬಂದ ಏಸಾವನಿಗೆ ಚೊಚ್ಚಲುತನದ ಹಿರಿಮೆಯ ಆಶೀರ್ವಾದ, ಹಸಿವಿನ ಮುಂದೆ ಅಲ್ಪವಾಗಿ ಕಂಡಿತು. ಆದ್ದರಿಂದಲೇ ನನ್ನಂಥ ಸಾಯುವವನಿಗೆ ಚೊಚ್ಚಲುತನದಿಂದ ಪ್ರಯೋಜನವೇನು? ಎಂದು ಹೇಳಿದನು (ಆದಿ 25:32). ಸಾಧಾರಣವಾಗಿ ಒಬ್ಬ ಮನುಷ್ಯನು ಎಂಬತ್ತು ದಿನಗಳು ಆಹಾರವಿಲ್ಲದೆ ಜೀವಿಸಲು ಸಾಧ್ಯ. ಅನೇಕರು ನಾಲ್ವತ್ತು ದಿನಗಳು ಉಪವಾಸವಿದ್ದು ಹಸಿವನ್ನು ಲೆಕ್ಕಿಸದೆ ಪ್ರಾರ್ಥಿಸಿ, ಕರ್ತನಿಗಾಗಿ ಮಹಿಮೆಯಾದ ಕಾರ್ಯಗಳನ್ನು ಮಾಡುವರು ಮೋಶೆ, ಎಲೀಯರಂಥಹ ಭಕ್ತರು ನಾಲ್ವತ್ತು ದಿನಗಳು ಉಪವಾಸವಿದ್ದರಲ್ಲವಾ? ಯೇಸುಕ್ರಿಸ್ತನು ತನ್ನ ಸೇವೆಯನ್ನು ಪ್ರಾರಂಭಿಸುವ ಮೊದಲು, ನಾಲ್ವತ್ತು ದಿನಗಳು ಉಪವಾಸವಿರಲಿಲ್ಲವೇ? ಇಂದು ಕ್ರೈಸ್ತ ವಿಶ್ವಾಸಿಗಳ ಆರಿಸಿಕೊಳ್ಳುವಿಕೆಯನ್ನು ಎರಡು ಭಾಗವಾಗಿ ವಿಂಗಡಿಸಬಹುದು ಒಂದು ಗುಂಪು ಲೋಕ ಸಂಬಂಧವಾದವುಗಳನ್ನೇ ಆರಿಸಿಕೊಳ್ಳುವರು ಹಣ, ಹೆಸರು, ಲೌಕೀಕ ಆಶೀರ್ವಾದಗಳು, ಅಧಿಕಾರ ಇವುಗಳನ್ನು ಆರಿಸಿಕೊಳ್ಳುವರು. ಇನ್ನೊಂದು ಗುಂಪು ಕರ್ತನನ್ನು ಪ್ರೀತಿಸಿ, ಆತನ ಪಾದದಲ್ಲಿ ಕಾದಿದ್ದು, ಆತ್ಮೀಕ ಆಶೀರ್ವಾದಗಳನ್ನು ಆರಿಸಿಕೊಳ್ಳುವರು. ಇಂದು ಅನೇಕರಿಗೆ ಕರ್ತನ ಕಾರ್ಯಗಳ ಮೇಲೆ ದಾಹವಿಲ್ಲ ಕರ್ತವ್ಯಕ್ಕಾಗಿ ಸತ್ಯವೇದ ವಾಚನ, ಕರ್ತವ್ಯಕ್ಕಾಗಿ ಪ್ರಾರ್ಥನೆ, ಕರ್ತವ್ಯಕ್ಕಾಗಿ ದೇವಾಲಯಕ್ಕೆ ಹೋಗುವದು ವಾಡಿಕೆಯಾಗಿ ಹೋಗಿದೆ.

ದೇವಜನರೇ, ಕರ್ತನು ಪಕ್ಷಪಾತಿಯಲ್ಲ, ಯಾರ್‍ಯಾರು ಆಸಕ್ತಿಯಿಂದ, ದಾಹದಿಂದ, ಆತನನ್ನು ಪ್ರೀತಿಸಿ ಹುಡುಕುವರೋ ಅಂಥವರು, ಭೂಲೋಕ ಸಂಬಂಧವಾದ ಆಶೀರ್ವಾದಗಳನ್ನೂ ಪರಲೋಕದ ಆಶೀರ್ವಾದಗಳನ್ನೂ ಬಾಧ್ಯತೆಯಾಗಿ ಪಡೆದುಕೊಳ್ಳುವರು. ಹಾಗೂ ಆತನನ್ನೆ ಮರೆಹೊಕ್ಕವರೆಲ್ಲರು ಸಂತೋಷಪಟ್ಟು ನೀನು ಕಾಪಾಡುವವನೆಂದು ನಿನ್ನಲ್ಲಿ ಉಲ್ಲಾಸಗೊಳ್ಳುವರು.

**ನೆನಪಿಗೆ : 'ದೇವರೇ, ನೀನೇ ನನ್ನ ದೇವರು;... ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ' (ಕೀರ್ತ 63:1).**

## ಪ್ರಾರ್ಥನೆಯಿಂದ ನೂರರಷ್ಟು!

ಬೆಳಗ್ಗೆ : ಧರ್ಮೋ 17,18,19
ಸಂಜೆ : ಮಾರ್ಕ 13:1-23

**'ಇಸಾಕನು ಆ ದೇಶದಲ್ಲಿ ಬೀಜವನ್ನು ಬಿತ್ತಿ, ಅದೇ ವರುಷದಲ್ಲಿ ನೂರರಷ್ಟು ಬೆಳೆಯನ್ನು ಹೊಂದಿದನು ಯೆಹೋವನು ಅವನನ್ನು ಅಭಿವೃದ್ಧಿಪಡಿಸಿದನು' (ಆದಿ 26:12).**

ಇಸಾಕನು ಯಾವಾಗಲೂ ದೇವರ ಪೂರ್ಣಚಿತ್ತವನ್ನು ನೆರವೇರಿಸಿದನು. ಅಬ್ರಹಾಮನು ಇಸಾಕನನ್ನು ಯಜ್ಞವಾಗಿ ಅರ್ಪಿಸಲು ಸಿದ್ಧನಾದಾಗ, ಪೂರ್ಣ ಹೃದಯದಿಂದ ಸಿದ್ಧವಾದನು. ಇಸಾಕನು ಯೇಸುಕ್ರಿಸ್ತನಿಗೆ ಗುರುತಾಗಿರುವನು. ಯೇಸುಕ್ರಿಸ್ತನು, ಕಲ್ವಾರಿ ಶಿಲುಬೆಯಲ್ಲಿ ತನ್ನನ್ನು ಪೂರ್ಣವಾಗಿ ತಂದೆ ದೇವರಿಗೆ ಒಪ್ಪಿಸಿಕೊಟ್ಟಂತೆ, ಇಸಾಕನು ತನ್ನ ತಂದೆಗೆ ತನ್ನನ್ನು ಒಪ್ಪಿಸಿ ಕೊಟ್ಟನು.

ಎರಡನೆಯದಾಗಿ, ಇಸಾಕನಿಗೆ ನಾಲ್ವತ್ತು ವರುಷ ವಯಸ್ಸಾದಾಗ, ತನಗಾಗಿ ಹೆಣ್ಣನ್ನು ಆರಿಸಿಕೊಳ್ಳದೆ, ನನಗಾಗಿ ಚಿಂತಿಸುವ ತಂದೆ ಇರುವನು, ಆತನು ಎಲ್ಲವನ್ನೂ ಅಯಾ ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸುವನು ಎಂದು ನಂಬಿಕೆಯಿಂದ ಇದ್ದನು. ಮೂರನೆಯದಾಗಿ, ಇಸಾಕನ ಒಂದು ವಿಶೇಷವಾದ ಗುಣ, ಅವನು ಧ್ಯಾನ ಪುರುಷನಾಗಿದ್ದನು (ಆದಿ 24:63). ದೇವರು ಮಾಡಿದ ವಾಗ್ದಾನಗಳನ್ನು ಸಂಜೆ ವೇಳೆಯಲ್ಲಿ ಧ್ಯಾನಿಸಿ ಪ್ರಾರ್ಥಿಸುತ್ತಿದ್ದನು. ಇಸಾಕನು, ನಂಬಿಕೆಯುಳ್ಳವನಾಗಿ, ಪರಿಶುದ್ಧನಾಗಿ, ದೇವಚಿತ್ತವನ್ನು ಕೇಳುವವನಾಗಿ, ಅಬ್ರಹಾಮನಿಗೆ ವಿಧೇಯನಾಗಿ ಇದ್ದದ್ದರಿಂದ, ಎಲ್ಲಾ ಆಶೀರ್ವಾದಗಳಿಗೆ ಬಾಧ್ಯಸ್ಥನಾಗಿದ್ದನು. ಅಬ್ರಹಾಮನು ತನಗಿದ್ದ ಆಸ್ತಿಯನ್ನೆಲ್ಲಾ ಇಸಾಕನಿಗೆ ಕೊಟ್ಟನು (ಆದಿ 25:5). ಇಸಾಕನ ಗುಣಗಳು ನಿಮ್ಮೊಳಗೆ ಕಾಣಲ್ಪಡಲಿ ಆಗ ನಿಶ್ಚಯವಾಗಿ ನೂರರಷ್ಟು ಆಶೀರ್ವಾದವನ್ನು ನೀವು ಪಡೆಯುವಿರಿ.

ಇಸಾಕನ ದೇವರು, ನಿಮ್ಮನ್ನು ಪರಿಪೂರ್ಣವಾಗಿ ಆಶೀರ್ವದಿಸಲು ಬಯಸುತ್ತಾನೆ. ಯಾವದರಲ್ಲಿಯೂ ನೀವು ಕೊರತೆಯಿಲ್ಲದವರಾಗಿರಬೇಕೆಂದು ಆತನು ಬಯಸುವನು. ಅಪೊ.ಪೌಲನು "ಕರ್ತನಲ್ಲಿ ಸರ್ವ ಸಂಪೂರ್ಣತೆಯು ವಾಸವಾಗಿರುವದೆಂದು" ಹೇಳುತ್ತಾನೆ (ಕೊಲೊ 1:19). ಆತನು ಜೀವವು ಇರಬೇಕೆಂತಲೂ, ಅದು ಸಮೃದ್ಧಿಯಾಗಿರ ಬೇಕೆಂತಲೂ ಬಯಸುವನು (ಯೋಹಾ 10:10). ಇಸಾಕನೂ ನೂರರಷ್ಟು ಆಶೀರ್ವಾದದಿಂದ, ಐಶ್ವರ್ಯ, ವೃದ್ಧಿ, ಹೆಸರು ಪಡೆದನು.

ದೇವಮಕ್ಕಳೇ, ನೀವು ಈ ಆಶೀರ್ವಾದಗಳನ್ನೆಲ್ಲಾ ಬಾಧ್ಯತೆಯಾಗಿ ಪಡೆಯಬೇಕಾ? ಇಸಾಕನಂತೆ ಬೀಜವನ್ನು ಬಿತ್ತಿರಿ. ಪ್ರಾರ್ಥನೆಯೆಂಬ ಬೀಜ ಬಿತ್ತಿರಿ. ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು. (ಕೀರ್ತ 126:5,6). ನಂಬಿಕೆಯಿಂದ ಬೀಜ ಬಿತ್ತಿರಿ. ಅನೇಕರು ಬೀಜ ಬಿತ್ತದೆ, ಬೆಳೆಯನ್ನು ಕೊಯ್ಯಲು ಹೋಗುವರು. ಅವರು ಯಾವ ಕೊಯ್ಲನ್ನು ಮಾಡಲು ಸಾಧ್ಯ.

**ನೆನಪಿಗೆ : 'ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು.....ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು' (ರೋಮಾ 8:17).**

## ಯಾಕೋಬನ ಪ್ರಾರ್ಥನೆ!



**'ನಿನ್ನಿಂದ ನನಗೆ ಬರುವ ಎಲ್ಲಾ ಆಸ್ತಿಯಲ್ಲಿ ಹತ್ತರಲ್ಲೊಂದು ಪಾಲನ್ನು ನಿನಗೆ ಸಮರ್ಪಿಸುವೆನೆಂಬದಾಗಿ....ಹರಕೆ ಮಾಡಿಕೊಂಡನು' (ಆದಿ 28:22).**

ಸಾಧಾರಣವಾದ ಪ್ರಾರ್ಥನೆಯೂ ಉಂಟು, ಹರಕೆಯ ಪ್ರಾರ್ಥನೆಯೂ ಉಂಟು, ಹರಕೆಯಿಂದ ಕೂಡಿದ ಪ್ರಾರ್ಥನೆ ಮಾಡುವಾಗ, ಆ ಹರಕೆಯಲ್ಲಿ ಕರ್ತನೂ ಒಬ್ಬ ಒಡಂಬಡಿಕೆಯ ವ್ಯಕ್ತಿಯಾಗಿರುವನು. ನಿಮ್ಮ ಜೀವಿತದ ಏರು ಪೇರುಗಳಲ್ಲಿ ಆತನಿಗೂ ಒಂದು ಪಾಲು ಇರುವದು ಹರಕೆ ಹೊತ್ತೇ ಪ್ರಾರ್ಥಿಸಬೇಕೆಂದು ಕರ್ತನು ನಿರೀಕ್ಷಿಸುವದಿಲ್ಲ ಆತನು ದಯೆಯೂ, ಕನಿಕರವೂ ದೀರ್ಘಶಾಂತಿಯೂ ಪೂರ್ಣ ಪ್ರೀತಿಯುಳ್ಳವನು. ಆತನಿಗೆ ನೀವು ಪರಿಶುದ್ಧರಾಗಿ ಆತನ ಆಜ್ಞೆಗಳನ್ನು ಕೈಗೊಂಡು ನಡೆದರೆ ಸಾಕು. ಅದೇ ವೇಳೆಯಲ್ಲಿ ನಿಮ್ಮ ಹರಕೆಯ ಪ್ರಾರ್ಥನೆಯನ್ನು ತಳ್ಳಿಹಾಕುವದೂ ಇಲ್ಲ.

ಯಾಕೋಬನ ಹರಕೆಯ ಪ್ರಾರ್ಥನೆಯನ್ನು ಕೇಳಿದ್ದರಿಂದ ಮುಂದಿನ ದಿನಗಳಲ್ಲಿ ಯಾಕೋಬನು "ನೀನು ನಿನ್ನ ದಾಸನಾದ ನನ್ನ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ನಿನ್ನ ವಾಗ್ದಾನವನ್ನು ನೆರವೇರಿಸಿದ್ದೀಯಲ್ಲಾ. ನಾನು ಅದಕ್ಕೆ ಕೇವಲ ಅಪಾತ್ರನಾಗಿದ್ದೇನೆ. ನಾನು ಮೊದಲು ಈ ಯೊರ್ದನ್ ನದಿಯನ್ನು ದಾಟಿದಾಗ, ನನ್ನ ಹತ್ತಿರ ಕೋಲು ಮಾತ್ರವೇ ಇತ್ತು; ಈಗ ನಾನು ಎರಡು ಪಾಳೆಯಗಳಿಗೆ ಒಡೆಯನಾಗಿದ್ದೇನೆ" ಎಂದು ಹೇಳಿ ದೇವರನ್ನು ಸ್ತುತಿಸಿದನು (ಆದಿ 32:10). "ಎರಡು ಪಾಳೆಯ ಎಂದು ಹೇಳುವಾಗ ಕರು, ಒಂಟೆ, ದನ, ಕುರಿಗಳು ಆಳುಕಾಳುಗಳೊಡಗೂಡಿ ಹೇರಳ ಸಂಪತ್ತುಳ್ಳವನಾಗಿ ತನ್ನ ದೇಶಕ್ಕೆ ಹಿಂತಿರುಗುತ್ತಿರುವನು ಹರಕೆ ಮಾಡಿ ಪ್ರಾರ್ಥಿಸುವಾಗ ಕರ್ತನು ನಿಶ್ಚಯವಾಗಿ ನಿಮ್ಮನ್ನು ಆಶೀರ್ವದಿಸುವನು. ನನಗೆ ತಿಳಿದ ಒಬ್ಬ ವೈದ್ಯರು ಓದಿ ಮುಗಿಸಿದ ಮೇಲೆ ಒಂದು ಪಟ್ಟಣಕ್ಕೆ ಹೋಗಿ ತನ್ನ ವೃತ್ತಿಯನ್ನು ಪ್ರಾರಂಭಿಸಿದರು. ಆ ಪಟ್ಟಣದಲ್ಲಿ ಅನೇಕ ಹೆಸರಾಂತ ವೈದ್ಯರುಗಳಿದ್ದರು. ಈ ವೈದ್ಯರು ತನ್ನ ವೃತ್ತಿ ಪ್ರಾರಂಭಿಸುವಾಗ, ಕರ್ತನೊಂದಿಗೆ ಒಂದು ಒಪ್ಪಂದ ಮಾಡಿಕೊಂಡರು. ನನಗೆ ಬರುವ ಪ್ರತಿದಿನದ ಆದಾಯದಲ್ಲಿ ಒಂದು ಪಾಲು ಕರ್ತನಿಗಾಗಿ ನೀಡುವದಾಗಿ ಹರಕೆ ಮಾಡಿಕೊಂಡು ಪ್ರಾರ್ಥಿಸಿದರು. ಏನಾಶ್ಚರ್ಯ! ದಿನಕಳೆದಂತೆ ಒಂದಲ್ಲ ಒಂದು ಕಾರಣದಿಂದ ಈಗಾಗಲೇ ಹೆಸರುಗೊಂಡ ವೈದ್ಯರು ಆ ಪಟ್ಟಣವನ್ನು ಬಿಟ್ಟು ಹೊರಟು ಹೋದರು. ಈ ಯೌವನಸ್ಥ ವೈದ್ಯರೋ, ಆ ಪಟ್ಟಣದಲ್ಲಿ ಒಬ್ಬ ಉತ್ತಮ ವೈದ್ಯರೆಂದು ಹೆಸರು ಗಳಿಸಿದರು.

ದೇವಜನರೇ, ನೀವು ಹರಕೆ ಮಾಡುವಾಗ ಅದರಲ್ಲಿ ಯಥಾರ್ಥತೆ ಯುಳ್ಳವರಾಗಿರಬೇಕು ಸತ್ಯವೇದ ಹೇಳುತ್ತದೆ. "ನೀನು ದೇವರಿಗೆ ಹರಕೆಯನ್ನು ಕಟ್ಟಿದರೆ, ಅದನ್ನು ತೀರಿಸಲು ತಡಮಾಡಬೇಡ; ನೀನು ಹರಸಿಕೊಂಡು ತೀರಿಸದೆ ಇರುವದಕ್ಕಿಂತ ಹರಕೆ ಮಾಡಿಕೊಳ್ಳದೆ ಇರುವದು ವಾಸಿ" (ಪ್ರಸಂಗಿ 5:4,5).

**ನೆನಪಿಗೆ : 'ಸ್ತುತಿ ಯಜ್ಞವನ್ನೇ ದೇವರಿಗೆ ಸಮರ್ಪಿಸಿರಿ; ಮಾಡಿದ ಹರಕೆಗಳನ್ನು ಪರಾತ್ಪರನಿಗೆ ಸಲ್ಲಿಸಿರಿ. ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು; ಆಗ ನನ್ನನ್ನು ಕೊಂಡಾಡುವಿರಿ' (ಕೀರ್ತ 50:14,15).**

| ಮಾರ್ಚ್ 14 | ಪ್ರಾರ್ಥನೆಯ ನಿರೀಕ್ಷೆ! | ಬೆಳಗ್ಗೆ : ಧರ್ಮೋ 23,24,25<br>ಸಂಜೆ : ಮಾರ್ಕ 14:1-25 |
|---|---|---|

**'ಆಕೆಯು ಯೆಹೋವನು ಇನ್ನೊಂದು ಗಂಡು ಮಗುವನ್ನು ದಯಪಾಲಿಸಬೇಕೆಂದು ಅದಕ್ಕೆ ಯೋಸೇಫನೆಂದು ಹೆಸರಿಟ್ಟಳು' (ಆದಿ 30:24).**

ಯೋಸೇಫನ ಚರಿತ್ರೆ ನಮ್ಮ ಆತ್ಮೀಕ ಜೀವಿತಕ್ಕೆ ಪ್ರಯೋಜನವಾಗಿರುವದು. ಯೋಸೇಫನಲ್ಲಿ ಕ್ರಿಸ್ತನ ಸ್ವಭಾವಗಳೆಲ್ಲವನ್ನೂ ನೀವು ಕಾಣಬಹುದು. ಅವನು ಯೇಸುಕ್ರಿಸ್ತನಿಗೆ ಮುಂದಾಳಾದನು. ಮನಸ್ಸಾಕ್ಷಿಯ ಕಾಲದಲ್ಲಿ ಯೋಸೇಫನು ಜೀವಿಸಿದ್ದಾಗ್ಯೂ, ಅವನಲ್ಲಿ ಆತ್ಮನ ಫಲಗಳೆಲ್ಲವನ್ನೂ ಕಾಣಬಹುದು.

ಯೋಸೇಫನ ಜನನವನ್ನು ಕುರಿತು ಆದಿಕಾಂಡ 30ನೇ ಅಧ್ಯಾಯದಲ್ಲಿ ಕೆಲವು ವಾಕ್ಯಗಳನ್ನು ಕಂಡರೂ ಅವನ ಹದಿನೇಳನೇ ವಯಸ್ಸಿನಿಂದ ಮೊದಲುಗೊಂಡು 37ನೇ ಅಧ್ಯಾಯದಲ್ಲಿಂದ ಓದಬಹುದು. ಯೋಸೇಫನು ಯಾಕೋಬನಿಗೆ ಮುಪ್ಪಿನಲ್ಲಿ ಹುಟ್ಟಿದ ಹನ್ನೊಂದನೇ ಮಗನು. ಅವನ ಕಾಲ ಕ್ರಿ.ಪೂ 1746ರ ರಿಂದ 1636ರ ವರೆಗೆ ಅವನು 110 ವರುಷಗಳು ಈ ಪ್ರಪಂಚದಲ್ಲಿ ಸಾಕ್ಷಿಯುತವಾದ ಒಳ್ಳೆಯ ಜೀವಿತವನ್ನು ಜೀವಿಸಿದನು. ಅವನ ತಾಯಿಯಾದ ರಾಹೇಲಳು ಅವನು ಹುಟ್ಟಿದಾಗ, ಇನ್ನೊಂದು ಮಗುವನ್ನು ನನಗೆ ದಯಪಾಲಿಸುವನೆಂದು ಹೇಳಿ ಅವನಿಗೆ ಯೋಸೇಫನೆಂದು ಹೆಸರಿಟ್ಟಳು. ಇಲ್ಲಿ ಅವಳು ಕರ್ತನ ಆಶೀರ್ವಾದವನ್ನು ಮೊಟಕುಗೊಳಿಸುವವದನ್ನು ನೋಡಿರಿ. ಇನ್ನೂ ಅನೇಕ ಮಕ್ಕಳನ್ನು ಕೊಡುವನೆಂಬ ನಂಬಿಕೆ ಅವಳಲಿಲ್ಲ, ತನಗೆ ಇನ್ನೂ ಹೆಚ್ಚು ಮಕ್ಕಳನ್ನು ಕರ್ತನು ನೀಡುವನೆಂದು ವಿಶ್ವಾಸದ ಅರಿಕೆಯನ್ನು ಮಾಡಿದ್ದಿದ್ದರೆ, ಅವಳು ಇನ್ನೂ ದೀರ್ಘಕಾಲ ಜೀವಿಸಬಹುದಾಗಿತ್ತು. ಅನೇಕರು ಹೀಗೆಯೇ ತಮ್ಮ ಮಾತುಗಳಿಂದ ಕರ್ತನ ಮಹಿಮೆಯ ಕಾರ್ಯಗಳನ್ನು ಮೊಟಕುಗೊಳಿಸುವರು.

ರಾಹೇಲಳು, ಯೋಸೇಫನು ಹುಟ್ಟುವದಕ್ಕೆ ಮೊದಲು ಒಮ್ಮೆಯಾದರೂ, ಕರ್ತನಿಗೆ ಪ್ರಾರ್ಥಿಸಿದ್ದನ್ನು, ನಾವು ಕಾಣಲಾರೆವು. ಆದರೂ ದೇವರು ಅವಳನ್ನು ಪ್ರೀತಿಸಿ ಅವಳಿಗೆ ಇಬ್ಬರು ಮಕ್ಕಳನ್ನು ನೀಡಿದನು (ಆದಿ 30:22-24). ಆದರೆ ರಾಹೇಲಳ ಸಹೋದರಿ ಲೇಯಳು ಕರ್ತನನ್ನು ಪ್ರೀತಿಸುವವಳಾಗಿಯೂ, ಕೃತಜ್ಞತೆ ಯುಳ್ಳವಳಾಗಿಯೂ ಇದ್ದದ್ದನ್ನು ಕಾಣುತ್ತೇವೆ ನಾನು ಕರ್ತನನ್ನು ಸ್ತುತಿಸುತ್ತೇನೆ ಎಂದು ತನ್ನ ಮಗುವಿಗೆ ಯೂದಾ ಎಂದು ಹೆಸರಿಟ್ಟಳು.

ದೇವಜನರೇ, ನೀವು ಕರ್ತನನ್ನು ಪ್ರೀತಿಸದೇ ಹೋದರೂ, ಆತನು ನಿಮ್ಮನ್ನು ಪ್ರೀತಿಸಿ, ಚಿಕ್ಕ ಪ್ರಾಯದಿಂದಲೂ ನಿಮ್ಮನ್ನು ಕಾಯ್ದುಕಾಪಾಡಿ, ಅನೇಕ ಆಶೀರ್ವಾದಗಳನ್ನು ನೀಡಿರುವನು. ಆತನನ್ನು ನಂಬಿದವರು ಎಂದಿಗೂ ಆಶಾಭಂಗ ಹೊಂದುವದಿಲ್ಲ. ಉಪದ್ರವಗಳ ವೇಳೆಯಲ್ಲಿ ಕಾಯ್ದು ನಡೆಸಿರುವ ಅಂಥಹ ಪ್ರೀತಿಸ್ವರೂಪಿಯಾದ ದೇವರಿಗೆ ಸ್ತುತಿ ಸ್ತೋತ್ರಗಳನ್ನು ಅರ್ಪಿಸಿರಿ.

**ನೆನಪಿಗೆ : 'ಪ್ರವಾದನವಾಕ್ಯವು ನಮಗೆ ಮತ್ತೂ ದೃಢವಾಗಿದೆ.... ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು' (2ಪೇತ್ರ 1:19).**

## ಮಾರ್ಚ್ 15 ದೇವರಿಂದ ದೊರಕುವದು!

ಬೆಳಗ್ಗೆ : ಧರ್ಮೋ 26,27
ಸಂಜೆ : ಮಾರ್ಕ 14:26-52

**'ಯೋಸೇಫನು ಅವರಿಗೆ ಸ್ವಪ್ನಗಳ ಅರ್ಥವು ದೇವರಿಂದ ದೊರಕಬಹುದಲ್ಲವೇ; ದಯಮಾಡಿ ನಿಮ್ಮ ಸ್ವಪ್ನವನ್ನು ನನಗೆ ತಿಳಿಸಿರಿ ಎಂದು ಹೇಳಿದನು' (ಆದಿ 40:8).**

ಕರ್ತನ ಕುರಿತಾಗಿ ಮಾತಾಡುವದರಲ್ಲಿ ಯೋಸೇಫನು ಬಹಳ ಎಚ್ಚರ ಉಳ್ಳವನಾಗಿದ್ದನು. ಪಾನದಾಯಕರಲ್ಲಿ ಮುಖ್ಯಸ್ಥನು, ಭಕ್ಷ್ಯಕಾರರಲ್ಲಿ ಮುಖ್ಯಸ್ಥನೂ, ಅವನ ಬಳಿಗೆ ಬಂದು ತಮ್ಮ ಸ್ವಪ್ನದ ಕುರಿತು ಮಾತಾಡಿದಾಗ, ಯೋಸೇಫನು ಅವರ ಬಳಿ ದೇವರ ಕುರಿತು, ಆತನ ಮಹಿಮೆಯನ್ನು ಕುರಿತು ಹೇಳುತ್ತಾನೆ. ಅವನಿಗೆ ಕನಸುಗಳ ಗೂಢಾರ್ಥಗಳನ್ನು ಬಿಡಿಸಿ ಹೇಳುವ ವರವಿದ್ದಾಗ್ಯೂ, ತನ್ನನ್ನು ಹೆಚ್ಚಿಸಿಕೊಳ್ಳದೆ ದೇವರ ಸಾರ್ವಭೌಮತ್ವವನ್ನೇ ಕುರಿತು ಮಾತಾಡುತ್ತಾನೆ. ನಂತರ ಕನಸಿನ ಅರ್ಥವನ್ನು ಅವರಿಗೆ ಹೇಳುತ್ತಾನೆ.

ಯೋಸೇಫನ ಜೀವಿತದ ಪ್ರತಿ ಹಂತದಲ್ಲೂ ಕರ್ತನ ಕರ ಆಶ್ಚರ್ಯವಾಗಿ ನಡೆಸಿಕೊಂಡು ಬರುವದನ್ನು ಕಾಣುತ್ತೇವೆ. ಅರಮನೆಯಲ್ಲಿರುವವರ ಒಡನಾಟ ಪಡೆಯುವದಕ್ಕಾಗಿ ಪಾನದಾಯಕರ ಮುಖ್ಯಸ್ಥನನ್ನು, ಭಕ್ಷ್ಯಕಾರರ ಮುಖ್ಯಸ್ಥನನ್ನೂ ಮೊದಲೇ ಸೆರೆಮನೆಗೆ ಕಳುಹಿಸಿ ಕೊಟ್ಟು, ಯೋಸೇಫನನ್ನು ಅವರ ಉಪಚಾರಕನನ್ನಾಗಿ ನೇಮಿಸಿದನು. ಕರ್ತನ ಜ್ಞಾನ ಮನುಷ್ಯನ ಜ್ಞಾನಕ್ಕೆ ನಿಲುಕದು. "ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ, ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ" ಎಂದು ಕರ್ತನು ಹೇಳುತ್ತಾನೆ (ಯೆಶಾ 55:9). ಫೋಟಿಫರನು ತನಗೆ ದಾಸನಾಗಿರಲೆಂದು ಯೋಸೇಫನನ್ನು ಕ್ರಯಕ್ಕೆ ಕೊಂಡುಕೊಂಡನು. ಆದರೆ ಯೋಸೇಫನು ತನ್ನ ಜೀವಿತ ಕಾಲವೆಲ್ಲಾ ಕರ್ತನಿಗೆ ದಾಸನಾಗಿದ್ದದರಿಂದ, ಐಗುಪ್ತ ದೇಶದಲ್ಲಿ ಉನ್ನತ ಸ್ಥಾನಕ್ಕೆ ಕರ್ತನು ಅವನನ್ನು ಏರಿಸಲು ನಿರ್ಧರಿಸಿದನು. ಕರ್ತನು ತಕ್ಕ ಕಾಲದಲ್ಲಿ ಆಯ ಕಾರ್ಯಗಳನ್ನು ನೆರವೇರಿಸುವವನು ಆದ್ದರಿಂದ ಕರ್ತನಲ್ಲಿ ಭರವಸವಿಡಿರಿ. "ದೇವರ ಮಾರ್ಗವು ಯಾವ ದೋಷವೂ ಇಲ್ಲದ್ದು" (ಕೀರ್ತ 18:30). "ಯೆಹೋವನು ಸನ್ಮಾರ್ಗಿಗೆ ಆಶ್ರಯ ಕೆಡುಕನಿಗೆ ನಾಶನ" (ಜ್ಞಾನೋ 10:29).

ದೇವಮಕ್ಕಳೇ, ನಿಮಗೆ ಸಮಯ, ಅನುಕೂಲವಾಗಿರಲಿ ಇಲ್ಲದಿರಲಿ. ಕ್ರಿಸ್ತನ ಕುರಿತಾಗಿ, ದೇವನೀತಿಯ ಕುರಿತಾಗಿ ಮಾತಾಡಿರಿ. ದೇವರು ನಿಮಗೆ ನೀಡಿರುವ ವರಗಳನ್ನು ಅಲಕ್ಷ್ಯ ಮಾಡಬೇಡಿರಿ ಸಭೆಯ ಹಿರಿಯರು ಪ್ರವಾದನೆಯ ಸಹಿತವಾಗಿ ನಿಮ್ಮ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿಮಗೆ ಕೊಡಲ್ಪಟ್ಟಿತಲ್ಲಾ ಈ ಕಾರ್ಯಗಳನ್ನು ಸಾಧಿಸಿಕೊಳ್ಳುವದರಲ್ಲಿ ಆಸಕ್ತರಾಗಿರಿ (1ತಿಮೊ 4:14,15). ನೀವು ಕ್ರಿಸ್ತನ ಕುರಿತು ತಿಳಿಸಿದಂತೆಲ್ಲಾ ದೇವಕೃಪೆ ನಿಮ್ಮಲ್ಲಿ ಹೆಚ್ಚುವದು, ಆತ್ಮೀಕ ವರಗಳು ನಿಮ್ಮೊಳಗೆ ಕಾರ್ಯನಡೆಸಲು ಪ್ರಾರಂಭವಾಗುವದು. ಕ್ರಿಸ್ತನನ್ನು ಇತರರಿಗೆ ಪರಿಚಯಿಸುವದರಿಂದ, ಕರ್ತನು ನಿಮಗೆ ತಲಾಂತುಗಳನ್ನೂ ಕೃಪಾವರಗಳನ್ನು ಅನುಗ್ರಹಿಸುವನು.

**ನೆನಪಿಗೆ : 'ಆಹಾ, ದೇವರ ಐಶ್ವರ್ಯವೂ ಜ್ಞಾನವೂ, ವಿವೇಕವೂ ಎಷ್ಟೋ ಅಗಾಧ ....ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ" (ರೋಮಾ 11:33).**

## ದೇವರಿಗೆ ಸ್ತೋತ್ರ!



**'ನನಗೆ ಸಂಕಟ ಬಂದ ದೇಶದಲ್ಲೇ ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆಂದು ಹೇಳಿ ಆ ಮಗನಿಗೆ ಎಫ್ರಾಯೀಮ್ ಎಂದು ಹೆಸರಿಟ್ಟನು' (ಆದಿ 41:52).**

ಕರ್ತನನ್ನು ಕೃತಜ್ಞತೆಯಿಂದ ನೋಡಿದ ಯೋಸೇಫನು "ನನಗೆ ಸಂಕಟ ಬಂದ ದೇಶದಲ್ಲೇ ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆ" ಎಂದು ಸ್ತೋತ್ರವನ್ನರ್ಪಿಸಿದನು. ನಾನು ನನ್ನ ಸಾಮರ್ಥ್ಯದಿಂದ ಅಭಿವೃದ್ಧಿಹೊಂದಿದೆ ಎಂದೋ, ನನ್ನ ವಾಕ್ಚಾತುರ್ಯದಿಂದ ಅಧಿಕವಾಗಿ ಆಶೀರ್ವಾದಿಸಲ್ಪಟ್ಟೆನೆಂದೋ, ಹೇಳದೆ, ತನ್ನನ್ನು ತಗ್ಗಿಸಿಕೊಂಡು, ದೇವರಿಗೇ ಎಲ್ಲಾ ಘನವನ್ನೂ, ಮಹಿಮೆಯನ್ನೂ ಸಲ್ಲಿಸಿದನು.

ಯೋಸೇಫನು ತನ್ನ ಹದಿನೇಳನೆಯ ವಯಸ್ಸಿನಲ್ಲಿ ದಾಸನಾಗಿ ಮಾರಲ್ಪಟ್ಟು ಐಗುಪ್ತಕ್ಕೆ ಬಂದನು. ತಿಳಿಯದ ಜನರು, ತಿಳಿಯದ ಭಾಷೆಗಳು, ಒಬ್ಬ ದಾಸನಂತೆ, ಸೇವಕನಂತೆ, ಕಠಿಣವಾಗಿ ಕಾರ್ಯನಿರ್ವಹಿಸಬೇಕಾಗಿತ್ತು. ಅನಂತರ ಅನ್ಯಾಯವಾಗಿ ತಪ್ಪು ಹೊರಿಸಲ್ಪಟ್ಟು ಸೆರೆಮನೆವಾಸ ಅನುಭವಿಸಬೇಕಾಯಿತು. ಆದರೆ ದೇವರ ಸಮಯ ಬಂದಾಗ, ಅವನನ್ನು ಉನ್ನತವಾದ ಪದವಿಗೆ ಏರಿಸಿದನು. ಲೌಕೀಕವಾಗಿಯೂ, ಆತ್ಮೀಕವಾಗಿಯೂ ಆಶೀರ್ವದಿಸಲ್ಪಟ್ಟನು. ಯೋಸೇಫನಿಗೆ ಮದುವೆಯಾಗಿ ಇಬ್ಬರು ಗಂಡು ಮಕ್ಕಳನ್ನು ಪಡೆದನು. ಎರಡನೆಯ ಮಗನಿಗೆ ಎಫ್ರಾಯೀಮ್ ಎಂದು ಹೆಸರಿಟ್ಟನು. ಎಫ್ರಾಯೀಮ್ ಅಂದರೆ ಅಭಿವೃದ್ಧಿ ಪಡಿಸಿದನು ಎಂದು ಅರ್ಥ.

ಯೋಸೇಫನು ದೇವರಿಂದ ಆಶೀರ್ವದಿಸಲ್ಪಡುವದಕ್ಕೆ ಮೊದಲು ಅನೇಕ ಕಷ್ಟ ಸಂಕಟಗಳ ಹಾದಿಯಲ್ಲಿ ನಡೆದು ಬಂದನೆಂಬುದನ್ನು ಚರಿತ್ರೆ ಹೇಳುತ್ತದೆ. ಆದರೆ ಯೋಸೇಫನು ತನ್ನ ಸಂಕಟದ ದಿನಗಳಲ್ಲಿ ದೇವರನ್ನು ಆತನ ವಿಧಿನಿಯಮಗಳನ್ನು ಆತುಕೊಂಡು ನಡೆದನು. ಯಾವದೇ ಸಂದರ್ಭದಲ್ಲಿಯೂ, ಪಾಪಕ್ಕೆ ಒಳಗಾಗಲಿಲ್ಲ. ತನ್ನ ಜೀವಿತದಲ್ಲಿ ಎಲ್ಲಾ ವಿಷಯಗಳಲ್ಲಿ ದೇವರಿಗೆ ಮೊದಲ ಸ್ಥಾನ ನೀಡಿದ್ದರಿಂದ, ಅವನು ದೇವರ ದಯೆಗೆ ಪಾತ್ರನಾದನು. ಇಕ್ಕಟ್ಟಿನ ಸಮಯಗಳಲ್ಲಿ ಇರುವದಾದರೆ ನನಗೆ ಮೊರೆಯಿಡಿರಿ ನಾನು ಹತ್ತಿರವಿದ್ದು ನಿಮ್ಮನ್ನು ಬಿಡಿಸುವೆನು ಎಂದು ಕರ್ತನು ಹೇಳುತ್ತಾನೆ.

ದೇವಜನರೇ, ಕ್ರಿಸ್ತನಲ್ಲಿ ಅಬ್ರಹಾಮನ ಎಲ್ಲಾ ಆಶೀರ್ವಾದಗಳಿಗೆ ನೀವು ಬಾಧ್ಯಸ್ಥರಾಗಿರುವಿರಿ. ಯೋಸೇಫನಂತೆ. ಕರ್ತನನ್ನೇ ನಿಮ್ಮ ಜೀವಿತದಲ್ಲಿ ಘನಪಡಿಸಿರಿ. ಯಾರು ಸ್ತುತಿಯಜ್ಞವನ್ನು ಸಮರ್ಪಿಸುತ್ತಾರೋ ಅವರೇ ನನ್ನನ್ನು ಗೌರವಿಸುವವರು ಎಂದು ಹೇಳಿದ. ಆತನಿಗೆ ಆತನ ವಾಕ್ಯಗಳಿಗೆ ಮೊದಲ ಸ್ಥಾನ ನೀಡಿರಿ. ಅಬ್ರಹಾಮ, ಇಸಾಕ, ಯಾಕೋಬರ ದೇವರಾದ ಕರ್ತನು ನಿಮ್ಮನ್ನು ಇಂದೂ ನಿಶ್ಚಯವಾಗಿ ಆಶೀರ್ವದಿಸುವನು.

**ನೆನಪಿಗೆ : 'ನೀವು ಈಗ ಇರುವದಕ್ಕಿಂತಲೂ ಇನ್ನು ಸಾವಿರದಷ್ಟಾಗುವಂತೆ ನಿಮ್ಮ ಪಿತೃಗಳ ದೇವರಾದ ಯೆಹೋವನು ನಿಮ್ಮನ್ನು ಹೆಚ್ಚಿಸಿ ತಾನು ವಾಗ್ದಾನ ಮಾಡಿದ ಪ್ರಕಾರವೇ ನಿಮಗೆ ಶುಭಗಳನ್ನು ಅನುಗ್ರಹಿಸಲಿ' (ಧರ್ಮೋ 1:11)**

**'ಯೆಪ್ತಾಹನು ಮಿಚ್ಪೆಯಲ್ಲಿ ಯೆಹೋವನ ಮುಂದೆ ಅರಿಕೆ ಮಾಡಿದನು'** (ನ್ಯಾಯ 11:11).

ಯೆಪ್ತಾಹನನ ಪ್ರಾರ್ಥನಾ ಸ್ಥಳ ಮಿಚ್ಪೆ ಪ್ರಾರ್ಥಿಸಲು ಒಂದು ಸ್ಥಳ ಅಗತ್ಯವೇ ಜಾನ್ ವೆಸ್ಲಿಯ ಕಾಲದಲ್ಲಿ ಅಲ್ಲಿನ ಭಕ್ತಿವಂತ ಸ್ತ್ರೀಯರು ಊರಿನ ಹೊರಗಿರುವ ಒಂದು ದೊಡ್ಡ ಪೊದೆಯ ಬಳಿ ಸೇರಿ ಪ್ರಾರ್ಥಿಸುತ್ತಿದ್ದರು. ಅನೇಕರು ಅನೇಕ ವರುಷಗಳಿಂದ ಆ ಸ್ಥಳದಲ್ಲಿ ಆತ್ಮದಿಂದಲೂ ಸತ್ಯದಿಂದಲೂ ಪ್ರಾರ್ಥಿಸುತ್ತಾ ಬಂದದ್ದರಿಂದ ಅಲ್ಲಿ ದೈವೀಕ ಪ್ರಸನ್ನತೆ ತುಂಬಿತ್ತು ಅಲ್ಲಿ ಪ್ರಾರ್ಥಿಸುವ ಪ್ರಾರ್ಥನೆಗಳಿಗೆ ಉತ್ತರ ಸಿಗುತ್ತಿತ್ತು. ಆದರೆ ಜಾನ್ ವೆಸ್ಲಿ ಇದನ್ನು ನಾನು ನಂಬುವದಿಲ್ಲ ದೇವರು ಆತ್ಮಸ್ವರೂಪನು ಆತನನ್ನು ಎಲ್ಲಿಯಾದರೂ ಆರಾಧಿಸಬಹುದು. ಈ ಪೊದೆಯ ಬಳಿಯೇ ಪ್ರಾರ್ಥಿಸಬೇಕೆಂದಿಲ್ಲ ಎಂದು ಹಾಸ್ಯ ಮಾಡಿದರು. ಆದರೆ ಅವರು ರಕ್ಷಿಸಲ್ಪಟ್ಟಾಗ, ಅವರ ಕಾಲುಗಳು ಆ ಸ್ಥಳಕ್ಕೆ ಹೋದವು ಅಲ್ಲಿನ ದೈವೀಕ ಪ್ರಸನ್ನತೆಯನ್ನು ಮಹಿಮೆಯನ್ನೂ ಅರಿತರು.

ಆಯಸ್ಕಾಂತ ಇರುವ ಸ್ಥಳದಲ್ಲಿ ಅದರ ಸುತ್ತಲೂ ಆಯಸ್ಕಾಂತದ ಆಕರ್ಷಣ ಶಕ್ತಿ ಇರುತ್ತದೆ. ಹಾಗೆಯೇ ದೇವಜನರು ಕೂಡಿ ಪ್ರಾರ್ಥಿಸುವ ಸ್ಥಳದಲ್ಲಿ ದೈವೀಕ ಪ್ರಸನ್ನತೆ ಆವರಿಸುತ್ತದೆ. ಇದು ನನ್ನ ಅನುಭವವೂ ಆಗಿದೆ. ಕೆಲವು ಸ್ಥಳಗಳಲ್ಲಿ ಪ್ರಾರ್ಥಿಸುವಾಗ ಪ್ರಾರ್ಥನೆ, ಬುಗ್ಗೆಯಂತೆ ಉಕ್ಕಿ ಬರುವದು. ಕೆಲವು ಸ್ಥಳಗಳಲ್ಲಿ ಪ್ರಾರ್ಥಿಸಲಾಗುವದಿಲ್ಲ. ತಡೆಗಳಿರುವದು ದಾವೀದನು ದೇವಾಲಯವನ್ನು ಕಟ್ಟಲು ತೀರ್ಮಾನಿಸಿದಾಗ ಕರ್ತನು ಒಂದು ನಿರ್ದಿಷ್ಟ ಸ್ಥಳವನ್ನು ತೋರಿಸಿದನು. ಆ ಸ್ಥಳ ಮೊರಿಯಾ ಬೆಟ್ಟದಲ್ಲಿ ಇಸಾಕನನ್ನು ಯಜ್ಞವಾಗಿ ಅರ್ಪಿಸಲು ಕರೆದುಕೊಂಡು ಹೋದ ಸ್ಥಳ.

ಯೇಸುಕ್ರಿಸ್ತನು ಪ್ರಾರ್ಥಿಸಲು ಹೊತ್ತಾರೆಯಲ್ಲಿ ಅರಣ್ಯಕ್ಕೆ ಹೋದನು. ರಾತ್ರಿಯಲ್ಲಿ ಪ್ರಾರ್ಥಿಸಲು ಒಂದು ಬೆಟ್ಟದ ತುದಿಗೆ ಹೋದನು. ಬೇರೆ ಸಮಯಗಳಲ್ಲಿ ಎಣ್ಣೆಮರಗಳಿರುವ ಗೆತ್ಸೇಮನೆ ತೋಟಕ್ಕೆ ಹೋಗಿ, ಅಲ್ಲಿ ಆತ್ಮಭಾರದಿಂದ ಪ್ರಾರ್ಥಿಸಿದನು. ದಾನಿಯೇಲನಿಗೆ ಒಂದು ಪ್ರಾರ್ಥನಾ ಸ್ಥಳವಿತ್ತು. ಅದು ಅವನ ಮನೆಯ ಮೇಲಿನ ಕೋಣೆ, ಅಲ್ಲಿ ಹೋಗಿ ಯೆರೂಸಲೇಮಿಗೆ ಅಭಿಮುಖವಾಗಿ ಇದ್ದ ಕಿಟಕಿ ಬಾಗಿಲನ್ನು ತೆರೆದು ಪ್ರಾರ್ಥಿಸುತ್ತಿದ್ದನು. ಹೀಗೆ ಹಳೆಯ ಒಡಂಬಡಿಕೆಯ ಭಕ್ತರು ಒಂದೊಂದು ಸ್ಥಳವನ್ನು ಪ್ರಾರ್ಥಿಸಲು ಆಯ್ಕೆ ಮಾಡಿಕೊಂಡಿದ್ದರು.

ದೇವಜನರೇ, ನೀವು ಪ್ರತಿದಿನ ಪ್ರಾರ್ಥಿಸಲು ಒಂದು ನಿರ್ಧಿಷ್ಟವಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಿರಿ. ಪ್ರತಿದಿನ ಅಲ್ಲಿಯೇ ಪ್ರಾರ್ಥಿಸಿರಿ. ಕೆಲವು ದಿನಗಳ ನಂತರ ನೀವು ಅಲ್ಲಿ ಪ್ರಾರ್ಥಿಸಲು ಹೋಗುವ ಮೊದಲೇ ಕರ್ತನು ನಿಮಗಾಗಿ ಕಾದಿರುವದನ್ನು ನೀವು ಗ್ರಹಿಸುವಿರಿ. ಹಾಗೂ ಆತನನ್ನು ಮನಸಾರೆ ಸ್ತುತಿಸಲು, ಮಹಿಮೆ ಪಡಿಸಲು ಆತನ ಪ್ರಸನ್ನತೆಯನ್ನು ಕಂಡುಕೊಂಡು ಆತನು ಅನುಗ್ರಹಿಸುವ ಮೇಲುಗಳನ್ನು ಸಮೃದ್ಧಿಯಾಗಿ ಅನುಭವಿಸಲು ಸಾಧ್ಯವಾಗುತ್ತದೆ.

**ನೆನಪಿಗೆ : 'ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿ ಅದರ ಮೇಲೆ ಆತನಿಗೆ ಸರ್ವಾಂಗ ಹೋಮಗಳನ್ನೂ ಸಮಾಧಾನಯಜ್ಞಗಳನ್ನೂ ಅರ್ಪಿಸಿದನು.... ಇಸ್ರಾಯೇಲ್ಯರಲ್ಲಿದ್ದ ಸಂಹಾರಕವ್ಯಾಧಿಯು ನಿಂತುಹೋಯಿತು'** (2ಸಮು 24:25).

# ಮಾರ್ಚ್ 18 ಸಂಸೋನನ ಪ್ರಾರ್ಥನೆ!

ಬೆಳಗ್ಗೆ : ಧರ್ಮೋ 32,33,34
ಸಂಜೆ : ಮಾರ್ಕ 15:16-47

**'ಕರ್ತನೇ ಯೆಹೋವನೇ....ನನ್ನ ಎರಡೂ ಕಣ್ಣುಗಳಲ್ಲಿ ಒಂದಕ್ಕೋಸ್ಕರವಾದರೂನಾನು ಅವರಿಗೆ ಮುಯ್ಯಿ ತೀರಿಸುವ ಹಾಗೆ ನನ್ನನ್ನು ಈ ಸಾರಿ ಬಲಪಡಿಸು ಎಂದು ಮೊರೆಯಿಟ್ಟನು' (ನ್ಯಾಯ 16:28).**

ಸತ್ಯವೇದದಲ್ಲಿ ಕಂಡು ಬರುವ ಎಲ್ಲಾ ಪ್ರಾರ್ಥನೆಗಳಲ್ಲಿ ಬಹಳ ಪರಿತಾಪಕರವಾದ ಅತಿಯಾದ ವೇದನೆಯಿಂದ ತುಂಬಿದ, ಮನಕರಗಿಸುವ ಪ್ರಾರ್ಥನೆಯೆಂದರೆ, ಸಂಸೋನನು ಮಾಡಿದ ಪ್ರಾರ್ಥನೆ. ಸಂಸೋನನು ಯಾವ ಪರಿಸ್ಥಿತಿಯಲ್ಲಿ ಈ ಪ್ರಾರ್ಥನೆಯನ್ನು ಮಾಡಿದನೆಂಬುದನ್ನು ಸ್ವಲ್ಪ ಯೋಚಿಸಿ ನೋಡಿರಿ.

ಸಂಸೋನನ ಎರಡು ಕಣ್ಣುಗಳೂ ಕೀಳಲ್ಪಟ್ಟಿತ್ತು. ಭಯಂಕರವಾದ ಕಾರಿರುಳು ಅವನನ್ನು ಆವರಿಸಿತ್ತು. ಮನುಷ್ಯರಿಂದ ಹಿಂಸಿಸಲ್ಪಟ್ಟು, ಬದುಕುವ ಆಶೆಯೇ ಇಲ್ಲದವನಾಗಿ, ಬದುಕಿರುವದಕ್ಕಿಂತ ಸಾಯುವದೇ ಲೇಸೆಂದು ಚಿಂತಿಸುವ ಸ್ಥಿತಿಗೆ ಬಂದಿದ್ದನು. ಹಿಂದೆ ಅವನ ಕೈಗಳು ಕರ್ತನಿಗಾಗಿ ಮಹತ್ತರವಾದ ಕಾರ್ಯ ಮಾಡಿದ್ದವು. ಒಂದು ಕತ್ತೆಯ ದವಡೆಯ ಎಲುಬಿನಿಂದ, ಸಾವಿರ ಫಿಲಿಷ್ಟಿಯರನ್ನು ಕೊಂದ ಆ ಕೈಗಳು ಈಗ ಬೇಡಿಗಳಿಂದ ಬಂಧಿಸಲ್ಪಟ್ಟವು. ಅವನನ್ನು ಆಧರಿಸುವವರು, ಧೈರ್ಯಪಡಿಸುವವರು ಯಾರೂ ಇಲ್ಲ. ಅವನ ಸುತ್ತಲಿದ್ದ ಫಿಲಿಷ್ಟಿಯರು ಅವನನ್ನು ಪರಿಹಾಸ್ಯ ಮಾಡುತ್ತಿದ್ದರು. ಬೋಳಿಸಿದ ತಲೆಯ ಮೇಲೆ ಸ್ವಲ್ಪ ಸ್ವಲ್ಪವಾಗಿ ಕೂದಲು ಬೆಳೆದಿತ್ತು.

ಭೂಮಿಯಲ್ಲಿ ಸಂಸೋನನು ಎಲ್ಲವನ್ನೂ ಕಳೆದುಕೊಂಡಿದ್ದರೂ ಪ್ರಾರ್ಥಿಸುವ ಮನಸ್ಸನ್ನು ಕಳೆದುಕೊಂಡಿರಲಿಲ್ಲ. ಪ್ರಾರ್ಥನೆಯನ್ನು ಕೇಳುವ ಕರ್ತನ ಕರುಣೆಯನ್ನು ಮರೆತಿರಲಿಲ್ಲ. ಇಸ್ರಾಯೇಲ್ಯರಲ್ಲಿ ಮಹಾಪರಾಕ್ರಮಿಯಾದ ಸಂಸೋನನು ತನ್ನ ಕೊನೆಯ ಪ್ರಾರ್ಥನೆಯಾಗಿ "ದೇವರೇ ನನ್ನ ಎರಡೂ ಕಣ್ಣುಗಳಲ್ಲಿ ಒಂದಕ್ಕೋಸ್ಕರವಾದರೂ ನಾನು ಅವರಿಗೆ ಮುಯ್ಯಿ ತೀರಿಸುವ ಹಾಗೆ ನನ್ನನ್ನು ಈ ಸಾರಿಬಲಪಡಿಸು ಎಂದು ಮೊರೆಯಿಟ್ಟನು" (ನ್ಯಾಯ 16:28). ಅವನು ಮಾಡಿದ್ದು ಫಿಲಿಷ್ಟಿಯರಿಗೆ ಮುಯ್ಯಿತೀರಿಸುವ ಪ್ರಾರ್ಥನೆಯಾಗಿದ್ದರೂ ಕರ್ತನು ಅದನ್ನು ಕೇಳಿದನು. ಕರ್ತನಿಗೂ, ಅವನಿಗೂ ನಡುವೆ ಒಡಂಬಡಿಕೆಯಾಗಿ ನಿಂತ, ತಲೆಕೂದಲು ಬೆಳೆದಿತ್ತು ಕರ್ತನು ಸಂಸೋನನನ್ನು ಬಲಪಡಿಸಿದನು. ಕರ್ತನು ತನ್ನ ಒಡಂಬಡಿಕೆಯಲ್ಲಿ ನಂಬಿಗಸ್ತನಾಗಿದ್ದನು. ಕೊನೆಯ ಗಳಿಗೆಯಲ್ಲಿ ಸಂಸೋನನು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿದ್ದರಿಂದ ಕರ್ತನು ಅವನ ಪ್ರಾರ್ಥನೆಗೆ ಉತ್ತರಕೊಟ್ಟು, ಸಂಸೋನನು ತನ್ನ ಕೈಗಳಿಂದ ಫಿಲಿಷ್ಟಿಯ ಅಧಿಕಾರಿ ವರ್ಗದವರು ಕುಳಿತಿದ್ದ ಕಟ್ಟಡವನ್ನು ಬೀಳಿಸುವ ಬಲವನ್ನು ಕರ್ತನು ನೀಡಿದನು.

ದೇವಜನರೇ, ನಿಮ್ಮ ಕಡೆಯ ಶ್ವಾಸವಿರುವವರೆಗೂ ಆಶ್ರಯದುರ್ಗವಾಗಿರುವ ಕರ್ತನಲ್ಲಿ ನಂಬಿಕೆಯಿಡಿರಿ. ಪ್ರಪಂಚದಲ್ಲಿ ಏನನ್ನು ಕಳೆದುಕೊಂಡರೂ ನಿತ್ಯ ಜೀವವನ್ನು ಕೊಡುವ ಕರ್ತನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳದಿರಿ.

**ನೆನಪಿಗೆ : 'ಕಡೆಯವರೆಗೂ ತಾಳುವವನು ರಕ್ಷಣೆಹೊಂದುವನು' (ಮತ್ತಾ 24:13).**

## ಹನ್ನಳ ಪ್ರಾರ್ಥನೆ!

ಬೆಳಗ್ಗೆ : ಯೆಹೋಶುವ 1,2,3
ಸಂಜೆ : ಮಾರ್ಕ 16

**'ಅವಳು ಹೋಗಿ ಬಹು ದುಃಖದಿಂದ ಕಣ್ಣೀರು ಸುರಿಸುತ್ತಾ ಮೊರೆಯಿಟ್ಟಳು' (1ಸಮು 1:10).**

'ಮೊರೆಯಿಡುವದು' ಎಂಬುದು 'ಕಣ್ಣೀರಿನ ಪ್ರಾರ್ಥನೆ' ಹನ್ನಳು, ತನಗೆ ಮಕ್ಕಳಿಲ್ಲವೆಂದು ಮನೋವೇದನೆಯಿಂದ ಕೂಡಿದವಳಾಗಿ ಕಣ್ಣೀರಿಟ್ಟು ದೇವರ ಬಳಿ ಪ್ರಾರ್ಥಿಸಿದಳು. ಅವಳಿಗೆ ಮಕ್ಕಳಿಲ್ಲದ ಕಾರಣ ಅವಳ ಸವತಿಯೂ ಯೆಹೋವನು ನಿನ್ನನ್ನು ಬಂಜೆಯನ್ನಾಗಿ ಮಾಡಿದ್ದಾನೆ ಎಂದು ಆಕೆಯನ್ನು ಕೆಣಕಿ ನೋಯಿಸುತ್ತಿದ್ದಳು ಇದರಿಂದ ಹನ್ನಳ ಅವಹೇಳನಕ್ಕೆ ಗುರಿಯಾಗಿದ್ದಳು.

ಮಕ್ಕಳಿಗೆ ಯಾವದೇ ಅಗತ್ಯತೆ ಇದ್ದರೂ ಸಮಸ್ಯೆಗಳಿದ್ದರೂ ತಾಯಿಯ ಬಳಿ ಹೋಗಿ ಕೇಳುವರು. ಮಾತು ಬರದ ಮಕ್ಕಳು ಅಳುವನ್ನೇ ತಮ್ಮ ಅಸ್ತ್ರವನ್ನಾಗಿಸಿ ಕೊಂಡಿರುತ್ತಾರೆ ನಮಗೆ ತಾಯಿಯೂ ತಂದೆಯೂ ಕರ್ತನೇ ಆಗಿರುವನು. ಸಮಸ್ಯೆಗಳು ಬರುವಾಗ ಕರ್ತನ ಪಾದದಲ್ಲಿ ಕುಳಿತು ನಮ್ಮ ದುಃಖವನ್ನೆಲ್ಲಾ ಕಣ್ಣೀರಾಗಿ ಸುರಿಸುವೆವು. ಹನ್ನಳೂ ತನ್ನ ದುಃಖವನ್ನು ಕಣ್ಣೀರಿನೊಂದಿಗೆ ಕರ್ತನ ಬಳಿ ಹಂಚಿಕೊಂಡಳು ಪ್ರಾರ್ಥಿಸಿದಳು. ಹನ್ನಳ ಪ್ರಾರ್ಥನೆಗೆ ಕರ್ತನು ಮೆಚ್ಚಿದ ಕಾರಣ ಏನಾಗಿತ್ತು? ಹನ್ನಳು ಸ್ವಾರ್ಥಪರಳಾಗಿ ಪ್ರಾರ್ಥಿಸಲಿಲ್ಲ. ಒಂದು ಕಡೆ ಕರ್ತನಿಗೆ ಒಬ್ಬ ಸೇವಕನ ಅಗತ್ಯತೆ ಇತ್ತು. ಇನ್ನೊಂದು ಕಡೆ ಹನ್ನಳಿಗೆ ಮಗುವಿನ ಅವಶ್ಯಕತೆ ಇತ್ತು. ಆ ಕಾಲದಲ್ಲಿ ಪ್ರವಾದಿಗಳಿರಲಿಲ್ಲ. ಆದ್ದರಿಂದ ತನ್ನ ಅಗತ್ಯತೆಯನ್ನೂ, ಕರ್ತನ ಅಗತ್ಯತೆಯನ್ನು, ಕರ್ತನಿಗೆ ತಿಳಿಯಪಡಿಸಿ, "ಸೇನಾಧೀಶ್ವರನಾದ ಯೆಹೋವನೇ, ನಿನ್ನ ದಾಸಿಯ ದುಃಖವನ್ನು ಪರಾಂಬರಿಸು, ನನ್ನನ್ನು ತಿರಸ್ಕರಿಸದೆ ಕನಿಕರವಿಟ್ಟು ನನಗೊಬ್ಬ ಮಗನನ್ನು ಅನುಗ್ರಹಿಸು ಅವನು ಜೀವದಿಂದಿರುವವರೆಗೂ ನಿನ್ನವನಾಗಿಯೇ ಇರುವ ಹಾಗೆ ನಿನಗೆ ಪ್ರತಿಷ್ಠಿಸಿ ಕೊಡುವೆನು" ಎಂದು ಪ್ರಾರ್ಥಿಸಿದಳು (1ಸಮು 1:11). ಅವಳ ಪ್ರಾರ್ಥನೆ ಕೇಳಿ ಕರ್ತನಿಗೆ ಬಹಳ ಸಂತೋಷವಾಯಿತು. ಅವಳ ಪ್ರಾರ್ಥನೆಗೆ ಕೂಡಲೆ ಉತ್ತರ ಕೊಟ್ಟನು. ಸಮುವೇಲನನ್ನು ಅವಳಿಗೆ ಅನುಗ್ರಹಿಸಿದನು. ಹನ್ನಳೂ ತನ್ನ ಮಾತಿನಂತೆ, ಚಿಕ್ಕ ಮಗುವಾಗಿದ್ದಾಗಲೇ ಅವನನ್ನು ಕರ್ತನಿಗೆ ಅರ್ಪಿಸಿದಳು. ಕರ್ತನು, ಸಮುವೇಲನನ್ನು ಒಬ್ಬ ದೊಡ್ಡ ದೇವಸೇವಕನಾಗಿ, ಪ್ರವಾದಿಯಾಗಿ, ನ್ಯಾಯಾಧಿಪತಿಯಾಗಿ ಎಬ್ಬಿಸಿದನು. ಕರ್ತನು ಹನ್ನಳಿಗೆ ಇನ್ನೂ ಐದು ಮಂದಿ ಮಕ್ಕಳನ್ನೂ ದಯಪಾಲಿಸಿದನು.

ದೇವಜನರೇ, ಪ್ರತಿಯೊಬ್ಬ ತಾಯಂದಿರು ತಮ್ಮ ಮಕ್ಕಳಿಗೋಸ್ಕರ ಉಪವಾಸ ಪ್ರಾರ್ಥನೆ ಮಾಡಿ ಭಯಭಕ್ತಿಯುಳ್ಳ ಮಕ್ಕಳಾಗಿ ಕರ್ತನಿಗೆ ಪ್ರತಿಷ್ಠೆ ಮಾಡಿರಿ ಬೆಳೆಸಿ. ಪ್ರಾರ್ಥಿಸುವ ತಾಯಂದಿರು ಇರುವಂಥ ಮಕ್ಕಳು ಭಾಗ್ಯವಂತರು. ತಾಯಿಯ ಪ್ರಾರ್ಥನೆ ನಿಶ್ಚಯವಾಗಿ ಮಕ್ಕಳಿಗೆ ಭಾಗ್ಯಕರವಾದ ಆಶೀರ್ವಾದಗಳನ್ನು ತರುವದು. ಹಾಗೂ ಅವರ ಭವಿಷ್ಯವು ಉಜ್ವಲವಾಗುವುದು.

**ನೆನಪಿಗೆ : 'ಆಕೆಯು ಯೆಹೋವನ ಅನುಗ್ರಹದಿಂದ ಗರ್ಭಿಣಿಯಾಗಿ ದಿನತುಂಬಿದ ಮೇಲೆ ಒಬ್ಬ ಮಗನನ್ನು ಹೆತ್ತಳು. ಯೆಹೋವನನ್ನು ಬೇಡಿ ಪಡಕೊಂಡೆನೆಂದು ಹೇಳಿ ಆ ಮಗನಿಗೆ ಸಮುವೇಲನೆಂದು ಹೆಸರಿಟ್ಟಳು' (1ಸಮು 1:20).**

| ಮಾರ್ಚ್ 20 | **ಯೆಹೋಶುವನ ಪ್ರಾರ್ಥನೆ!** | ಬೆಳಿಗ್ಗೆ : ಯೆಹೋ 4,5,6<br>ಸಂಜೆ : ಲೂಕ 1:1-25 |
|---|---|---|

**'ಕರ್ತನೇ, ಇಸ್ರಾಯೇಲ್ಯರು ಶತ್ರುಗಳಿಗೆ ಬೆನ್ನು ತೋರಿಸಿದ್ದಾರಲ್ಲಾ, ಇನ್ನೇನು ಹೇಳಲಿ?....ನಿನ್ನ ನಾಮಕೋಸ್ಕರ ಏನು ಮಾಡುವಿ ಅಂದನು' (ಯೆಹೋ 7:8,9).**

ಇಸ್ರಾಯೇಲ್ಯರಲ್ಲಿ ಹೊಕ್ಕ ಪಾಪದ ಕುರಿತು ತಿಳಿಯದ ಯೆಹೋಶುವನು, ಆಯಿ ಪಟ್ಟಣದಲ್ಲಿ ಬಹು ದೊಡ್ಡ ಸೋಲನ್ನು ಅನುಭವಿಸಬೇಕಾಯಿತು. ಇದರಿಂದ ಬಹಳ ಭಯಭೀತನಾದನು. ಅವನೂ ಇಸ್ರಾಯೇಲ್ಯರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ತಲೆಯ ಮೇಲೆ ಬೂದಿಯನ್ನು ಹಾಕಿಕೊಂಡು ಸಾಯಂಕಾಲದವರೆಗೆ ಯೆಹೋವನ ಮಂಜೂಷದ ಮುಂದೆ ಬೋರಲು ಬಿದ್ದಿದ್ದರು.

ಆಗ ಯೆಹೋವನು, ಯೆಹೋಶುವನಿಗೆ "ಏಳು, ನೀನು ಈ ಪ್ರಕಾರ ಬೋರಲುಬಿದ್ದಿರುವದೇಕೆ? ಇಸ್ರಾಯೇಲ್ಯರು ನನ್ನ ನಿಬಂಧನೆಯನ್ನು ಮೀರಿ ಪಾಪಿಷ್ಠರಾಗಿದ್ದಾರೆ. ಮೀಸಲಾದ ವಸ್ತುಗಳನ್ನು ತಮ್ಮ ಸಲಕರಣೆಗಳಲ್ಲಿ ಅಡಗಿಸಿಟ್ಟು ವಂಚಕರಾದರು" (ಯೆಹೋ 7:10,11) ಎಂದು ಹೇಳಿದನು. ಯೆಹೋಶುವನು ಮೊದಲಿನಿಂದಲೂ ಜನರಿಗೆ "ನಿಮ್ಮನ್ನು ಶುದ್ಧಪಡಿಸಿಕೊಳ್ಳಿರಿ, ಯೆಹೋವನು ನಾಳೆ ನಿಮ್ಮ ಮಧ್ಯದಲ್ಲಿ ಹಾದು ಹೋಗುವನು ಅದ್ಭುತವನ್ನು ಮಾಡುವನು ಎಂದು ಹೇಳುತ್ತಲೇ ಬಂದಿದ್ದನು" (ಯೆಹೋ 3:5). ಯೆರಿಕೋದಲ್ಲಿ ಕದ್ದ ಸಾಮಾನುಗಳು, ಆಕಾನನ ಗುಡಾರದಲ್ಲಿ ಸಿಕ್ಕಿತು, ಇದರಿಂದ ಅವನೂ ಅವನ ಕುಟುಂಬದವರು ಕಲ್ಲೆಸೆದು ಕೊಲ್ಲಲ್ಪಟ್ಟರು. ಅನಂತರ ಇಸ್ರಾಯೇಲ್ಯರು ಆಯಿ ಪಟ್ಟಣದ ಮೇಲೆ ಪುನಃ ಯುದ್ಧಕ್ಕೆ ಹೋದಾಗ, ಯೆಹೋವನು ಅವರಿಗೆ ಜಯ ನೀಡಿದನು.

ಸತ್ಯವೇದ ಹೇಳುತ್ತದೆ "ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವಪ್ರಾರ್ಥನೆಯೂ ಅಸಹ್ಯ" (ಜ್ಞಾನೋ 28:9) ಎಂದು. ಹಾಗಾದರೆ ದೇವರು ಯಾರ ಪ್ರಾರ್ಥನೆಯನ್ನು ಕೇಳುವನು? ಉತ್ತರ ನೀಡುವನು? "ದುಷ್ಟರ ಯಜ್ಞ ಯೆಹೋವನಿಗೆ ಅಸಹ್ಯ ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ" "ಯೆಹೋವನು ದುಷ್ಟರಿಗೆ ದೂರ ಶಿಷ್ಟರ ಬಿನ್ನಹಕ್ಕೆ ಹತ್ತರ" (ಜ್ಞಾನೋ 15:8,29). ಯಾವನು, ತಾನು ಪಾಪಗಳನ್ನು ಬಿಟ್ಟುಬಿಡ ಬೇಕೆಂಬ ತೀರ್ಮಾನದೊಂದಿಗೆ ಕರ್ತನ ಬಳಿಗೆ ಬರುವಾಗ, ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಿನ್ನ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಿನ್ನನ್ನು ಶುದ್ಧೀಕರಿಸಿ ನಿಶ್ಚಯವಾಗಿ ಕರುಣಿಸುವನು.

ದೇವಜನರೇ, ನಿಮ್ಮ ಪ್ರಾರ್ಥನೆಗಳು ಕೇಳಲ್ಪಡಬೇಕೆಂದರೆ ನೀತಿವಂತರಾಗಿ, ಶಿಷ್ಟರಾಗಿ, ಕರ್ತನ ಮುಂದೆ ನಿಂತು, ಬಾಧ್ಯತೆಯಿಂದ ಪ್ರಾರ್ಥಿಸಿರಿ, ಸೊಲೊಮೋನನು ಹೇಳುತ್ತಾನೆ "ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು, ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ, ಕರುಣೆ ದೊರೆಯುವದು" (ಜ್ಞಾನೋ 28:13).

**ನೆನಪಿಗೆ : 'ಜನರೇ, ಯಾವಾಗಲೂ ಆತನನ್ನೇ ನಂಬಿ ನಿಮ್ಮ ಹೃದಯವನ್ನು ಆತನ ಮುಂದೆ ಬಿಚ್ಚಿರಿ; ದೇವರು ನಮ್ಮ ಆಶ್ರಯವು' (ಕೀರ್ತ 62:8).**

ಮಾರ್ಚ್ 21

## ಸಮುವೇಲನ ಪ್ರಾರ್ಥನೆ!

ಬೆಳಗ್ಗೆ : ಯೆಹೋ 7,8,9
ಸಂಜೆ : ಲೂಕ 1:26-38

**'ಯೆಹೋವನೇ, ಅಪ್ಪಣೆಯಾಗಲಿ, ನಿನ್ನ ದಾಸನು ಕಾದಿದ್ದಾನೆ" (1ಸಮು 3:9).**

ಬಾಲಕನಾಗಿದ್ದ ಸಮುವೇಲನಿಗೆ ಪ್ರಧಾನ ಯಾಜಕನಾದ ಏಲಿ ಹೇಳಿಕೊಟ್ಟ ಒಂದು ಚಿಕ್ಕ ಪ್ರಾರ್ಥನೆಯಾಗಿದೆ. ಹೆತ್ತವರು, ತಮ್ಮ ಮಕ್ಕಳಿಗೆ ಪ್ರಾರ್ಥನೆ ಮಾಡುವದನ್ನು ಹೇಳಿಕೊಡಬೇಕು. ಅಭ್ಯಾಸ ಮಾಡಿಸಬೇಕು. ಅವರು ಪ್ರತಿದಿನ ಪ್ರಾರ್ಥಿಸುವರಾ? ಎಂಬುದನ್ನು ಗಮನಿಸಬೇಕು ಹಾಗೆ ಮಾಡುವಾಗ ಮುಂದೆ ಅವರು ಪ್ರಾರ್ಥಿಸುವದರಲ್ಲಿ ಪಳಗಿ ಪ್ರಾರ್ಥನಾ ವೀರರಾಗುವರು. ಹಾಗೂ ಕರ್ತನ ಮೆಚ್ಚಿಗೆಗೆ ಆತನ ಆಶೀರ್ವಾದಕ್ಕೆ ಪಾತ್ರರಾಗುವರು.

ಅನೇಕ ತಂದೆತಾಯಿಗಳು ಚಿಕ್ಕ ಮಕ್ಕಳು 23ನೇ ಕೀರ್ತನೆಯನ್ನು ಬಾಯಿಪಾಠವಾಗಿ ಒಪ್ಪಿಸಿದರೆ, ಸಾಕು ಎಂದು ಭಾವಿಸುವರು. ಅದರೊಂದಿಗೆ ಮಕ್ಕಳ ಪ್ರಾರ್ಥನಾ ಜೀವಿತವನ್ನು ಮೊಟುಕುಗೊಳಿಸುವರು. ಅವರು ಪ್ರಾರ್ಥನೆಯಲ್ಲಿ ಬೆಳೆಯಬೇಕೆಂಬುದೇ ದೇವರ ಆಶೆಯಾಗಿದೆ. ದೇವರು ದೊಡ್ಡವರ ಪ್ರಾರ್ಥನೆಗಿಂತಲೂ, ಚಿಕ್ಕವರ ಪ್ರಾರ್ಥನೆಯನ್ನು ಬಯಸುವನು. ಯಾಕೆಂದರೆ, ಅವರು ಹೃದಯದಲ್ಲಿ ಶುದ್ಧರಾಗಿರುವರು, ಹಗೆ, ಕೋಪ, ವಂಚನೆ ಅವರಲ್ಲಿರುವದಿಲ್ಲ. ಆದ್ದರಿಂದಲೇ ದೇವರು ಪುಟ್ಟ ಸಮುವೇಲನ ಬಳಿಗೆ ಬಂದು "ಸಮುವೇಲನೇ, ಸಮುವೇಲನೇ ಎಂದು ಕರೆದನು. ಅದಕ್ಕೆ ಸಮುವೇಲನು, ಅಪ್ಪಣೆಯಾಗಲಿ ನಿನ್ನ ದಾಸನು ಕಾದಿದ್ದಾನೆ" ಎಂದು ಹೇಳಿದನು. ಆಗ, ದೇವರು ಮಹತ್ಕಾರ್ಯಗಳನ್ನು ಕುರಿತು ಸಮುವೇಲನ ಬಳಿ ಮಾತಾಡಿದನು. ಏಲಿಯನ ಕುಟುಂಬಕ್ಕೆ ಬರಲಿರುವ ನ್ಯಾಯ ತೀರ್ಪನ್ನು ಕುರಿತು ಸಮುವೇಲನ ಬಳಿ ಮನಬಿಚ್ಚಿ ಮಾತಾಡಿದನು (1ಸಮು 3:10-14).

ಒಬ್ಬ ತಂದೆ ಒಂದು ದಿನ ತನ್ನ ಮಗನು ಹಾಸಿಗೆಗೆ ತೆರಳುವ ಮೊದಲು ಮಾಡಿದ ಪ್ರಾರ್ಥನೆಯನ್ನು ಆಲಿಸಿದನು. ಆ ಪುಟ್ಟ ಬಾಲಕ ದೇವರೇ ನನ್ನ ತಂದೆಯಂತೆ ನನಗೆ ಒಳ್ಳೆಯ ಗುಣಗಳನ್ನು ಸ್ವಭಾವವನ್ನು ನೀಡಿ ನಿನಗೆ ಮೆಚ್ಚಿಗೆಯಾಗುವಂತೆ ಆಶೀರ್ವದಿಸು ಎಂದು ಹೇಳಿ ಪ್ರಾರ್ಥಿಸಿ ಮಲಗಿದನು. ಆ ಬಾಲಕನು ಮಾಡಿದ ಪ್ರಾರ್ಥನೆ ತಂದೆಯ ಹೃದಯವನ್ನು ಬೆಂಕಿಯ ಜ್ವಾಲೆಯಂತೆ ತಾಕಿತು. ಕೂಡಲೇ ಅವನು ತನ್ನ ಕೋಣೆಗೆ ಹೋಗಿ, ತನ್ನ ರಹಸ್ಯ ಪಾಪಗಳನ್ನೆಲ್ಲಾ ಕರ್ತನ ಮುಂದೆ ಅರಿಕೆ ಮಾಡಿ ಪಶ್ಚಾತ್ತಾಪಪಟ್ಟನು. ಹೌದು ಮಗನು ಮಾಡಿದ ಪ್ರಾರ್ಥನೆಯ ಮೂಲಕ ಪವಿತ್ರಾತ್ಮನು ತಂದೆಗೆ ಅವನಲ್ಲಿದ್ದ ಕೋಪ, ದ್ವೇಷ ಎಲ್ಲವನ್ನೂ ತಿಳಿಯಪಡಿಸಿದನು. ದೇವರೇ ನನ್ನ ಮಗನನ್ನು ನಿನ್ನಂತೆ ಮಾರ್ಪಡಿಸು ಎಂದು ಪ್ರಾರ್ಥಿಸಿದನು.

ದೇವಜನರೇ, ಸಮುವೇಲನಂತೆ ನಿಮ್ಮ ಮಕ್ಕಳು ಪ್ರಾರ್ಥನಾ ವೀರರಾಗುವಂತೆ ಅವರನ್ನು ಬಾಲ್ಯದಿಂದಲೇ ಪ್ರಾರ್ಥನೆಯಲ್ಲಿ ತೊಡಗಿಸಿ ಪ್ರಾರ್ಥನೆ ಮಾಡುವದರಲ್ಲಿ ಸತ್ಯವೇದವನ್ನು ಓದುವದನ್ನು, ಅದರಲ್ಲಿನ ವಾಕ್ಯಗಳನ್ನು ಮನಪಾಠ ಮಾಡಿಸಿರಿ. ಆಗ ಅವರು ನೀತಿ ಮಾರ್ಗದಲ್ಲಿ ನಡೆಯುವರು.

**ನೆನಪಿಗೆ : 'ಸಮುವೇಲನು ಜನರ ಈ ಎಲ್ಲಾ ಮಾತುಗಳನ್ನು ಯೆಹೋವನಿಗೆ ತಿಳಿಸಲಾಗಿ ಆತನು.....ಅರಸನನ್ನು ನೇಮಿಸು ಎಂದನು' (1ಸಮು 8:21).**

## ಮಾರ್ಚ್ 22 ಪ್ರಾರ್ಥಿಸಿದ ಸಮುವೇಲ! ಬೆಳಗ್ಗೆ : ಯೆಹೋ 10,11,12 ಸಂಜೆ : ಲೂಕ 1:39-56

**'ನಾನಾದರೋ ನಿಮಗೋಸ್ಕರ ಯೆಹೋವನನ್ನು ಪ್ರಾರ್ಥಿಸುತ್ತಾ ಆತನ ಉತ್ತಮ ನೀತಿಮಾರ್ಗವನ್ನು ನಿಮಗೆ ತೋರಿಸಿಕೊಡುವದನ್ನು ಬಿಡುವದೇ ಇಲ್ಲ; ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು' (1ಸಮು 12:23).**

ಪ್ರಾರ್ಥಿಸದೆ ಇರುವದು ಪಾಪ ಎಂಬುದನ್ನು ಪ್ರಪ್ರಥಮವಾಗಿ ತೋರಿಸಿಕೊಟ್ಟಾತನು ಸಮುವೇಲನು. ಪ್ರಾರ್ಥಿಸಲಾಗದೆ ಇರುವದಕ್ಕೆ ನೀವು ಅನೇಕ ನೆವಗಳನ್ನು ಹೇಳಬಹುದು, ಆದರೆ ಕರ್ತನು ಅದನ್ನು ಪಾಪವೆಂದೇ ಪರಿಗಣಿಸುವನು. ಆದ್ದರಿಂದ ಪ್ರಾರ್ಥಿಸಿರಿ, ಬೇಡಿಕೊಳ್ಳಿರಿ ಗೋಳಾಡಿರಿ. ವಿಜ್ಞಾಪನೆ, ಮಾಡಿರಿ. ಒಬ್ಬರ ಭಾರವನ್ನು ಒಬ್ಬರು ಹೊರುವದು ಎಷ್ಟೋ ಅವಶ್ಯ!.

ಕೆಲವರು ರಕ್ಷಿಸಲ್ಪಟ್ಟು ಐವತ್ತು ವರುಷಗಳಾಗಿದ್ದರೂ, ಯಾವದೋ ಒಂದು ಕಾಲದಲ್ಲಿ ಬರೆಯಲ್ಪಟ್ಟ ಪ್ರಾರ್ಥನಾ ಪುಸ್ತಕವನ್ನೇ ಪುನಃ ಪುನಃ ಗಿಣಿಪಾಠದಂತೆ ಓದುತ್ತಿರುತ್ತಾರೆ. ಆದರೆ ಸತ್ಯವೇದವೋ, ಆತ್ಮದಿಂದಲೂ ಸತ್ಯದಿಂದಲೂ, ಪ್ರಾರ್ಥಿಸುವ ಪ್ರಾರ್ಥನೆಯನ್ನು ಕಲಿಸಿಕೊಡುವದು, "ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಮತ್ತಾ 5:44). "ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು" (ಮತ್ತಾ 6:6). "ಬೆಳೆ ಕೊಯ್ಲಿಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" (ಮತ್ತಾ 9:38). "ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ" (ಜೆಕರ್ಯ 10:1). "ಎಚ್ಚರವಾಗಿದ್ದು ಪ್ರಾರ್ಥಿಸಿರಿ" (ಮತ್ತಾ 26:41). ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಿರಿ (ಲೂಕ 18:1) ಎಂದೆಲ್ಲಾ ದೇವರ ವಾಕ್ಯ ಹೇಳುತ್ತದೆ.

ವ್ಯಭಿಚಾರ ಮಾಡಬೇಡ, ಕೊಲೆ ಮಾಡಬೇಡ ಎಂಬ ಆಜ್ಞೆಯನ್ನು ಮೀರುವದು ಹೇಗೆ ಪಾಪವೋ, ಹಾಗೆಯೇ, "ಪ್ರಾರ್ಥಿಸು, ವಿಜ್ಞಾಪಿಸು" ಎಂಬ ದೇವರ ಆಜ್ಞೆಯನ್ನು ಮೀರುವದು. ಪಾಪವೇ. ಪ್ರಾರ್ಥನೆ ನಿಮಗೂ ಕರ್ತನಿಗೂ ನಡುವೆ ಸಂಬಂಧವನ್ನು ಏರ್ಪಡಿಸಲು ಸಹಾಯ ಮಾಡುವದು. ಇದರ ಮೂಲಕ ಸೈತಾನನ ಕೆಡಕುಗಳನ್ನು ಮುರಿದು ಹಾಕಿ ಜಯವನ್ನು ತಂದುಕೊಡುವದು ದೈವೀಕ ನಂಬಿಕೆಯನ್ನು ನೀಡುವದು. ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು [ಏರುವರು]; ಓಡಿ ದಣಿಯರು, ನಡೆದು ಬಳಲರು" (ಯೆಶಾ 40:31) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ನೀವು ಪ್ರಾರ್ಥಿಸದೇ ಹೋದರೆ ಕರ್ತನನ್ನು ಅವಮಾನ ಪಡಿಸುವಿರಿ. ಆತನ ಕೃಪೆಯನ್ನು ಅವಮಾನ ಪಡಿಸುವಿರಿ. ಆದ್ದರಿಂದ ಆ ಪಾಪವನ್ನು ಮಾಡದೆ, ಯಾವಾಗಲೂ ಪ್ರಾರ್ಥಿಸಿರಿ, ಮುಖ್ಯವಾಗಿ ರೋಗಿಗಳಿಗಾಗಿ ಕಷ್ಟ, ಸಂಕಟಗಳಲ್ಲಿ ಸಿಲುಕಿರುವವರಿಗಾಗಿ ಆತ್ಮಗಳ ರಕ್ಷಣೆಗಾಗಿ "ಪ್ರಾರ್ಥನೆಯೊಂದೇ ಪರಿಹಾರ" ಎಂಬ ವಾರ್ತೆ ನಿಮ್ಮ ಹೃದಯದಲ್ಲಿ ಪ್ರತಿಧ್ವನಿಸುತ್ತಲೇ ಇರಲಿ. ಅದೊಂದೇ ನಿಮ್ಮ ಉಸಿರಾಗಿಯೂ ತವಕವಾಗಿಯೂ ಇರಲಿ. ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಿರಿ.

**ನೆನಪಿಗೆ : 'ಎಡೆಬಿಡದೆ ಪ್ರಾರ್ಥನೆ ಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ... ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ' (1ಥೆಸ 5:17,18).**

# ಎಲೀಯನ ಪ್ರಾರ್ಥನೆ!

ಬೆಳಗ್ಗೆ : ಯೆಹೋ 13,14,15
ಸಂಜೆ : ಲೂಕ 1:57-80

**'ಯೆಹೋವನೇ ಕಿವಿಗೊಡು ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬದನ್ನು ಇವರಿಗೆ ತಿಳಿಯಪಡಿಸು" ಎಂದು ಪ್ರಾರ್ಥಿಸಿದನು (1ಅರ 18:37).**

ಸತ್ಯವೇದದಲ್ಲಿರುವ ಭಕ್ತರ ಪ್ರಾರ್ಥನೆಯನ್ನು ಧ್ಯಾನಿಸುವಾಗ, ನಮ್ಮ ಆಂತರ್ಯ ದಹಿಸುತ್ತದೆ. ಪ್ರಾರ್ಥನೆಯ ಆತ್ಮ ಹತ್ತಿ ಉರಿಯುವನು. ಇಕ್ಕಟ್ಟಿನ ಸಮಯಗಳಲ್ಲಿ, ಹೋರಾಟದ ವೇಳೆಗಳಲ್ಲಿ. ಅವರು ಎಷ್ಟು ಧೃಡವಾಗಿ, ನಂಬಿಕೆಯಿಂದ ಪ್ರಾರ್ಥಿಸಿ, ಕರ್ತನಿಂದ ಉತ್ತರ ಪಡೆದುಕೊಂಡರೆಂಬುದನ್ನು ತಿಳಿಯುತ್ತೇವೆ. ಅವರಲ್ಲಿ ಎಲೀಯನೂ ಒಬ್ಬನು. ಕರ್ತನಿಗಾಗಿ ಭಕ್ತಿ ವೈರಾಗ್ಯದಿಂದ ಹೋರಾಡಿದ ಮಹಿಮೆಯಾದ ಅಗ್ನಿರಥವಾಗಿದ್ದನು!

ಎಲೀಯನು ನಮ್ಮಂತೆ ಸಮಸ್ಯೆಗಳಿಂದ ಕೂಡಿದ ಮನುಷ್ಯನಾಗಿದ್ದರೂ, ಪ್ರಾರ್ಥನೆಯ ಮೂಲಕ ಅವನು ಮಾಡಿದ ಸಾಧನೆಗಳನ್ನೂ, ಸವಾಲಿನಿಂದ ಕೂಡಿದ ಸೇವೆಯನ್ನು ಗಮನಿಸಿರಿ. ಸತ್ಯವೇದದಲ್ಲಿ ನಮ್ಮ ಗಮನವನ್ನು ಸೆಳೆಯುವಂಥ ಅನೇಕ ಪ್ರಾರ್ಥನೆಗಳಿದ್ದಾಗ್ಯೂ, ಎಲೀಯನ ಈ ಪ್ರಾರ್ಥನೆ, ಬಹು ಬಲ ಉಳ್ಳದ್ದು, ಕಾರಣ, ಆ ಪ್ರಾರ್ಥನೆ ಮಾಡಲು ಅವನು ಒಂದು ನಿಮಿಷಕ್ಕೂ ಕಡಿಮೆಯಾದ ಸಮಯ, ತೆಗೆದುಕೊಂಡಿರಬಹುದು ಕೂಡಲೇ ಆಕಾಶದಿಂದ ಅಗ್ನಿ ಇಳಿಯಿತು. ಆ ಪ್ರಾರ್ಥನೆಯಿಂದ ಸಮಾರ್ಯದಲ್ಲಿದ್ದ ಎಲ್ಲರೂ ಬಾಳನ ಆರಾಧನೆಯನ್ನು ಬಿಟ್ಟು, "ಯೆಹೋವನೇ ದೇವರು ಎಂದು ಅರಿಕೆ ಮಾಡುವಂತೆ ಮಾಡಿತು. ಎಲೀಯನು ಒಬ್ಬನೇ ಕರ್ಮೆಲ್ ಬೆಟ್ಟವನ್ನು ಏರಿದನು. ಅವನ ಪಕ್ಷದಲ್ಲಿ ಒಬ್ಬನೂ ಇಲ್ಲ ಅವನಿಗೆ ವಿರೋಧವಾಗಿ ಬಾಳನ ಪ್ರವಾದಿಗಳೂ, ಅಹಾಬ ಅರಸನೂ ಅವನ ಹೆಂಡತಿ ಇಜಬೇಲಳೂ ಕುಳಿತಿದ್ದರು. ಎಲೀಯನ ಪ್ರಾರ್ಥನೆ ಕೇಳಲ್ಪಡದೇ ಹೋದಲ್ಲಿ, ಅಹಾಬರಾಜನೂ, ಅವನ ಹೆಂಡತಿ ಇಜಬೇಲಳೂ ಅವನನ್ನು ಕೊಲ್ಲುವದು ನಿಶ್ಚಯ. ಅವನು ಇಸ್ರಾಯೇಲಿನಲ್ಲಿ ಅವಮಾನ ಹೊಂದುವನು. ಆದರೆ ಎಲೀಯನ ದೇವರ ಮೇಲಿನ ನಂಬಿಕೆ, ಅವನನ್ನು ರಕ್ಷಿಸಿತು. ಎಲೀಯನಿಗೆ ಕರ್ತನ ಮೇಲಿದ್ದ ಪ್ರೀತಿ, ಗೌರವ ವೈರಾಗ್ಯ ಎಷ್ಟರ ಮಟ್ಟಿಗಿತ್ತೆಂಬುದನ್ನು ಅವನು ಮಾಡಿದ ಪ್ರಾರ್ಥನೆಯಲ್ಲಿ ಕಾಣಬಹುದು. 1.ನೀನೊಬ್ಬನೇ ದೇವರೆಂದು ಈ ಜನರು ಅರಿಯಬೇಕು. 2.ನೀನು ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವಿ ಎಂಬುದನ್ನು ಈ ಜನರು ತಿಳಿಯಬೇಕು. 3.ಅವರು ಪುನಃ ನಿನ್ನ ಬಳಿಗೆ ಹಿಂದಿರುಗಬೇಕು. ನಿನ್ನ ಮುಂದೆ ಮೊಣಕಾಲೂರಿ ನೀನೇ ದೇವರೆಂದು ಅರಿಕೆ ಮಾಡಬೇಕು. ಎಂದು ವೈರಾಗ್ಯದಿಂದ ಪ್ರಾರ್ಥಿಸಿದನು. ಈ ಪ್ರಾರ್ಥನೆಯಲ್ಲಿ ಅವನು ತನ್ನ ರಕ್ಷಣೆಗಾಗಲಿ, ತನ್ನ ಗೌರವವನ್ನು ಕಾಪಾಡಬೇಕೆಂಬುದಾಗಲಿ ಬೇಡಿಕೊಳ್ಳಲಿಲ್ಲ ದೇವರ ಘನತೆಯನ್ನು ಎತ್ತಿಹಿಡಿದನು.

ದೇವಮಕ್ಕಳೇ, ಎಲೀಯನಂತೆ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನನ್ನೇ ಎತ್ತಿ ಹಿಡಿಯಿರಿ. ನಿಶ್ಚಯವಾಗಿ ಕರ್ತನು, ನಿಮ್ಮ ಮಕ್ಕಳನ್ನೂ, ಕುಟುಂಬವನ್ನೂ, ಸಭೆಯನ್ನೂ ತನ್ನ ಬಳಿಗೆ ನಡೆಸಿ ಅದ್ಭುತಗಳನ್ನು ಕಾಣುವಂತೆ ಮಾಡುವನು.

**ನೆನಪಿಗೆ : 'ಕೂಡಲೆ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞಮಾಂಸವನ್ನೂ, ಕಟ್ಟಿಗೆಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು....ಹೀರಿ ಬಿಟ್ಟಿತು" (1ಅರ 18:38).**

| | | |
|---|---|---|
| **ಮಾರ್ಚ್ 24** | **ಎಲೀಷನ ಪ್ರಾರ್ಥನೆ!** | **ಬೆಳಗ್ಗೆ : ಯೆಹೋ 16,17,18**<br>**ಸಂಜೆ : ಲೂಕ 2:1-20** |

**'ಶತ್ರುಗಳು ಸಮೀಪಕ್ಕೆ ಬಂದಾಗ ಎಲೀಷನು ಸ್ವಾಮೀ, ಈ ಜನರನ್ನು ಕುರುಡರನ್ನಾಗಿ ಮಾಡು....ಅವರನ್ನು ಕುರುಡರನ್ನಾಗಿ ಮಾಡಿದನು' (2ಅರ 6:18).**

ನಮ್ಮ ಕರ್ತನು ಕನಿಕರ ಉಳ್ಳವನು, ಜನರ ಮೇಲೆ ಆತನಿಗಿದ್ದ ಅಪಾರವಾದ ಕರುಣೆಯಿಂದ, ಅನೇಕ ಕುರುಡರ ಕಣ್ಣುಗಳನ್ನು ತೆರೆದು ಅವರಿಗೆ ದೃಷ್ಟಿಯನ್ನು ನೀಡಿದನು ಬಾರ್ತಿಮಾಯನೆಂಬ ಹುಟ್ಟು ಕುರುಡನ ಕುರುಡುತನವನ್ನು ಕರ್ತನು ನೀಗಿಸಿದಾಗ, ಅವನು ಪ್ರಪಂಚವನ್ನು ನೋಡಿ ಎಷ್ಟೊಂದು ಸಂತೋಷಪಟ್ಟನು!.

ನಮ್ಮ ಕರ್ತನು ಕಾಣದ ಕಣ್ಣುಗಳನ್ನು ಕಾಣುವಂತೆ ಮಾಡುವದು ಮಾತ್ರವಲ್ಲ. ಕೆಲವು ವೇಳೆ ತೆರೆದ ಕಣ್ಣುಗಳನ್ನು ಕುರುಡಾಗುವಂತೆ ಮಾಡಿ, ಅದ್ಭುತ ಮಾಡುವನು. ಅದು ನ್ಯಾಯ ತೀರ್ಪಿನ ಅದ್ಭುತ. ಇಲ್ಲಿ ಎಲೀಷನು ಕುರುಡಾಗುವಂತೆ ಕೇಳಲಿಲ್ಲ ಕಣ್ಣುಗಳು ಮಂದವಾಗುವಂತೆ ಪ್ರಾರ್ಥಿಸಿದನು. ಹಾಗಂದರೇನು? ಕಣ್ಣುಗಳು ತೆರೆದಿದ್ದರೂ ನೋಡಿದ್ದನ್ನು ಗ್ರಹಿಸಲಾಗುವದಿಲ್ಲ.

ಸಹೋದರ ಆಂಡ್ರೂ ಎಂಬಾತನು, ಹಾಲೆಂಡ್ ದೇಶದಿಂದ, ಸತ್ಯವೇದ ಪುಸ್ತಕಗಳನ್ನು ತನ್ನ ಕಾರಿನ ಡಿಕ್ಕಿಯಲ್ಲಿಯೂ, ಕಾರಿನ ಬೇರೆ ಎಲ್ಲಾ ಖಾಲಿ ಸ್ಥಳಗಳಲ್ಲಿ ಬಚ್ಚಿಟ್ಟು ಕಮ್ಯೂನಿಸ್ಟ್ ದೇಶಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ, ಒಂದು ಎಲ್ಲೆಯಲ್ಲಿ ಸುಂಕದ ಕಟ್ಟೆಯಲ್ಲಿ ಪೊಲೀಸರು ತಪಾಸಣೆಗೆಂದು ಕಾರನ್ನು ನಿಲ್ಲಿಸಿದರು. ಕಾರನ್ನು ತೆರೆಯುವಂತೆ ಹೇಳಿದರು. ಸತ್ಯವೇದವನ್ನು ತೆಗೆದುಕೊಂಡು ಹೋಗುತ್ತಿರುವದು ಗೊತ್ತಾದರೆ. ಕನಿಷ್ಟ ಪಕ್ಷ ಇಪ್ಪತ್ತು ವರುಷಗಳ ಸೆರೆವಾಸ ಅನುಭವಿಸಬೇಕಾಗುವದು. ಆಗ ಆ ಸಹೋದರನು ಕಾರನ್ನು ತೆರೆಯುವ ಮೊದಲು, ಮನಸ್ಸಿನಲ್ಲಿಯೇ "ದೇವರೇ ಇವರ ಕಣ್ಣುಗಳು ಸತ್ಯವೇದವನ್ನು ಕಾಣದಂತೆ ಯೇಸುವಿನ ನಾಮದಲ್ಲಿ ಅವರ ಕಣ್ಣು ಕುರುಡಾಗಲಿ" ಎಂದು ಪ್ರಾರ್ಥಿಸಿದನು. ಅವನ ಪ್ರಾರ್ಥನೆಯಂತೆಯೇ, ಅವರ ಕಣ್ಣುಗಳ ದೃಷ್ಟಿ ಮಂದವಾಗಿ ಸತ್ಯವೇದ ಪುಸ್ತಕಗಳನ್ನು ಕಾಣದೇ ಹೋದವು "ಸರಿಹೋಗು" ಎಂದು ಹೇಳಿ ಕಳುಹಿಸಿದರು.

ದೇವಜನರೇ, ನಿಮ್ಮ ಜೀವಿತದಲ್ಲೂ ಅನೇಕ ವೇಳೆ ಸೈತಾನನು ಅನಿರೀಕ್ಷಿತವಾಗಿ ಸಮಸ್ಯೆಗಳನ್ನು, ಕಷ್ಟಗಳನ್ನು ತಂದು ಹಾಕುವನು ಅಂಥಹ ಸಮಯಗಳಲ್ಲಿ ಅಧೈರ್ಯಕ್ಕೆ ಒಳಗಾಗದಿರಿ. ಎಲೀಷನ ಜೀವಿತವನ್ನು ಪೂರ್ತಿಯಾಗಿ ಓದಿ ನೋಡಿರಿ ಒಂದು ಗುಣುಗುಟ್ಟುವಿಕೆಯಾಗಲೀ ಸೋಲುವಿಕೆಯಾಗಲೀ ಹಿಂಜಾರುವಿಕೆಯಾಗಲೀ ಕಾಣಲೇ ಇಲ್ಲ ತನಗೆ ಜಯವನ್ನು ಕೊಡುವ ದೇವನಿಗೆ ಎಲ್ಲವೂ ಸಾಧ್ಯ ಎಂದು ಜಯಕರವಾದ ಮಾತುಗಳನ್ನೇ ಆಡಿದನು ಅದರಂತೆ ನೀವು ಸಹ ಎಲೀಷನಂತೆ ಕರ್ತನ ಬಳಿ ನಿಮ್ಮ ಸಮಸ್ಯೆಗಳನ್ನು ಒಪ್ಪಿಸಿಕೊಟ್ಟು ಪ್ರಾರ್ಥಿಸಿರಿ. ಅಂದು ಎಲೀಷನ ಪ್ರಾರ್ಥನೆಯನ್ನು ಕೇಳಿದ ದೇವರು, ಇಂದು ನಿಮ್ಮ ಪ್ರಾರ್ಥನೆಗಳನ್ನು ಕೇಳಿ ಸದುತ್ತರವನ್ನು ದಯಪಾಲಿಸುವನು.

**ನೆನಪಿಗೆ : 'ಇಗೋ ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ, ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ' (ಯೆಶಾ 59:1).**

| ಮಾರ್ಚ್ 25 | ಯೇಸುಸ್ವಾಮಿ ಯೆರೂಸಲೇಮಿನಲ್ಲಿ ಅರಸನಂತೆ ಪ್ರವೇಶಿಸಿದ್ದು! | ಬೆಳಗ್ಗೆ : ಯೆಹೋ 19,20,21<br>ಸಂಜೆ : ಲೂಕ 2:21-52 |
|---|---|---|

**'ಜಯ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ಇಸ್ರಾಯೇಲಿನ ಅರಸನಿಗೆ ಆಶೀರ್ವಾದ ಎಂದು ಆರ್ಭಟಿಸಿದರು' (ಯೋಹಾ 12:13).**

ಯೇಸುಸ್ವಾಮಿಯು ಈ ಹಿಂದೆ ಅನೇಕ ಸಾರಿ ಯೆರೂಸಲೇಮ್ ನಗರಕ್ಕೆ ಪ್ರವೇಶ ಮಾಡಿದ್ದನ್ನು ಸತ್ಯವೇದದಲ್ಲಿ ನೋಡುತ್ತೇವೆ. ಆದರೆ, ಈ ಪ್ರವೇಶವು ಯೇಸು ಸ್ವಾಮಿಯ ಅಂತಿಮ ಪ್ರಯಾಣದ ಪ್ರವೇಶವಾಗಿತ್ತು. ಅದು ಪರಲೋಕ ರಾಜನ ವಿಜೃಂಭಣೆಯ ಮಹಾ ಮೆರಣಿಗೆಯಾಗಿತ್ತು. ಆತನು ಈ ಲೋಕಕ್ಕೆ ಬಂದ ಉದ್ದೇಶವನ್ನು ನೆರವೇರಿಸಲು ಹೊರಟ ಪ್ರಯಾಣವಾಗಿತ್ತು. ಯೇಸುಸ್ವಾಮಿಯು ಆಳ್ವಿಕೆ ನಡಿಸುವ ಒಬ್ಬ ಅರಸನಾಗಿ ಅಂದು ಯೆರೂಸಲೇಮನ್ನು ಪ್ರವೇಶಿಸಲಿಲ್ಲ. ಪಾಪ, ಶಾಪ, ಮರಣವೆಂಬ ಶತ್ರುವನ್ನು ತನ್ನ ಮರಣದ ಮೂಲಕ ಜಯಿಸಲು ನಡಿಸಿದ ಪ್ರಯಾಣವಾಗಿತ್ತು. ಈ ಮೆರವಣಿಗೆಯಲ್ಲಿ, ನಿಮ್ಮನ್ನು ಒಬ್ಬರಾಗಿ ಕಲ್ಪನೆ ಮಾಡಿ, ನಿಮ್ಮ ಆತ್ಮೀಯ ಕಣ್ಣುಗಳಿಂದ ನೋಡಿರಿ. ನಾವೂ ಸಹ ಇಂದು ಗರಿಗಳ ಭಾನುವಾರವೆಂದು ಕೊಂಡಾಡುತ್ತೇವಲ್ಲವೇ?.

ಶಾಂತಮೂರ್ತಿಯಾಗಿ ಕ್ರಿಸ್ತೇಸುವು ಕತ್ತೆಯಮರಿಯನ್ನು ಹತ್ತಿದವನಾಗಿ ಬರುತ್ತಿದ್ದನು. ಆತನ ಶಿಷ್ಯರು ಸಂತೋಷದಿಂದ ಕರೆದುಕೊಂಡು ಹೋಗುತ್ತಿದ್ದರು. ಭಕ್ತರ ಭಾರೀ ಸಮೂಹವೇ ಅಲ್ಲಿತ್ತು. ದಾರಿ ಯುದ್ದಕ್ಕೂ ವಸ್ತ್ರಗಳನ್ನೂ ಮರದ ಚಿಗುರುಗಳನ್ನೂ ಹಾಸಿದ್ದರು. ಆತನ ಅದ್ಭುತ ಕಾರ್ಯಗಳನ್ನು ನೋಡಿದವರು, ಆತನಿಂದ ಸ್ವಸ್ಥತೆಯನ್ನು ಪಡೆದವರು. ಆತನ ಧರ್ಮೋಪದೇಶದ ಪ್ರಯೋಜನ ಪಡೆದವರು, ಆತನ ಸಂತೈಸುವಿಕೆಯನ್ನು ಅನುಭವಿಸಿದವರು, ತಾವು ಕಂಡಿದ್ದ ಎಲ್ಲಾ ಮಹತ್ಕಾರ್ಯಗಳ ವಿಷಯದಲ್ಲಿ "ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ ಪರಲೋಕದಲ್ಲಿ ಮಂಗಳ" ಎಂದು ಹಾಡಿ ಕೊಂಡಾಡುತ್ತಿದ್ದರು (ಲೂಕ 19:38). ಅವರ ಆನಂದಕ್ಕೆ ಮಿತಿಯೇ ಇರಲಿಲ್ಲ. ಆದರೆ, ಯೆರೂಸಲೇಮಿನ ಸಮೀಪಕ್ಕೆ ಬಂದಾಗ ಪಟ್ಟಣವನ್ನು ನೋಡಿ ದುಃಖಪಟ್ಟು ಅತ್ತನು, ಅದು ದೇವರಿಗೆ ದೂರವಾದ, ಆತನ ಕರೆಗೆ ಕಿವಿಗೊಡದ ಆತನಿಗೆ ವಿರೋಧವಾದ ದುಸ್ಥಿತಿಗೆ ಒಳಗಾಗಿತ್ತು (ಲೂಕ 19:42,43).

ದೇವಮಗುವೇ, ಇಂದು ಆತನು ನಿನ್ನನ್ನು ನೋಡಿ ಸಂತೋಷಿಸುವನೇ? ಅಥವಾ ದುಃಖಿಸುವನೇ? ಶಿಲುಬೆಯಲ್ಲಿ ನಿನಗಾಗಿ ಜಜ್ಜಲ್ಪಟ್ಟು ಆತನನ್ನು ಅಂಗೀಕರಿಸಿ, ಯೆರೂಸಲೇಮೆಂಬ ನಿನ್ನ ಹೃದಯವನ್ನು ಆತನಿಗೆ ತೆರೆದುಕೊಟ್ಟು, "ದಾವೀದನ ಕುಮಾರನಿಗೆ ಜಯ"ವೆಂದು ಹೇಳುವಿಯಾ? ಆತನು ಈ ಲೋಕಕ್ಕೆ ಬಂದ ಉದ್ದೇಶ ನರಜನ್ಮದವರೆಲ್ಲರ ಪಾಪ ಶಾಪ ಮರಣವನ್ನು ತಾನು ಶಿಲುಬೆಯಲ್ಲಿ ಹೊತ್ತು ತೀರಿಸುವದೇ ಆಗಿತ್ತು. ಆದ್ದರಿಂದ ನೀನು ಪಾಪ ಶಾಪ ಮರಣಗಳಿಂದ ವಿಮುಕ್ತನಾಗಿದ್ದೀ ಎಂಬ ಗ್ರಹಿಕೆಯುಳ್ಳವನಾಗಿ, ಆ ಮೆರವಣಿಗೆಯಲ್ಲಿ ಭಾಗಿಯಾಗಿ ಮುಂದುವರಿದು ಆನಂದಿಸಲು ಸ್ವಾಮಿ ನಿನಗೆ ಕರೆ ಕೊಡುತ್ತಿದ್ದಾನೆ.

**ನೆನಪಿಗೆ : 'ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು' (ಯೋಹಾ 12:32).**

| ಮಾರ್ಚ್ 26 | ದೇವಾಲಯದ ಮೇಲಿನ ಅಭಿಮಾನ | ಬೆಳಗ್ಗೆ : ಯೆಹೋ 22,23,24<br>ಸಂಜೆ : ಲೂಕ 3 |
|---|---|---|

**'ನಿನ್ನ ಆಲಯಾಭಿಮಾನವು ನನ್ನನ್ನು ಬೆಂಕಿಯಂತೆ ದಹಿಸಿದೆ' (ಕೀರ್ತ 69:9).**

ದೇವಾಲಯವು ಆರಾಧನೆಗಾಗಿ ಮೀಸಲಾದ ಪವಿತ್ರ ಮಂದಿರವಾಗಿದೆ. ಅರಸನಾದ ಸೊಲೊಮೋನನು ಯೆರೂಸಲೇಮಿನಲ್ಲಿ ಬೃಹತ್ ದೇವಾಲಯವನ್ನು ನಿರ್ಮಿಸುವವರೆಗೂ, ಕರ್ತನಾದ ಯೆಹೋವನು ಮೋಶೆಗೆ ಸೀನಾಯಿ ಬೆಟ್ಟದಲ್ಲಿ ಮಾದರಿ ತೋರಿಸಿ, ರೂಪಿಸಲ್ಪಟ್ಟ ದೇವದರ್ಶನ ಗುಡಾರವೇ ಇಸ್ರಾಯೇಲ್ಯರ ಆರಾಧನೆಯ ಸ್ಥಳವಾಗಿತ್ತು ಎಂದು ಹಳೇ ಒಡಂಬಡಿಕೆಯಲ್ಲಿ ನೋಡುತ್ತೇವೆ. ಹೊಸ ಒಡಂಬಡಿಕೆಯಲ್ಲಿ ಸಭಾಮಂದಿರಗಳೂ ಆರಾಧನಾ ಸ್ಥಳಗಳೂ ಸ್ಥಾಪನೆಯಾಯಿತು. ಯೇಸುಸ್ವಾಮಿಯ ದಿನಗಳಲ್ಲಿ ದೇವಾಲಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇತ್ತು; ಅದು ಮಾತ್ರವಲ್ಲ ಯೇಸುಸ್ವಾಮಿಯು ದೇವಾಲಯವನ್ನು "ತಂದೆಯ ಮನೆ" ಎಂದು ಕರೆದನು. ತನ್ನ ತಂದೆ ತಾಯಿಗೆ "ನಾನು ನನ್ನ ತಂದೆಯ ಮನೆಯಲ್ಲಿರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?" ಎಂದು ಹೇಳುವದನ್ನು (ಲೂಕ 2:49) ರಲ್ಲಿ ನೋಡುತ್ತೇವೆ.

ಆತನು ದೇವಾಲಯವನ್ನು ಪ್ರವೇಶಿಸಿ ಅಲ್ಲಿ ಪಾರಿವಾಳ ಮಾರುವವರನ್ನೂ ಕೊಳ್ಳುವವರನ್ನೂ ಕಂಡು, ಹಗ್ಗದಿಂದ ಕೊರಡೆ ಮಾಡಿ ಎಲ್ಲರನ್ನೂ ಹೊರಗೆ ಅಟ್ಟಿದನು. "ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ" ಎಂದು ಹೇಳಿ ಶುದ್ಧೀಕರಿಸಲು ಮುಂದಾದನು. ಇಂದೂ ಸಹ ನಮ್ಮ ದೇವಾಲಯಗಳು ಶುದ್ಧೀಕರಿಸಲ್ಪಡುವದು ಅತ್ಯಾವಶ್ಯವಾಗಿದೆ. ಹೊಸ ಒಡಂಬಡಿಕೆಯಲ್ಲಿ ಅಪೊ.ಪೌಲನು (1ಕೊರಿ 3:16) ರಲ್ಲಿ "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? ದೇವರ ಆಲಯವು ಪವಿತ್ರವಾದದ್ದು ಆ ಆಲಯವು ನೀವೇ" ಎನ್ನುತ್ತಾನೆ.

ಆದ್ದರಿಂದ ನಮ್ಮನ್ನೇ ಆತನಿಗೆ ಒಪ್ಪಿಸಿಕೊಟ್ಟು ಆತ್ಮನು ನಮ್ಮೊಳಗೆ ವಾಸಮಾಡುವಂತೆ ಬೇಡಿಕೊಳ್ಳೋಣ. ದೇವಾಲಯವಾಗಿರುವ ನಾವು ನಿತ್ಯವೂ ಆತನ ದರ್ಶನವನ್ನು ಬಯಸುವವರಾಗಿರಬೇಕು (ಕೀರ್ತ 63:1). ಆತನ ಕೃಪೆಯನ್ನು ಸೃಷ್ಟಿಯ ಮಹತ್ವವನ್ನು ಸ್ಮರಿಸುವವರಾಗಿರಬೇಕು. (ಕೀರ್ತನೆ 103). ಆತನ ವಾಗ್ದಾನಗಳನ್ನು ಪಡೆದುಕೊಳ್ಳಬೇಕು (ಕೀರ್ತ 105:8–12). ಕ್ಷಮಿಸುವ ಶ್ರೇಷ್ಠತೆಯನ್ನೂ ತಿಳಿದು ಕ್ಷಮಾಭಾವವುಳ್ಳವರಾಗಿರಬೇಕು (ಮತ್ತಾ 18:22). ಆತನ ವಾಕ್ಯವನ್ನು ಓದುವವರಾಗಿಯೂ ಧ್ಯಾನಿಸುವವರಾಗಿಯೂ ಇರಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರಾರ್ಥಿಸುವವರಾಗಿರಬೇಕು. ಹನ್ನಳು ದೇವಾಲಯದಲ್ಲಿ ಪ್ರಾರ್ಥಿಸಿ ಸಮುವೇಲನನ್ನು ಪಡೆದುಕೊಂಡಳು. ಪ್ರಾರ್ಥನೆಯಲ್ಲಿ ಆತನ ಚಿತ್ತವನ್ನು ಅರಿತು ಆತ್ಮೀಯ ಜೀವಿತಕ್ಕೆ ಮುಖ್ಯತ್ವ ಕೊಡುವವರಾಗಿರಬೇಕು. ಆದ್ದರಿಂದ ನಮ್ಮನೇ ಆತನಿಗೆ ಒಪ್ಪಿಸಿಕೊಟ್ಟು ಪವಿತ್ರ ಆತ್ಮನು ನಮ್ಮೊಳಗೆ ವಾಸವಾಗಿರುವಂತೆ ಬೇಡಿಕೊಳೋಣ.

**ನೆನಪಿಗೆ : 'ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟುಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ" (ಅಪೊ 20:32).**

| ಮಾರ್ಚ್ 27 | **ಕ್ಷಮಿಸುವ ಪ್ರೀತಿ** | ಬೆಳಗ್ಗೆ : ನ್ಯಾಯ 1,2,3<br>ಸಂಜೆ : ಲೂಕ 4:1-30 |
|---|---|---|

**'ನೀವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ' (ರೋಮಾ 5:8).**

ಕ್ಷಮಿಸುವ ಪ್ರೀತಿಯನ್ನು ಕರ್ತನಾದ ಯೇಸುಕ್ರಿಸ್ತನಲ್ಲಿ ಮಾತ್ರವೇ ಕಾಣುತ್ತೇವೆ. ಅಪೊ.ಪೌಲನು ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿ ಎಂದು ವರ್ಣಿಸಿದ್ದಾನೆ (ಎಫೆ 3:19). ದೇವ ಪ್ರೀತಿಯಲ್ಲಿ ಬಹು ಶ್ರೇಷ್ಠವಾದದ್ದು, ನಮ್ಮ ಪಾಪಗಳನ್ನು ಕ್ಷಮಿಸುವ ಮರೆಯುವ ಪ್ರೀತಿ. ನಾವು ಎಂಥಾ ಅಘೋರ ಪಾಪಿಗಳಾಗಿದ್ದಾಗಲೂ, ದ್ರೋಹಿಗಳಾಗಿದ್ದಾಗಲೂ, ಕ್ರಿಸ್ತೇಸುವಿಗೆ ವೈರಿಗಳಾಗಿದ್ದರೂ. ಕರ್ತನು ಎಲ್ಲವನ್ನೂ ಕ್ಷಮಿಸಿ, ಆತನ ಮಕ್ಕಳಾಗಿ ಸ್ವೀಕಾರ ಮಾಡುವ ಆತನ ಪ್ರೀತಿ ಅಮೋಘವಾದದಲ್ಲವೇ? ಅದನ್ನು ಕಲ್ವಾರಿ ಶಿಲುಬೆಯಲ್ಲಿ ಪ್ರತ್ಯಕ್ಷವಾಗಿ ಕಾಣುತ್ತೇವೆ. ಶಿಲುಬೆಯಲ್ಲಿ ತನ್ನ ರಕ್ತವನ್ನೆಲ್ಲಾ ಸುರಿಸಿದವನಾಗಿ, ನಿಂದೆ ಅವಮಾನವನ್ನು ಸಹಿಸಿಕೊಂಡು "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" ಎಂದು ತಂದೆ ದೇವರ ಬಳಿ ಬೇಡಿಕೊಂಡನಲ್ಲವೇ? ಆತನು ಶಿಲುಬೆಯಲ್ಲಿ ತೂಗಿದ ಆರು ಘಂಟೆಗಳ ಕಾಲವೂ ಈ ಪ್ರಾರ್ಥನೆಯನ್ನೇ ಮತ್ತೆ ಮತ್ತೆ ನುಡಿಯುತ್ತಲೇ ಇದ್ದನು. ಆತನು ಅನೇಕ ಕುಷ್ಠರೋಗಿಗಳನ್ನು ಸ್ವಸ್ಥಗೊಳಿಸಿದನು, ಕುರುಡರಿಗೆ ಕಣ್ಣುಕೊಟ್ಟನು. ಸತ್ತವರನ್ನು ಬದುಕಿಸಿದನು. ಇನ್ನೂ ಅನೇಕ ಅದ್ಭುತಗಳನ್ನು ಅನುಭವಿಸಿದವರು ಸಾವಿರಾರು ಮಂದಿ, ಆದರೆ ಕ್ರಿಸ್ತನಿಗಾಗಿ ಅನುತಾಪ ಪಡತಕ್ಕವರು, ಅಂದು ಅಲ್ಲಿ ಯಾರೂ ಇಲ್ಲ. ನನ್ನಿಂದ ಅದ್ಭುತ ಹೊಂದಿ, ಕೆಡುಕನ್ನೇ ಮಾಡುತ್ತಿರುವವರನ್ನೂ ಸಹ ಆತನು ಕೋಪಿಸಲಿಲ್ಲ ನಿಂದಿಸಲಿಲ್ಲ. ಬದಲಾಗಿ "ಅರಿಯರು ಕ್ಷಮಿಸು" ಎಂದು ಬೇಡಿದನು.

ಕ್ರಿಸ್ತೇಸುವು ಕ್ಷಮಿಸಿದ್ದು ಮಾತ್ರವಲ್ಲ ಅದನ್ನು ಮರೆತು ಬಿಡುವನು. ಸಮುದ್ರ ದಾಳಕ್ಕೆ ಅದನ್ನು ಬಿಸಾಡಿಬಿಡುವನು. ನಿಮ್ಮ ಪ್ರತಿಯೊಂದು ಪಾಪಗಳನ್ನು ಆತನು ಹುಡುಕುವಾತನಲ್ಲ. "ತಂದೆಯೇ ಕ್ಷಮಿಸು" ಎಂಬ ಬೇಡಿಕೆಯೊಂದಿಗೆ, ಯೇಸುಕ್ರಿಸ್ತನ ರಕ್ತ, ಪ್ರತಿಯೊಬ್ಬರನ್ನೂ ಪ್ರತಿಯೊಂದು ಪಾಪವನ್ನೂ ತೊಳೆದು, ಕ್ಷಮಿಸುವಂಥದ್ದಾಗಿದೆ (1ಯೋಹಾ 1:7). ಮೂರುಸಾರಿ ತನ್ನನ್ನು ಬೊಂಕಿದ ಪೇತ್ರನನ್ನು, ಪುನರುತ್ಥಾನ ಹೊಂದಿದ ಕ್ರಿಸ್ತನು ನೋಡಿದಾಗ, ಅದನ್ನು ನೆನಸಲಿಲ್ಲ. ತನ್ನನ್ನು ಬಿಟ್ಟು ಓಡಿ ಹೋದ ಶಿಷ್ಯರನ್ನು ಕಂಡಾಗ "ಮಕ್ಕಳಿರಾ ಊಟಕ್ಕೆ ನಿಮಗೆ ಏನೂ ಇಲ್ಲವೇ?" ಎಂದು ಕಳಕಳಿಯಿಂದ ಕೇಳಿದ ಯೇಸುಸ್ವಾಮಿಯನ್ನು ನೆನಸಿರಿ.

ನಿಮ್ಮ ಕುಟುಂಬದಲ್ಲಿ ದೈವಿಕ ಪ್ರೀತಿ ಕ್ರಿಯೆ ಮಾಡುವದಾದರೆ, ಅಲ್ಲಿ ಒಬ್ಬರಲೊಬ್ಬರು ತಪ್ಪು ಕಂಡುಹಿಡಿದು, ಅವರ ಮನನೋಯುವಂತ ಮಾತುಗಳು ಹೊರಬರುವದಿಲ್ಲ. ದೈವಿಕ ಪ್ರೀತಿಯಿಂದ ಎಲ್ಲಾ ತಪ್ಪುಗಳನ್ನೂ ಕ್ಷಮಿಸಿ, ಮರೆಯುವವರಾಗಿರುವಿರಿ ಅಲ್ಲವೇ? ಕ್ಷಮಿಸಿದ್ದೇನೆಂದು ಹೇಳಿದರೂ ಅದು ಅವರ ಹೃದಯದಾಳದಲ್ಲಿದ್ದು ಒಂದು ದಿನ ಸಿಡಿಯುವದನ್ನು ಕಾಣಬಹುದಲ್ಲವೇ? ಹಾಗಾದರೆ "ನಮಗೆ ತಪ್ಪು ಮಾಡಿದವರನ್ನು ಕ್ಷಮಿಸುತ್ತೇವಾದ್ದರಿಂದ ನಮ್ಮ ಪಾಪಗಳನ್ನು ಕ್ಷಮಿಸು ಎಂದು ಕೇಳುವದು ಹೇಗೆ? ಯೋಚಿಸಿರಿ.

**ನೆನಪಪಿಗೆ : 'ಒಬ್ಬರನ್ನೊಬ್ಬರು ಪ್ರೀತಿಸುವ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು' (ರೋಮಾ 13:8).**

# ರಕ್ತದ ಪುಣ್ಯ!

ಬೆಳಗ್ಗೆ : ನ್ಯಾಯ 4,5,6
ಸಂಜೆ : ಲೂಕ 4:31-44

**‘ಯೇಸುಕ್ರಿಸ್ತನು ಒಂದೇ ಸಾರಿ ದೇಹಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು’ (ಇಬ್ರಿ 10:10).**

ಹಳೆಯ ಒಡಂಬಡಿಕೆಯಲ್ಲಿ ದೇವದರ್ಶನ ಗುಡಾರದಲ್ಲಿ ಕರ್ತನು ನೇಮಿಸಿದ ರೀತಿಯಲ್ಲಿ ಯಜ್ಞಗಳು, ಹೋಮಗಳು, ಸಮರ್ಪಣೆಗಳು ನಡೆಯುತ್ತಿದ್ದವು. ಆ ಎಲ್ಲಾ ಯಜ್ಞ ಹೋಮ ಸಮರ್ಪಣೆಗಳಲ್ಲಿ ರಕ್ತವಿಲ್ಲದೆ ಯಾವದೂ ಸಮರ್ಪಿಸಲ್ಪಡುತ್ತಿರಲಿಲ್ಲ, "ರಕ್ತಧಾರೆ ಇಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ" (ಇಬ್ರಿ 9:22). "ಅಂಥ ರಕ್ತವನ್ನು ನೀವು ಯಜ್ಞವೇದಿಗೆ ಎರಚಿ ನಿಮಗೋಸ್ಕರ ದೋಷಪರಿಹಾರ ಮಾಡಿಕೊಳ್ಳಬೇಕು" (ಯಾಜಕ 17:11). ಇದು ಕರ್ತನಾದ ಯೆಹೋವನು ನೇಮಿಸಿದ ದೋಷಪರಿಹಾರ ಕ್ರಮವಾಗಿತ್ತು. ಇದಕ್ಕಾಗಿ ಪ್ರತಿಸಾರಿಯೂ ಹೋತಗಳ ಹೋರಿಕರುಗಳ ರಕ್ತವನ್ನು ಪ್ರೋಕ್ಷಿಸಿ ಪಾಪಪರಿಹಾರ ಮಾಡಬೇಕಾಗಿತ್ತು. ಇದು ಕರ್ತನಿಂದ ನೇಮಕವಾಗಿತ್ತು. ದೇವದರ್ಶನ ಗುಡಾರದ ಮುಖ್ಯ ಭಾಗವಾದ ಮಹಾಪರಿಶುದ್ಧ ಸ್ಥಳಕ್ಕೆ ಪ್ರಧಾನ ಯಾಜಕನು ಈ ಮಹಾಪರಿಶುದ್ಧ ಸ್ಥಳವನ್ನು ವರ್ಷಕ್ಕೆ ಒಂದು ಸಾರಿ ಕುರಿಮರಿಯ ರಕ್ತವನ್ನು ತೆಗೆದುಕೊಂಡು ಪ್ರವೇಶಿಸುವದು ಅನಿವಾರ್ಯ.

ದೇವರು ನೇಮಿಸಿದ ಪಸ್ಕದ ಕುರಿಯ ಸಮರ್ಪಣೆಯಾಗುವವರೆಗೆ ಈ ಆಚಾರವನ್ನು ಅನುಸರಿಸಲಾಗುತ್ತಿತ್ತು. ಯೇಸುಕ್ರಿಸ್ತನು ಭೂಲೋಕದೊಳಗೆ ಬರುವಾಗ "ದೇವರೇ ನಿನಗೆ ಯಜ್ಞನೈವೇದ್ಯಗಳು ಇಷ್ಟವಾಗಿರಲಿಲ್ಲ. ನನಗೆ ದೇಹವನ್ನು ಸಿದ್ಧಮಾಡಿಕೊಟ್ಟಿ....ಇಗೋ ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ" ಎಂದು ಹೇಳಿದನು (ಇಬ್ರಿ 10:5–7). ಇದನ್ನು ಕುರಿತು ಸ್ನಾನಿಕನಾದ ಯೋಹಾನನು "ಅಗೋ, ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವನು" (ಯೋಹಾ 1:29) ಎಂದು ಹೇಳಿದನು.

ಪಸ್ಕದ ಕುರಿಮರಿಯಾದ ಕ್ರಿಸ್ತನು ಶಿಲುಬೆಯಲ್ಲಿ ಜಜ್ಜಲ್ಪಟ್ಟವನಾಗಿ ಸುರಿಸಿದ ರಕ್ತದ ಪುಣ್ಯದಿಂದ ನೀವು ಪಾಪಕ್ಷಮೆಯನ್ನು ಹೊಂದಿದವರಾಗಿ ದೇವರ ಸನ್ನಿಧಾನಕ್ಕೆ ಹೋಗುವ ಭಾಗ್ಯ ಉಂಟಾಯಿತು. ಇಂದಿಗೂ ಆತನು ಕೊಯ್ಯಲ್ಪಟ್ಟ ಕುರಿಯಾಗಿ ರಕ್ತವನ್ನು ಸುರಿಸುತ್ತಲೇ ಇರುವನು. 2000 ವರ್ಷಗಳ ಹಿಂದೆ ಕಲ್ವಾರಿ ಶಿಲುಬೆಯಲ್ಲಿ ಎಂಥ ಶ್ರಮೆಯನ್ನು ಅನುಭವಿಸಿದನೋ, ಅದೇ ಶ್ರಮೆ ಇಂದೂ ಸಹ ಅನುಭವಿಸುತ್ತಲೇ ಇರುವನು. "ಎಲೈ ಕಷ್ಟ ಪಡುವವರೇ ಹೊರೆ (ಪಾಪ) ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ" ಎಂದು ಕರೆಯುತ್ತಲೇ ಇರುವನು. ಆದ್ದರಿಂದ ಇಂದು, ಈ ದಿನದಲ್ಲೂ ಸಹ ಯಾರೇ ಆಗಲಿ ಆತನ ಬಳಿಗೆ ಬಂದು "ತಾನು ಪಾಪಿ" ಎಂದು ಒಪ್ಪಿಕೊಂಡು ಅರಿಕೆ ಮಾಡಿದರೆ "ಯೇಸುಕ್ರಿಸ್ತನ ರಕ್ತದಿಂದ ಸಕಲ ಪಾಪವೂ ಕ್ಷಮಿಸಲ್ಪಟ್ಟು ಶುದ್ಧೀಕರಿಸಲ್ಪಡುವರು, ಅವರು ದೇವರ ಮಕ್ಕಳಾಗುವ ಭಾಗ್ಯ ಹೊಂದುವರು. ಇದೇ ಯೇಸುಕ್ರಿಸ್ತನ ರಕ್ತದ ಮಹಿಮೆಯಾಗಿದೆ. ಇದೇ ರಕ್ತದ ಪುಣ್ಯವಾಗಿದೆ. ತಪ್ಪಿಲ್ಲದವನು ಸುರಿಸಿದ ರಕ್ತದ ಮಹತ್ವವಾಗಿದೆ. ಹೌದು ಯೇಸು ಕ್ರಿಸ್ತನು ಪ್ರತ್ಯಕ್ಷವಾಗುವವರೆಗೆ ಆತನ ರಕ್ತದ ಪುಣ್ಯದಿಂದ ದೇವರನ್ನು ಸಮೀಪಿಸುವ ಭಾಗ್ಯವನ್ನು ಯೇಸುಸ್ವಾಮಿ ನಮಗೆ ಅನುಗ್ರಹಿಸಿದ್ದಾನೆ.

**ನೆನಪಪಿಗೆ : ‘ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಯೇಸುಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು....ಶುದ್ಧೀಕರಿಸುವದಲ್ಲವೇ’ (ಇಬ್ರಿ 9:14).**

# ಕರ್ತನ ಪವಿತ್ರವಾದ ರಾತ್ರಿ ಭೋಜನ

**'ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು' (ಇಬ್ರಿ 10:20).**

ಐಗುಪ್ತದ ದಾಸತ್ವದಿಂದ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಲು ಫರೋಹನು ಒಪ್ಪಲಿಲ್ಲ, ಆದ್ದರಿಂದ ಕರ್ತನು ಆ ದೇಶದ ಮೇಲೆ ಉಪದ್ರವಗಳನ್ನು ಬರಮಾಡಿದನು. ಕೊನೆಯ ಉಪದ್ರವವಾದ ಚೊಚ್ಚಲು ಮಕ್ಕಳ ಸಂಹಾರದ ನಂತರ ಫರೋಹನು ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿದನು. ಆ ದಿನದಲ್ಲಿ ಕರ್ತನ ಘನಕ್ಕಾಗಿ ಕರ್ತನ ಅಪ್ಪಣೆಯ ಮೇರೆಗೆ ಪಸ್ಕ ಹಬ್ಬವನ್ನು ಆಚರಿಲಾಯಿತು (ವಿಮೋ 12:21–23). ಈ ಹಬ್ಬದಲ್ಲಿ ಪೂರ್ಣಾಂಗವಾದ ಕುರಿಯನ್ನು ಪ್ರತ್ಯೇಕಿಸಿ ಅದನ್ನು ಕೊಯ್ದು ಆ ರಕ್ತವನ್ನು ತಮ್ಮ ಮನೆಯ ಬಾಗಿಲಿನ ಕಂಬಗಳಿಗೆ ಹಚ್ಚಬೇಕಾಗಿತ್ತು. ಹುಳಿ ಇಲ್ಲದ ರೊಟ್ಟಿ ಕಹಿಪಲ್ಯದೊಂದಿಗೆ, ಕೊಯ್ದು ಕುರಿಯಮಾಂಸವನ್ನು ಸುಟ್ಟು ಊಟಮಾಡಬೇಕು. ಈ ಪಸ್ಕದ ಆಚರಣೆಯನ್ನು ತಲತಲಾಂತರಕ್ಕೂ ಅನುಸರಿಸಬೇಕಾಗಿತ್ತು.

ಈ ಪಸ್ಕ ಆಚರಣೆಯನ್ನು ಯೇಸುಸ್ವಾಮಿ ತನ್ನ ಶಿಷ್ಯರೊಂದಿಗೆ ಆಚರಿಸಿದನು (ಮತ್ತಾ 26:17–30). ಯೇಸುಸ್ವಾಮಿ ತಾನೇ ಪಸ್ಕದ ಪಶುವಾಗಿ ಕೊಯ್ಯಲ್ಪಡಲು ಶಿಲುಬೆಗೆ ಒಪ್ಪಿಸಿಕೊಟ್ಟನು (1ಕೊರಿ 5:7). ಆತನು ಶಿಲುಬೆಯಲ್ಲಿ ತನ್ನ ರಕ್ತವನ್ನು ಪಾಪನಿವಾರಣಾರ್ಥವಾಗಿ ಸುರಿಸಿ ಪಾಪದ ದಾಸತ್ವದಲ್ಲಿ ನಮ್ಮನ್ನು ವಿಮೋಚಿಸಿದ್ದಾನೆ. ಕರ್ತನು ತನ್ನ ಶಿಷ್ಯರೊಂದಿಗೆ ಭೋಜನಕ್ಕೆ ಕುಳಿತಾಗ, ತಾನು ಎದ್ದು, ನೀರನ್ನು ತೆಗೆದುಕೊಂಡು ಶಿಷ್ಯರ ಕಾಲುಗಳನ್ನು ತೊಳೆದನು. ಆಗ ಯೇಸುಸ್ವಾಮಿ ತನ್ನ ಶಿಷ್ಯರಿಗೆ ಗುರುವೂ ಕರ್ತನೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿದ್ದೇನಲ್ಲಾ ಎಂದು ಹೇಳಿ ಆ ಮೂಲಕ ದೀನತೆಯನ್ನೂ, ನಿಬಂಧನೆ ಇಲ್ಲದ ದೈವಿಕ ಪ್ರೀತಿಯನ್ನೂ, ಅಧಿಕಾರ ಧೋರಣೆ ಇಲ್ಲದೆ ಸೇವೆಯಲ್ಲಿ ತೊಡಗಬೇಕೆಂಬದನ್ನೂ ಬೋಧಿಸಿದನು. ಇದನ್ನು ಆ ದಿನ ರಾತ್ರಿ ಮಾಡಿ ಮಾದರಿ ತೋರಿಸಿದನು. ಈ ದಿನಗಳಲ್ಲಿ ನಾವು ಆ ಮಾದರಿಯನ್ನು ಆನುಸರಿಸುವವರಾಗಿರುವೆವಾ?

ಬಳಿಕ ರೊಟ್ಟಿಯನ್ನು ಮುರಿದು ಕೊಟ್ಟು ಇದು ನನ್ನ ದೇಹ ಅಂದನು. ದ್ರಾಕ್ಷಾರಸವನ್ನು ನೀಡಿ, ಇದು ನನ್ನ ರಕ್ತ ಅಂದನು. ಇದು ನನ್ನ ರಕ್ತ ಒಡಂಬಡಿಕೆಯ ರಕ್ತ. ಇದು ಪಾಪ ಕ್ಷಮೆಗಾಗಿ ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ ಅಂದನು (ಮತ್ತಾ 26:27,28). "ಆಗ ಮೋಶೆ ಆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮಿಕಿಸಿ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ" ಅಂದನು (ವಿಮೋ 24:4–8). ಅದೇ ನಮಗೆ ಕೊಡಲ್ಪಟ್ಟಂಥ ಯೇಸುಕ್ರಿಸ್ತನ ರಕ್ತ. ಇಂದು ನಾವು ಅನುಸರಿಸುವ "ಪವಿತ್ರ ರಾತ್ರಿ ಭೋಜನ ಸಂಸ್ಕಾರ ಅತಿ ಪರಿಶುದ್ಧವಾದದ್ದು. ಇದನ್ನು ಹಗುರವಾಗಿ ಎಣಿಸಬಾರದು, ಅಪನಂಬಿಕೆ ಅಶುದ್ಧತೆ, ನಿರ್ಲಕ್ಷತೆಯಿಂದ ಪಾಲು ತೆಗೆದುಕೊಳ್ಳಲಾಗದು. ಈ ಸಂಸ್ಕಾರದ ಮೂಲಕ ನಾವು ಕರ್ತನನ್ನು ನೆನಸಿ ಕೊಳ್ಳುವವರಾಗಿದ್ದೇವೆ (ಲೂಕ 22:19).

**ನೆನಪಪಿಗೆ : 'ಯೇಸುಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು' (ಇಬ್ರಿ 10:10).**

## ಶುಭ ಶುಕ್ರವಾರ!

ಬೆಳಗ್ಗೆ : ನ್ಯಾಯ 9,10
ಸಂಜೆ : ಲೂಕ 5:17-39

**'ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು....ದಂಡನೆಯನ್ನು ಅವನು ಅನುಭವಿಸಿದನು ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು' (ಯೆಶಾ 53:5).**

ದೇವರು ತನ್ನ ಏಕಕುಮಾರನನ್ನು ಈ ಭೂಮಿಗೆ ಕಳುಹಿಸಿ, ಆತನ ಶ್ರಮಾ ಮರಣ ಪುನರುತ್ಥಾನಗಳ ಮೂಲಕ ಮಾನವಕುಲವನ್ನು ಪಾಪ, ಶಾಪ, ವ್ಯಾಧಿಗಳ ಬಂಧನಗಳಿಂದ ಬಿಡುಗಡೆಗೊಳಿಸುವ ತನ್ನ ರಕ್ಷಣಾ ಕಾರ್ಯವನ್ನು ಕ್ರಿಸ್ತನು ಜನಿಸುವ ನಾನ್ನೂರು ವರುಷಗಳ ಹಿಂದೆಯೇ ಪ್ರವಾದಿಯಾದ ಯೆಶಾಯನ ಮೂಲಕ ಈ ಲೋಕಕ್ಕೆ ಪ್ರಕಟಿಸಿದನು.

ಲೌಕೀಕ ರೀತಿಯಲ್ಲಿ ಮರಣವೆಂಬುದು ದುಃಖಕರವಾದ ಸಂಗತಿಯೇ, ಆದರೆ ಕ್ರಿಸ್ತೇಸುವಿನ ಮರಣ ಹೇಗೆ ಶುಭಕರವಾದದ್ದು ಎಂಬುದು ಕ್ರೈಸ್ತೇತ ಬಾಂಧವರಲ್ಲಿ ಅರ್ಥವಾಗದ ಸಂಗತಿಯಾಗಿ ಉಳಿದಿದೆ. ಅನೇಕ ಪಾರಂಪರ್ಯ ಕ್ರೈಸ್ತರಿಗೂ ಈ ದಿನದ ಮಹತ್ವ ಮರ್ಮವಾಗಿಯೇ ಉಳಿದಿರುವದು. ಆದಿ ತಂದೆ ತಾಯಿಗಳು ದೇವರಿಗೆ ಅವಿಧೇಯರಾಗಿ ಪಾಪಮಾಡಿದಾಗ, ಅವರು ದೇವರೊಂದಿಗಿದ್ದ ಸಂಬಂಧವನ್ನು ಕಳೆದುಕೊಂಡರು ಮುಂದೆ ಮೋಶೆಯ ಮುಖಾಂತರ ಕೊಡಲ್ಪಟ್ಟ ಧರ್ಮಶಾಸ್ತ್ರವನ್ನು ಅನುಸರಿಸುವವರಾಗಿ, ತಮ್ಮ ಪಾಪಗಳ ಪರಿಹಾರಕ್ಕಾಗಿ ಪ್ರಾಣಿ ಪಕ್ಷಿಗಳನ್ನು ಪ್ರತಿ ವರುಷವೂ ಯಜ್ಞವನ್ನಾಗಿ ಅರ್ಪಿಸುತ್ತಿದ್ದರೂ ಯಾಜಕನು ತನಗಾಗಿ ಜನರಿಗಾಗಿ ಯಜ್ಞವನ್ನು ಸಮರ್ಪಿಸಬೇಕಾಗುತ್ತಿತ್ತು. ಜನರು ದೇವರ ಪ್ರೀತಿಯನ್ನು ಅರಿತುಕೊಳ್ಳದೆ ಪಾಪಮಾಡುತ್ತಲೇ ಬಂದರು.

ಇಂಥ ಪರಿಸ್ಥಿತಿಯಲ್ಲಿ ದೇವರು ತನ್ನ ಒಬ್ಬನೇ ಮಗನನ್ನು ಈ ಭೂಮಿಗೆ ಮಾನವ ಕುಲದ ಪಾಪಕ್ಕೆ ಪ್ರಾಯಶ್ಚಿತ್ತಕ್ಕಾಗಿ ಕಳುಹಿಸಲು ನಿರ್ಧರಿಸಿ ಯೇಸು ಎಂಬ ಹೆಸರಿನಲ್ಲಿ ಈ ಭೂಮಿಗೆ ಕಳುಹಿಸಿ, ನಮ್ಮೆಲ್ಲರ ಅಪರಾಧ ದ್ರೋಹಗಳನ್ನು ಆತನ ಮೇಲೆ ಹೊರಿಸಿ ಶಿಲುಬೆಯಲ್ಲಿ ಯಜ್ಞದ ಪಶುವಾಗಿ ವಧಿಸಲ್ಪಟ್ಟನು. ಹೌದು ಕರ್ತನು ಮಾನವಕುಲಕ್ಕಾಗಿ ತನ್ನ ಪ್ರಾಣವನ್ನು ನೀಡಿದ್ದು ಶುಭಕಾರ್ಯವೇ ಆಗಿದೆ. ಕ್ರಿಸ್ತನ ಮರಣದಲ್ಲಿ ಅಡಗಿರುವ ಈ ಮರ್ಮ ದೇವರು ಮಾನವಕುಲದ ಮೇಲೆ ತೋರಿಸಿದ ಪ್ರೀತಿಯನ್ನು ಲೋಕಕ್ಕೆ ಪ್ರಕಟಿಸುವದು. ಮಾತ್ರವಲ್ಲ ಯಾರ್‍ಯಾರು ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಡುವರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರವನ್ನು ನೀಡಿದನು (ಯೋಹಾ 1:12).

ದೇವಜನರೇ, "ನಿಮ್ಮ ಪಾಪ, ಅಕ್ರಮ, ದ್ರೋಹಗಳನ್ನು ತನ್ನ ಮೇಲೆ ಹೊತ್ತುಕೊಂಡು ತನ್ನ ರಕ್ತದ ಮೂಲಕ, ರಕ್ಷಣೆಯ ಮಾರ್ಗ ತೆರೆದುಕೊಟ್ಟ ಕ್ರಿಸ್ತಯೇಸುವನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಇಂದೇ ಅಂಗೀಕರಿಸಿಕೊಂಡು ನಿತ್ಯರಾಜ್ಯಕ್ಕೆ ಬಾಧ್ಯರಾಗಿರಿ.

**ನೆನಪಿಗೆ : 'ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು. ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು' (ಯೆಶಾ 53:6).**

| ಮಾರ್ಚ್ 31 | ಭಕ್ತರಾಗಿ ಸಾಯುವ ಧನ್ಯತೆ | ಬೆಳಗ್ಗೆ : ನ್ಯಾಯ 11,12<br>ಸಂಜೆ : ಲೂಕ 6:1–26 |
|---|---|---|

**'ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ? ನೀನು ಮಣ್ಣಿಗೆ ಸೇರುವಿ' (ಆದಿ 3:19).**

ಆದಿಯಲ್ಲಿ ದೇವರಾದ ಕರ್ತನು ನೆಲದಮಣ್ಣಿನಿಂದ ಮಾನವನನ್ನು ರೂಪಿಸಿದನು. ಈ ಪ್ರಪಂಚದಲ್ಲಿ ಹುಟ್ಟುವ ಪ್ರತಿಯೊಬ್ಬರಿಗೂ ಕರ್ತನು ಆಯುಷ್ಕಾಲವನ್ನು ನಿರ್ಣಯಿಸಿದ್ದಾನೆ. ಇದನ್ನೇ ಮೋಶೆ ತನ್ನ ಅನುಭವದಲ್ಲಿ ಕಂಡವನಾಗಿ "ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ, ಬಲ ಹೆಚ್ಚಿದರೆ ಎಂಭತ್ತು. ಕಷ್ಟ ಸಂಕಟಗಳೇ ಅದರ ಆಡಂಬರ" (ಕೀರ್ತ 90:10) ಎಂದು ವರ್ಣಿಸಿದ್ದಾನೆ. ಸತ್ಯವೇದವು ಅನೇಕರ ಜೀವಿತದಲ್ಲಿನ, ಕಷ್ಟಸಂಕಟಗಳ ಆಡಂಬರದ ಬಗ್ಗೆ ವರ್ಣಿಸಿರುವದನ್ನು ಕಾಣುತ್ತೇವೆ. ಕಷ್ಟ ಸಂಕಟಗಳಿಂದ ತುಂಬಿದ ಶಾಶ್ವತವಲ್ಲದ ಆಡಂಬರದ ಜೀವಿತವು ಮಾನವನ ಹುಟ್ಟಿನಿಂದ ಸಾಯುವವರೆಗಿನ ಪ್ರಯಾಣದ ಪ್ರಯಾಸವಾಗಿದೆ.

ಮರಣವೆಂದರೆ ಮನ ಅಳುಕುತ್ತದೆ ಭಯ ಅವರಿಸುತ್ತದೆ. ವಿಶ್ವಾಸಿಗಳಿಗೂ ಈ ಭಯತಪ್ಪಿದ್ದಲ್ಲ. ಮರಣದಿಂದ ಯಾರೂ ತಪ್ಪಿಸಿಕೊಳ್ಳಲಾರರು. ಆದರೆ ಕ್ರಿಸ್ತೇಸುವು ತನ್ನನ್ನೇ ಮರಣಕ್ಕೆ ಒಪ್ಪಿಸುವದರ ಮೂಲಕ ನಮ್ಮನ್ನು ಮರಣ ಭಯದಿಂದ ಬಿಡಿಸಿದ್ದಾನೆ (ಇಬ್ರಿ 2:14). ಕ್ರಿಸ್ತೇಸುವಿನ ಮರಣವು ನಮಗೆ ಧೈರ್ಯವನ್ನೂ, ನಿರೀಕ್ಷೆಯನ್ನೂ, ಪುನರುತ್ಥಾನದ ಭರವಸೆಯನ್ನು ನೀಡಿ, ಭಯ ಆತಂಕಗಳನ್ನು ದೂರಮಾಡಿದೆ. ಆದ್ದರಿಂದಲೇ ಅಪೊ.ಪೌಲನು "ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದಕೊಂಡಿ ಎಲ್ಲಿ?" ಎನ್ನುತ್ತಾನೆ. ಕೊಂಡಿ ಪಾಪವೇ, ಆ ಪಾಪವನ್ನು ಯೇಸುಸ್ವಾಮಿ ಶಿಲುಬೆಯಲ್ಲಿ ಪರಿಹರಿಸಿದ್ದಾನೆ ನಮಗೆ ಜಯಕೊಟ್ಟಿದ್ದಾನೆ (1ಕೊರಿ 15:55)

ಮರಣವು ನಮ್ಮ ಶಾರೀರಿಕ ಜೀವಿತವನ್ನು ಅಂತ್ಯಗೊಳಿಸಿ ನಿತ್ಯರಾಜ್ಯಕ್ಕೆ ಪ್ರವೇಶಿಸುವ ಬಾಗಲಾಗಿದೆಯೇ ಹೊರತು. ಅದು ವೈರಿಯಲ್ಲ, ಅದನ್ನು ಯೇಸುಸ್ವಾಮಿ ನಿದ್ರೆಗೆ ಹೋಲಿಸಿದ್ದಾನೆ; ಮಾತ್ರವಲ್ಲ ತನ್ನ ಮರಣಕ್ಕೆ ಮೊದಲೇ ಲಾಜರನನ್ನು ಎಬ್ಬಿಸಿ ಮರಣದ ಮೇಲೆ ತನಗೆ ಅಧಿಕಾರ ಉಂಟೆಂಬದನ್ನು ಸಾಬೀತು ಪಡಿಸಿದ್ದಾನೆ (ಯೋಹಾ 11:11). ಕ್ರಿಸ್ತೇಸುವಿನಲ್ಲಿ ನಮಗೆ ಶಾಶ್ವತವಾದ ನಿತ್ಯರಾಜ್ಯದ ಆಳ್ವಿಕೆ ಉಂಟು. ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬರಿಗೂ ಜನಾಂಗ, ಕುಲ, ಭಾಷೆ, ದೇಶವೆಂಬ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಆ ಧನ್ಯತೆವುಂಟು. ಕರ್ತನ ಭಕ್ತರಾಗಿ ಸಾಯುವವರು ಧನ್ಯರು (ಪ್ರಕ 14:13).

ಆದ್ದರಿಂದ ದೈವಿಕ ಮರಣವು ಈ ಲೋಕಜೀವಿತದ ಅಂತ್ಯವಷ್ಟೆ. ಆದರೆ ಎಂದೆಂದೂ ಕ್ರಿಸ್ತನೊಟ್ಟಿಗೆ ಬಾಳಲು ಪರಲೋಕದ ಬಾಧ್ಯತೆಯನ್ನು ಇಹಲೋಕದಲ್ಲೇ ನಾವು ಕಂಡುಕೊಳ್ಳದಿದ್ದರೆ ಆ ನಿತ್ಯರಾಜ್ಯ ನಮಗೆ ದೊರೆಯದು. ಆದ್ದರಿಂದ ನಾವು ನಮ್ಮ ಜೀವಿತದಲ್ಲೂ, ಸಾವಿಗೆ ಸಮೀಪವಾದಾಗಲೂ, ಕರ್ತನಿಗೆ ಮೆಚ್ಚಿಗೆಯಾಗಿ ನಡೆದುಕೊಳ್ಳಬೇಕು (1ಕೊರಿ 5:1–4). ಒಳ್ಳೆಯ ಸಾವು, ನಿತ್ಯರಾಜ್ಯವನ್ನು ಬಯಸುವವರು ಉತ್ತಮರಾಗಿ ಬದುಕಿ ಬಾಳಬೇಕು. 'ತಿನ್ನೋಣ, ಕುಡಿಯೋಣ ನಾಳೆ ಸಾಯುತ್ತೇವಲ್ಲ' ಅಂದುಕೊಳ್ಳದೆ. ನೀತಿಯನ್ನು ಅನುಸರಿಸುವವರಾಗಿ ದೇವರ ರಾಜ್ಯದ ಬಾಧ್ಯತೆಗಾಗಿ ಶ್ರಮ ಪಡುವವರಾಗಿ ಜೀವಿಸಬೇಕು.

**ನೆನಪಿಗೆ : 'ಈತನು (ಕ್ರಿಸ್ತನು) ಮರಣವನ್ನು ನಿವೃತ್ತಿಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು' (2ತಿಮೊ 1:10).**

ಈ ವರ್ಷದಲ್ಲಿ ವಾರ್ಷಿಕ ಪರೀಕ್ಷೆಯನ್ನು ಬರೆಯುತ್ತಿರುವ ಪ್ರತಿಯೊಬ್ಬ ಮಕ್ಕಳು ಕರ್ತನಿಂದ ಆಶೀರ್ವದಿಸಲ್ಪಟ್ಟು ಉತ್ತಮ ಆರೋಗ್ಯ ಹಾಗೂ ನೆನಪಿನ ಶಕ್ತಿಯೊಂದಿಗೆ. ಕೊಟ್ಟಿರುವ ಸಮಯದೊಳಗೆ ಎಲ್ಲಾ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಬರೆದು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಲೆಂದು ಆತನ ಬಳಿಯಲ್ಲಿ ವಿಜ್ಞಾಪಿಸಿಕೊಳ್ಳೋಣ.

ಪ್ರಾರ್ಥಿಸಿರಿ


## ನಮ್ಮಲ್ಲಿ ಸುಮರು 260 ಆತ್ಮೀಕ ಪುಸ್ತಕಗಳು ಲಭ್ಯವಿದೆ

ಕರ್ತನ ಮರಣದ ಮತ್ತು ಪುನರುತ್ಥಾನದ ಕುರಿತು ವಿಶೇಷ ಪುಸ್ತಕಗಳು ಇವೆ.



ಒಂದಕ್ಕೆ ಕಾಣಿಕೆ ರೂ 6/-



ರೂ 10/-



ರೂ 15/-

ಇವುಗಳ ಟಪಾಲು ವೆಚ್ಚ ರೂ. 50/-
Postal Charges Extra - Rs. 50/-

ಇವುಗಳನ್ನು ನಿಮ್ಮ ಆಪ್ತರಿಗೆ ಉಡುಗೊರೆಯಾಗಿ ನೀಡಿ ಅವರನ್ನು ಸಹಾ ಆತ್ಮೀಕವಾಗಿ ಬಲಪಡಿಸಿರಿ.



ರೂ 30/-

ಅನುದಿನದ ಆಹಾರ ಸೇವೆಯ ಕುರಿತು ಹೆಚ್ಚಿನ ಮಾಹಿತಿಗೆ
**www. anudhinadaahara.weebly.com**


ಅನುದಿನದ ಆಹಾರ ಪುಸ್ತಕ ತಲುಪಿದಾಗ, ಕವರ್‌ನಲ್ಲಿ ಲಗತ್ತಿಸಿರುವ ನಿಮ್ಮ ವಿಳಾಸದ ಮೇಲ್ಭಾಗದಲ್ಲಿರುವ ಸಂಖ್ಯೆಯೇ ನಿಮ್ಮ ID No. ಈ ID No. ಸಂಖ್ಯೆಯನ್ನು ಗುರುತು ಮಾಡಿಟ್ಟುಕೊಳ್ಳಿ ನೀವು MO ಕಳುಹಿಸುವಾಗ ತಪ್ಪದೆ ನಿಮ್ಮ ID No. ಸಂಖ್ಯೆಯನ್ನು ತಿಳಿಸಿರಿ ಹಾಗೂ ಜೊತೆಗೆ ನಿಮ್ಮ ದೂರವಾಣಿ ಸಂಖ್ಯೆಯನ್ನು ಸಹ ತಿಳಿಸಿರಿ

Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026

ಸತ್ಯವೇದದ ಪವಿತ್ರ ದೇಶವಾದ ಇಸ್ರಾಯೇಲ್ ವೀಕ್ಷಿಸಲು ಬನ್ನಿರಿ

# ಪವಿತ್ರ ದೇಶದ ಪ್ರವಾಸ

ಏಪ್ರಿಲ್ 7 ರಿಂದ 16 ರವರೆಗೆ

Bethlehem



ಕರ್ತನಾದ ಯೇಸು ಕ್ರಿಸ್ತನ ಪವಿತ್ರ ಪಾದಗಳು ನಡೆದಾಡಿದ
ಈ ಪುರಾತನ ಚರಿತ್ರಾರ್ಹ ಸ್ಥಳಗಳನ್ನು ಪ್ರಾರ್ಥನೆಯೊಂದಿಗೆ,
ಸತ್ಯವೇದಾಧ್ಯಯನದೊಂದಿಗೆ ಸಂದರ್ಶಿಸಲು...
ನಿಮಗೆ ಒಂದು ಸುಸಂದರ್ಭ



ಇಸ್ರಾಯೇಲ್ ಪಾಲೆಸ್ಟೈನ್
ಜೋರ್ಡಾನ್ ಐಗುಪ್ತ

**All Inclusive Package** Flight Ticket, Entrance Fees, Breakfast, Lunch, Dinner, Nile Cruise, Boat Ride, Superior Hotels, Professional Guide,










ಈ ಪ್ರವಾಸ ಸುಕ್ಷೇಮವಾಗಿ
ಕೂಡಿರಲೆಂದು ಪ್ರಾರ್ಥಿಸಿರಿ




ಈ ಪ್ರವಾಸದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ನಮ್ಮ ಕಛೇರಿಯನ್ನು ಸಂಪರ್ಕಿಸಿರಿ

Anudhinada Ahara
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
E-mail: goldenbibletext@gmail.com

Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047